ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಜಯತೀರ್ಥ ರಾಜ ಪುರೋಹಿತ

ಡಾ. ಬಸವರಾಜ ಸಬರದ

ಕನ್ನಡ ಪುಸ್ತಕ ಪ್ರಾಧಿಕಾರ

ಜಯತೀರ್ಥ ರಾಜಪುರೋಹಿತ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಜಯತೀರ್ಥ ರಾಜಪುರೋಹಿತ

ಡಾ. ಬಸವರಾಜ ಸಬರದ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**JAYATEERTHA RAJPUROHIT** A Monograph on Jayateertha Rajpurohit in Kannada Written by:Dr. **BASAVARAJ SABARAD**, Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xx + 76
Copies : 1000
Price : ₹ 50.00

ಮೊದಲ ಮುದ್ರಣ : ೨೦೧೨
ಪುಟಗಳು : xx + ೭೬
ಪ್ರತಿಗಳು : ೧೦೦೦
ಬೆಲೆ : ₹ ೫೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ૩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.



(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲುವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ನುಡಿ

"ಕನ್ನಡ ಕಟ್ಟಿದವರು"– ಮಾಲಿಕೆಯಡಿಯಲ್ಲಿ "ಜಯತೀರ್ಥ ರಾಜಪುರೋಹಿತ" ಕೃತಿ ರಚಿಸಲು ಪತ್ರ ಬರೆದ ನಾಡಿನ ಖ್ಯಾತ ಕವಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರಿಗೆ, ಈ ಸಮಿತಿ ಸದಸ್ಯರಾದ ಡಾ. ಎಚ್.ಟಿ. ಪೋತೆಯವರಿಗೆ ಕೃತಜ್ಞತೆಗಳು.

ಜಯತೀರ್ಥರಾಗಲಿ ಅವರ ಶ್ರೀಮತಿಯವರಾಗಲಿ ಈಗಿಲ್ಲ. ಹಟ್ಟಿ ಚಿನ್ನದಗಣಿಯಲ್ಲಿ ಅವರ ಮಗ ಅಧಿಕಾರಿಯಾಗಿದ್ದಾರೆ ಆದರೆ ಮಾಹಿತಿ ಸಂಗ್ರಹದ ಕಾರ್ಯ ಕಷ್ಟವೆನಿಸಿ ಈ ಕಾರ್ಯವನ್ನು ಕೈಬಿಡಬೇಕೆಂದುಕೊಂಡಿದ್ದೆ. ಅಷ್ಟರಲ್ಲಿ ಪ್ರೊ ವಸಂತ ಕುಷ್ಟಗಿಯವರು ಸಲಹೆ ಇತ್ತರು, ಡಾ. ಸ್ವಾಮಿರಾವ ಕುಲಕರ್ಣಿಯವರು, ಜಯತೀರ್ಥರ ಕೆಲವು ಪುಸ್ತಕಗಳನ್ನೊದಗಿಸಿ ಕೊಟ್ಟರು. ಈ ಕೃತಿ "ಜಯತೀರ್ಥ" ಅಭಿಂದನ ಗ್ರಂಥದಿಂದ ಬಹಳಷ್ಟು ವಿವರಗಳನ್ನು ಪಡೆದುಕೊಂಡಿದೆ. ಅಂತಹ ಕೃತಿಯನ್ನು ಗಂಗಾವತಿಯಿಂದ ತರಿಸಿಕೊಟ್ಟ ಶ್ರೀ ವೇಣುಗೋಪಾಲ ಜೋಷಿಯವರಿಗೆ, "ಜಯತೀರ್ಥ" ಅಭಿನಂದನ ಗ್ರಂಥದ ನೆರಳಚ್ಚು ಪ್ರತಿಯನ್ನು ಕಳಿಸಿಕೊಟ್ಟ ಶ್ರೀಮತಿ ಶಾರದಾ ತೇಜನಾರಾಯಣ ರಾಜಪುರೋಹಿತರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಇಷ್ಟಾದರೂ ಈ ಕೃತಿ ನನಗೆ ತೃಪ್ತಿ ತಂದಿಲ್ಲ. ಜಯತೀರ್ಥರ ಅನೇಕ ಕೃತಿಗಳು ಈಗ ದೊರೆಯುತ್ತಿಲ್ಲ. ಸರಕಾರವೇ ಅವರ ಸಮಗ್ರ ಕೃತಿಗಳನ್ನು ಪ್ರಕಟಿಸಬೇಕಾಗಿದೆ. ಈ ಕೃತಿ, ಜಯತೀರ್ಥರ ಕನ್ನಡದ ಅಭಿಮಾನ ಹಾಗೂ ಕ್ರಿಯಾಶೀಲತೆಯನ್ನು ಕಟ್ಟಿಕೊಡುವಲ್ಲಿ ಉಪಯುಕ್ತವಾಗಬಲ್ಲದೆಂದು ನಂಬಿದ್ದೇನೆ. ಓದುಗರ ಪ್ರತಿಕ್ರಿಯೆಗೆ ಸದಾ ಸ್ವಾಗತವಿದೆ.

**ಡಾ. ಬಸವರಾಜ ಸಬರದ**

# ಪರಿವಿಡಿ


| | | |
|---|---|---|
| | ಪ್ರಾಸ್ತಾವಿಕ | xvii |
| ೧. | ಬಾಲ್ಯ – ಪ್ರಾಥಮಿಕ ಶಿಕ್ಷಣ | ೧ |
| ೨. | ಮದುವೆ – ಸಂಸಾರ – ಉನ್ನತ ಶಿಕ್ಷಣ | ೫ |
| ೩. | ಚಳುವಳಿ | ೧೦ |
| ೪. | ಕನ್ನಡ ಕಟ್ಟಿದ ಪ್ರಸಂಗಗಳು | ೧೫ |
| | ಅ) ಆಡಳಿತ ಕನ್ನಡ | |
| | ಆ) ಕನ್ನಡ ತೀರ್ಪುಗಳು | |
| | ಇ) ಕನ್ನಡಪರ ಹೇಳಿಕೆಗಳು | |
| | ಈ) ಕನ್ನಡಪ್ರೇಮ ಕುರಿತಂತೆ ವಿದ್ವಾಂಸರ ಅಭಿಪ್ರಾಯಗಳು | |
| ೫. | ಸಾಹಿತ್ಯಕ ಸಾಧನೆ | ೪೧ |
| ೬ | ಸಾಂಸ್ಕೃತಿಕ ಕೊಡುಗೆ | ೫೬ |
| ೭ | ಸಮಾರೋಪ | ೬೧ |
| ೮. | ಅನುಬಂಧ | ೬೮ |
| | ಅ) ಪ್ರಶಸ್ತಿ ಪತ್ರಗಳು | |
| | ಆ) ಪ್ರಕಟಿತ ಕೃತಿಗಳು | |
| | ಇ) ಪ್ರಕಟಿತ ಲೇಖನಗಳು | |

# ಪ್ರಾಸ್ತಾವಿಕ

ಸ್ವಾತಂತ್ರ್ಯ ಹೋರಾಟ-ವಿಮೋಚನಾ ಚಳುವಳಿಯ ಹಾಗೆ ಭಾಷಾ ಚಳುವಳಿಯೂ ಕೂಡ ಮುಖ್ಯವಾದುದಾಗಿದೆ. ಕನ್ನಡ ಭಾಷೆಯಿಲ್ಲದ – ಕನ್ನಡ ಸಂಸ್ಕೃತಿಯಿಲ್ಲದ ನೆಲ ಪಾಳು ನೆಲವಾಗಿ ಬಿಡುತ್ತದೆ. ಈ ಅರಿವು ಪ್ರತಿಯೊಬ್ಬ ಕನ್ನಡಿಗರಿಗೂ ಇರಬೇಕಾಗುತ್ತದೆ. ಕನ್ನಡ ನೆಲ-ಜಲ-ಭಾಷೆ ಪ್ರತಿಯೊಬ್ಬ ಕನ್ನಡಿಗರ ಸ್ವತ್ತು. ಅದನ್ನು ಮುಂದಿನ ಜನಂಗಕ್ಕಾಗಿ ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ.

ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಕನ್ನಡ ಕಟ್ಟುವದು ಇನ್ನೂ ಮುಖ್ಯವಾದ ಕಾರ್ಯವಾಗಿದೆ. ಒಂದು ಕಡೆ ಮಹಾರಾಷ್ಟ್ರ, ಮತ್ತೊಂದು ಕಡೆ ಆಂಧ್ರ ರಾಜ್ಯಗಳ ಗಡಿಗುಂಟ ಇರುವ ಈ ಪ್ರದೇಶದಲ್ಲಿ ಕನ್ನಡ ಜ್ಯೋತಿಯನ್ನು ಬೆಳಗಿಸಬೇಕಾದುದು ಎಲ್ಲ ಕನ್ನಡಿಗರ ಕರ್ತವ್ಯವಾಗಿದೆ. ಕರ್ನಾಟಕದ ಉಳಿದ ಪ್ರದೇಶ ಆಗಸ್ಟ್ – ೧೫, ೧೯೪೭ರಲ್ಲಿ ಸ್ವಾತಂತ್ರ್ಯ ಪಡೆದರೆ, ಹೈದ್ರಾಬಾದ್ ಕರ್ನಾಟಕ ಪ್ರದೇಶ ಸಪ್ಟೆಂಬರ್ –೧೭, ೧೯೪೮ರಲ್ಲಿ ವಿಮೋಚನೆ ಹೊಂದಿದೆ. ಹೈದ್ರಾಬಾದ ನಿಜಾಮನ ಆಡಳಿತದಿಂದ ವಿಮೋಚನೆಗೊಳ್ಳಬೇಕಾದರೆ ಈ ಪ್ರದೇಶದಲ್ಲಿ ಹಲವಾರು ಹೋರಾಟಗಳೇ ನಡೆದಿವೆ. ಅದೇ ರೀತಿ ಕನ್ನಡ ಭಾಷೆ-ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಇಂದಿಗೂ ಹೋರಾಟಗಳು ನಡೆಯುತ್ತಲೇ ಇವೆ.

ಇಪ್ಪತ್ತನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಬೀದರ, ಕಲಬುರ್ಗಿ (ಗುಲಬರ್ಗಾ), ರಾಯಚೂರ, ಕೊಪ್ಪಳ ಜಿಲ್ಲೆಗಳು ನಿಜಾಮನ ಆಡಳಿತಕ್ಕೊಳಪಟ್ಟಿದ್ದವು. ರಜಾಕಾರ ಹಾವಳಿ ತೀವ್ರವಾಗಿದ್ದ ಆ ಸಂದರ್ಭದಲ್ಲಿ ಹೈದ್ರಾಬಾದ ವಿಮೋಚನಾ ಚಳುವಳಿ ನಡೆದದ್ದು ಚಾರಿತ್ರಕ ದಾಖಲೆಯಾಗಿದೆ. ಬೀದರ ಜಿಲ್ಲೆಯ ಭಾಲ್ಕಿ ಚೆನ್ನಬಸವ ಪಟ್ಟದೇವರು, ಶ್ರೀ ಪ್ರಭುರಾವ ಕಂಬಳಿವಾಲೆ, ಗುಲಬರ್ಗಾ ಜಿಲ್ಲೆಯ ರಮಾನಂದ ತೀರ್ಥರು, ಸರ್ದಾರ ಶರಣಗೌಡ ಪಾಟೀಲರು, ಆಗಿನ ರಾಯಚೂರ ಜಿಲ್ಲೆಯ ಅಗಡಿ ಸಂಗಣ್ಣ, ಅಳವಂಡಿ ಶಿವಮೂರ್ತಿಸ್ವಾಮಿ, ಕೊಲ್ಲೂರ ಭೀಮಪ್ಪ ಈ ಮೊದಲಾದ ಮುಖಂಡರು ಹೈದ್ರಾಬಾದ ಕರ್ನಾಟಕ ವಿಮೋಚನೆಗಾಗಿ ನಿರಂತರ ಹೋರಾಡಿದರು.

ಈ ಸಂದರ್ಭದಲ್ಲಿ ಮತ್ತು ವಿಮೋಚನೆಯ ಸಂದರ್ಭದಲ್ಲಿ ಕನ್ನಡ ಕಟ್ಟಲು ಪ್ರಯತ್ನಿಸಿದ ಈ ಪ್ರದೇಶದ ಪ್ರಮುಖ ಅಧಿಕಾರಿಗಳೆಂದರೆ ಸಿದ್ಧಯ್ಯ ಪುರಾಣಿಕ ಹಾಗೂ ಜಯತೀರ್ಥ ಪುರೋಹಿತ. ಇಬ್ಬರೂ ಐ.ಎ.ಎಸ್ ಶ್ರೇಣಿಯ ಅಧಿಕಾರಿಗಳು, ಇವರಿಬ್ಬರೂ ಅಂದಿನ ರಾಯಚೂರ ಜಿಲ್ಲೆಯಲ್ಲಿ ಜನಿಸಿದ ಅಧಿಕಾರಿಗಳು. ಸ್ವಾತಂತ್ರ್ಯ ಪೂರ್ವದಲ್ಲಿ ಹೀಗೆ ಕನ್ನಡ ಕಟ್ಟುವ ಕಾರ್ಯದಲ್ಲಿ ನೆರವಾದವರೆಂದರೆ ಫ್ಲೀಟ್–ರೈಸ್‌ರಂತಹ ಬ್ರಿಟೀಷ್ ಸರಕಾರದ ಅಧಿಕಾರಿಗಳು. ಕನ್ನಡ ಕಟ್ಟುವುದು ದೂರವೇ ಉಳಿಯಿತು. ಕನ್ನಡದಲ್ಲಿ ಮಾತನಾಡದ – ಕನ್ನಡ ಬಳಸದ ಇಂದಿನ ಎಷ್ಟೋ ಅಧಿಕಾರಿಗಳು ಕರ್ನಾಟಕದಲ್ಲಿದ್ದಾರೆ. ಅಂತವರಿಗೆಲ್ಲ ಪುರಾಣಿಕ – ಪುರೋಹಿತರಂತಹ ಹಿರಿಯ ಶ್ರೇಣಿಯ ಅಧಿಕಾರಿಗಳು ಮಾದರಿಯಾಗಿದ್ದಾರೆ. ಹೀಗಾಗಿ ಕನ್ನಡ ಕಟ್ಟಿದವರು ಮಾಲಿಕೆ ಕೇವಲ ಕನ್ನಡ ಕಟ್ಟಿದವರನ್ನು ಸ್ಮರಿಸುವದಕ್ಕಲ್ಲ ಅದರೊಂದಿಗೆ, ಕನ್ನಡಭಿಮಾನವಿರದ ಇಂದಿನ ಅನೇಕ ಅಧಿಕಾರಿಗಳಿಗೆ ಮಾರ್ಗದರ್ಶನವೂ ಆಗಿದೆ, ಮಾದರಿಯೂ ಆಗಿದೆ.

ಕೇವಲ ಸಾಹಿತ್ಯ ರಚನೆಯಿಂದ ಕನ್ನಡವನ್ನು ಬೆಳೆಸಲಾಗದು. ಮೊದಲು ಭಾಷೆ – ನಂತರ ಸಾಹಿತ್ಯ. ಭಾಷೆಯೇ ಇಲ್ಲವೆಂದ ಮೇಲೆ ಬರೆದ ಸಾಹಿತ್ಯವನ್ನು ಯಾರು ಓದಬೇಕು? ಸಂಸ್ಕೃತದಲ್ಲಿ ಅನೇಕ ಮಹತ್ವದ ಗ್ರಂಥಗಳಿವೆ, ಆದರೆ ಅದರಿಂದ ಸಾಮಾನ್ಯರಿಗೇನು ಪ್ರಯೋಜನ? ಸಂಸ್ಕೃತ ಇಂದು ಜೀವಂತ ಭಾಷೆಯಾಗಿಲ್ಲ. ಕನ್ನಡಿಗರ ಅಭಿಮಾನ ಶೂನ್ಯತೆಯಿಂದ ಮುಂದೆ ಕನ್ನಡಕ್ಕೂ ಈ ಗತಿ ಬರಬಹುದೆ? ಎಂಬ ಭಯ ಹುಟ್ಟುತ್ತದೆ. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಂತೂ ಇಂದು ಕನ್ನಡವನ್ನಾಡುವವರ ಸಂಖ್ಯೆ, ಓದುವವರ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಜಾಗತೀಕರಣ ತೀವ್ರಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕನ್ನಡ ದೂರವಾಗುತ್ತಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಹಿಂದೆ ಕನ್ನಡ ಕಟ್ಟಿ ಬೆಳೆಸಿದವರಲ್ಲಿ ಜಯತೀರ್ಥ ರಾಜಪುರೋಹಿತರು ನೆನಪಾಗುತ್ತಾರೆ.

"ಬೆಳೆವ ಸಿರಿ ಮೊಳಕೆಯಲ್ಲಿ ನೋಡು"–ಎಂಬ ಗಾದೆಯಂತೆ, ವ್ಯಕ್ತಿಯ ಬಾಲ್ಯ ಜೀವನಕ್ಕೆ ತುಂಬ ಪ್ರಾಮುಖ್ಯತೆಯಿದೆ. ಬಾಲ್ಯ ಜೀವನದಲ್ಲಾಗುವ ಪ್ರಭಾವ – ಪ್ರೇರಣೆಗಳು, ಆಚರಿಸುವ ಆಚರಣೆಗಳು, ಜಾತ್ರೆ – ಹಬ್ಬಗಳು ಈ ಮುಂತಾದ ಬಾಲ್ಯದ ಸ್ಮೃತಿಗಳು ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಬಾಲ್ಯದ ಸಂಸ್ಕಾರ ಬಹು ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಯತೀರ್ಥ ರಾಜಪುರೋಹಿತರ ಬಾಲ್ಯ ಜೀವನ ಗಮನಿಸುವಂತಿದೆ. ಕ್ರಿ.ಶ. ೧೯೮೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಜಯತೀರ್ಥ ರಾಜಪುರೋಹಿತರು ಗುಲಬರ್ಗಾ ವಿಶ್ವವಿದ್ಯಾಲಯದ

ವಿಶೇಷಾಧಿಕಾರಿಗಳಾಗಿದ್ದರು. ಆಗ ನಾನು ಬೀದರ ಜಿಲ್ಲೆಯ ಔರಾದ ಅಮರೇಶ್ವರ ಪದವಿ ಕಾಲೇಜಿನ ಸಂಸ್ಥಾಪಕ ಪ್ರಾಚಾರ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಪದವಿ ಕಾಲೇಜುಗಳ ಪ್ರಿನ್ಸಿಪಾಲರುಗಳ ಸಭೆ ಕರೆದಾಗ ನಾನೂ ಭಾಗವಹಿಸುತ್ತಿದ್ದೆ. ಆ ಸಂದರ್ಭದಲ್ಲಿಯೇ ಜಯತೀರ್ಥರ ಮೊದಲ ಭೇಟಿಯಾಯಿತು. ಔರಾದ ಪದವಿ ಕಾಲೇಜಿನಲ್ಲಿ ನಾನು ಎರಡು ವರ್ಷ ಪ್ರಿನ್ಸಿಪಾಲನಾಗಿದ್ದಾಗ, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕಾರ್ಯ ನಿಮಿತ್ತ ಬಂದಾಗಲೆಲ್ಲ ಪುರೋಹಿತರನ್ನು ಭೇಟಿಯಾಗುತ್ತಿದ್ದೆ. ಆಗ ಕೊಪ್ಪಳ ಪ್ರತ್ಯೇಕ ಜಿಲ್ಲೆಯಾಗಿರಲಿಲ್ಲ. ಕನಕಗಿರಿ ಪುರೋಹಿತರ ಊರು, ಕುಕನೂರು ನನ್ನೂರು ಇವೆರಡೂ ಸ್ಥಳಗಳು ರಾಯಚೂರ ಜಿಲ್ಲೆಗೆ ಸೇರಿದ್ದವು. ಈಗ ಇವೆರಡೂ ಕೊಪ್ಪಳ ಜಿಲ್ಲೆಯಲ್ಲಿವೆ. ನಾನೂ ಕೂಡ ಅಂದಿನ ರಾಯಚೂರ ಜಿಲ್ಲೆಯವನೆಂಬ ಅಭಿಮಾನದಿಂದ ಪುರೋಹಿತರು ನನ್ನೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದರು.

"ನೀನೂ, ನನ್ನ ಜಿಲ್ಲೆಯವನಪ್ಪ, ನಿನ್ನ ಮೇಲೆ ಬಹಳಷ್ಟು ಜವಾಬ್ದಾರಿಯಿದೆ. ನಿನ್ನ ಕವಿತೆಗಳನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ" ಎಂದು ಪುರೋಹಿತರು ನನ್ನ ಬಗೆಗೆ ಪ್ರೀತಿ – ಅಭಿಮಾನ ವ್ಯಕ್ತಪಡಿಸುತ್ತಿದ್ದರು. ಆದರೆ ನನಗೆ ಅವರ ಬಗೆಗೆ ಅಷ್ಟೊಂದು ಗೌರವವಿರಲಿಲ್ಲ.

ಅದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸಮುದಾಯ, ಬಂಡಾಯ, ದಲಿತ ಸಂಘಟನೆಗಳು ಹುಟ್ಟಿಕೊಂಡಿದ್ದವು. ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ಬೆಳೆದ ನನ್ನಂತವರಿಗೆ ಐ.ಎ.ಎಸ್‌ಅಧಿಕಾರಿಗಳ ಬಗ್ಗೆ, ಅದರಲ್ಲೂ ವೈದಿಕ ಸಂಪ್ರದಾಯದಿಂದ ಬಂದ ಅಧಿಕಾರಿಗಳ ಬಗೆಗೆ ಅಷ್ಟೊಂದು ಗೌರವ ಇರುತ್ತಿರಲಿಲ್ಲ. ಹೀಗಾಗಿ ನಾನು ಆಗ ಪುರೋಹಿತರನ್ನು ಗುಮಾನಿಯಿಂದಲೇ ನೋಡುತ್ತಿದ್ದೆ. ವಿಶ್ವವಿದ್ಯಾಲಯದ ಎಂಬ್ಲಮ್ ಸಲುವಾಗಿ ವಿವಾದ ಪ್ರಾರಂಭವಾದಾಗ ನಾನು ಸಮುದಾಯದ ಗೆಳೆಯರ ಪರವಾಗಿದ್ದೆ. ಆ ಸಂದರ್ಭದಲ್ಲಿ ಪುರೋಹಿತರೊಂದಿಗೆ ಜಗಳ ಮಾಡಿದ್ದೂ ನೆನಪಿನಲ್ಲಿದೆ. ಹೀಗಾಗಿ ನಾನು ಆ ಸಂದರ್ಭದಲ್ಲಿ ಪುರೋಹಿತರೊಂದಿಗೆ ಹೆಚ್ಚು ಮಾತನಾಡುತ್ತಿರಲಿಲ್ಲ, ಅವರ ವ್ಯಕ್ತಿಗತ ಜೀವನದ ಬಗೆಗೆ ತಿಳಿದುಕೊಳ್ಳಲಿಕ್ಕೂ ಹೋಗಲಿಲ್ಲ. ಮುಂದೆ ೧೯೮೭ ರಲ್ಲಿ ನಾನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕನ್ನಡ ಪ್ರಾಧ್ಯಾಪಕನಾಗಿ ನೇಮಕಗೊಂಡು ಬಂದನಂತರ, ಪುರೋಹಿತರು ಅಲ್ಲಿರಲಿಲ್ಲ. ನನ್ನೊಂದಿಗೆ ನೇಮಕವಾಗಿ ಬಂದಿದ್ದ ಚೆನ್ನಣ್ಣ ವಾಲೀಕಾರ ಅವರು ಪುರೋಹಿತರ ಬಗೆಗೆ, ಅವರ ಸಾಹಿತ್ಯದ ಬಗೆಗೆ ನನ್ನಲ್ಲಿ ಆಸಕ್ತಿ ಮೂಡಿಸಿದರು. ಮುಂದೆ ಎನ್.ವಿ. ಕಾಲೇಜಿನಲ್ಲಿ ನಡೆದ ಅವರ ಸಾಹಿತ್ಯ ಕುರಿತ ವಿಚಾರ ಸಂಕಿರಣದಲ್ಲಿ ನಾನು "ಜೊಹರಾ" ಕಾದಂಬರಿಯ ಬಗೆಗೆ ಮಾತನಾಡಿದ್ದೆ. ಅದನ್ನು ಪುರೋಹಿತರು ಮೆಚ್ಚಿಕೊಂಡಿದ್ದರು.

ನಮ್ಮ ಹತ್ತಿರವಿದ್ದ ಈ ಹಿರಿಯರ ಹತ್ತಿರ ಆಗ ನಾವು ಹೋಗಲಿಲ್ಲ. ಈಗವರು ನಮ್ಮಲ್ಲಿಲ್ಲ. ಅವರ ಹುಟ್ಟೂರಿನಲ್ಲೂ ಈಗ ಅವರ ಬಗೆಗೆ ಏನೂ ಸಿಗುವದಿಲ್ಲ. ಒಂದು ಸಮಾಧಾನದ ಸಂಗತಿಯೆಂದರೆ ಅವರ ಬಗೆಗೆ ಬಂದ "ಜಯತೀರ್ಥ" ಅಭಿನಂದನಾ ಗ್ರಥದಲ್ಲಿ "ಬದುಕು ಬೆಳಕು" ಎಂಬ ಪ್ರಾರಂಭದ ದೀರ್ಘ ಲೇಖನದಲ್ಲಿ ಪುರೋಹಿತರೇ ತಮ್ಮ ವ್ಯಕ್ತಿಜೀವನ ಕುರಿತು ವಿವರವಾಗಿ ಬರೆದಿದ್ದಾರೆ. ಅದನ್ನಾಧರಿಸಿಯೇ ಅವರ ಬಾಲ್ಯ ಜೀವನವನ್ನಿಲ್ಲಿ ಕಟ್ಟಿಕೊಡಲಾಗಿದೆ.

# ೧ ಬಾಲ್ಯ – ಪ್ರಾಥಮಿಕ ಶಿಕ್ಷಣ

ಕ್ರಿ.ಶ. ೧೯೨೫ರ ಆಷಾಢ ಬಹುಳ ಅಮವಾಸ್ಯೆ ಆದಿತ್ಯವಾರ ಅರ್ಧರಾತ್ರಿಯಲ್ಲಿ ಜಯತೀರ್ಥರು ಜನಿಸಿದರು. ಇವರ ತಂದೆಯವರ ಹೆಸರು ಶೇಷಾಚಾರ್ಯ, ತಾಯಿ – ರಂಗಮ್ಮ. ಇವರ ತಂದೆ ಮಳಖೇಡದಲ್ಲಿ ಜಯತೀರ್ಥರ ವೃಂದಾವನದ ಹತ್ತಿರ ಕೆಲವು ದಿನ ಪಾರಾಯಣ ಮಾಡಿದ್ದರಂತೆ. ಆ ಪ್ರಭಾವದಿಂದಲೇ ಇವರಿಗೆ ಜಯತೀರ್ಥ ಹೆಸರನ್ನಿಟ್ಟಿರಬೇಕೆನಿಸುತ್ತದೆ. "ಪುರೋಹಿತ" ಇವರ ಮನೆತನದ ಹೆಸರು. ವಿಜಯನಗರದ ಅರಸರಿಗೆ ಪಾಳೇಗಾರರಾಗಿ ಬೆಳೆದ ಕನಕಗಿರಿಯ ನಾಯಕರಿಗೆ ಇವರ ಪೂರ್ವಿಕರು ಪುರೋಹಿತರಾಗಿದ್ದರಂತೆ. ಹೀಗಾಗಿ ಇವರ ಮನೆತನಕ್ಕೆ ಪುರೋಹಿತ ಅಡ್ಡಹೆಸರಾಗಿ ಬಂದಿದೆ. ಆ ಕಾಲದಲ್ಲಿ ಇವರಿಗೆ ೨೦೦ ಎಕರೆ ಹೊಲಗಳಿದ್ದವೆಂದ ಮೇಲೆ ಜಯತೀರ್ಥರು ಶ್ರೀಮಂತ ಮನೆತನದಲ್ಲಿಯೇ ಹುಟ್ಟಿದ್ದರೆಂದು ಭಾವಿಸಬೇಕಾಗುತ್ತದೆ. ಇವರ ತಂದೆಯ ತಾಯಿ, ಅಂದರೆ ಇವರ ಅಜ್ಜಿ ಜೀವಮ್ಮ ಈ ಮನೆತನದ ಕೇಂದ್ರ ವ್ಯಕ್ತಿಯಾಗಿದ್ದರಂತೆ. ಈ ಅಜ್ಜಿ ಬಹಳಷ್ಟು ಚಿನ್ನ–ನಾಣ್ಯ ಹುಗಿದಿಟ್ಟಿದ್ದಾಳೆಂದು ಜನ ಆಡಿಕೊಳ್ಳುತ್ತಿದ್ದರಂತೆ. ಇಂತಹ ಅಜ್ಜಿಯ ಪ್ರೀತಿಯ ನಡುವೆ ಜಯತೀರ್ಥರು ಬೆಳೆದರು. ತಂದೆ – ತಾಯಿಗಳ ವಾತ್ಸಲ್ಯಕ್ಕೆ ಕಡಿಮೆಯಿರಲಿಲ್ಲ. ಜೋಯಿಸರ ತುಂಬು ಮನೆತನದಲ್ಲಿ ಬೆಳೆದ ಜಯತೀರ್ಥರ ಬಾಲ್ಯ ಜೀವನ ವರ್ಣಮಯವಾಗಿತ್ತು.

ತಂದೆ ಸಂಸ್ಕೃತ ವಿದ್ವಾಂಸರಾಗಿದ್ದರು, ಹೀಗಾಗಿ ಮಗನೂ ವೈದಿಕ ಸಂಸ್ಕೃತ ವಿದ್ವಾಂಸನಾಗಬೇಕೆಂಬುದು ತಂದೆಯ ಇಚ್ಛೆಯಾಗಿತ್ತು. ತಮ್ಮ ಬಾಲ್ಯ ಜೀವನವನ್ನು ಕುರಿತು ಜಯತೀರ್ಥರು ಹೀಗೆ ಬರೆದುಕೊಂಡಿದ್ದಾರೆ. "ಬಾಲ್ಯದಲ್ಲಿ ನಮ್ಮ ಅಜ್ಜಿ ಮುದ್ದಿನಿಂದ ತಿನ್ನಿಸುತ್ತಿದ್ದ ಬೆಣ್ಣೆ, ನನ್ನ ಸೋದರತ್ತೆಯ ಮಗಳು ರಮಾನೊಂದಿಗೆ ಆಡುತ್ತಿದ್ದ ಆಟಗಳು, ಮನೆಯಲ್ಲಿ ಸಂಜೆ ನಡೆಯುತ್ತಿದ್ದ ಭಜನೆ, ಏಳು ಮೈಲಿಗಳ ದೂರದಲ್ಲಿ ಇರುವ ಹುಲಿಹೈದರ, ಅಲ್ಲಿಯ ಚೆಲುವೆ ರಾಣಿ ಗೌರಮ್ಮ, ಆಕೆ ನನಗೆ ಕೊಡುತ್ತಿದ್ದ ಬೇಸನ್ ಉಂಡಿ, ನಮ್ಮ ಅಕ್ಕರೆಯ ಶೀನಪ್ಪ ಮಾವ, ಸೋದರತ್ತೆ ಶೇಷಮ್ಮ, ಅವರ ಧೀರಮಗ ಧೀರೇಂದ್ರ, ಅಲ್ಲಿಯ ಮಾವಿನ ಹಣ್ಣಿನ ಸುಗ್ಗಿ, ನಮ್ಮೂರ ಗರುಡೋತ್ಸವದ ದೀವಟಿಗೆಗಳು, ಕನಕಗಿರಿಯ ಜಾತ್ರೆ, ಹುರ್ರೆ ಕುಣಿತ,

ದೇವರ ಬಸವಿಯರು ಇವೆಲ್ಲವುಗಳ ನೆನಪಿರುವಂತೆ, ಅಪ್ಪ ನನಗೆ ಆರೇಳನೆಯ ವಯಸ್ಸಿನಲ್ಲಿಯೇ ಕಲಿಸುತ್ತಿದ್ದ ಸಂಸ್ಕೃತ ಶ್ಲೋಕಗಳೂ, ದಾಸರ ಹಾಡುಗಳೂ, ಮಣಿಮಂಜರಿ ಮೊದಲಾದ ಕಾವ್ಯಗಳ ಪಾಠಗಳೂ ಅವನ್ನು ಸರಿಯಾಗಿ ಮಾಡದಿದ್ದಾಗ ತಿನ್ನುವ ಏಟುಗಳೂ ನೆನಪಿವೆ."

("ಜಯತೀರ್ಥ" – ಅಭಿನಂದನ ಗ್ರಂಥ, ಪುಟ : ೬)

ಜಯತೀರ್ಥರಿಗೆ ಓ ನಾಮ ತೀಡಿಸಿದ ಮೊದಲ ಗುರುಗಳೆಂದರೆ ಬಸಲಿಂಗಯ್ಯನವರು. ಫಕೀರ್ ಸಾಹೇಬರು ಉರ್ದು ಕಲಿಸುತ್ತಿದ್ದರು, ಸಂಗಪ್ಪ ಹೆಡ್‌ಮಾಸ್ತರ್ ಇಂಗ್ಲೀಷ ಕಲಿಸುತ್ತಿದ್ದರು. ಎರಡನೇ ಕ್ಲಾಸಿನಿಂದ ನಾಲ್ಕನೇ ಕ್ಲಾಸಿಗೆ ಪ್ರಮೋಷನ್ ಮತ್ತೆ ನಾಲ್ಕನೇ ಕ್ಲಾಸಿನಿಂದ ಒಮ್ಮಲೇ ಆರನೇ ಕ್ಲಾಸಿಗೆ ಪ್ರಮೋಷನ್ ಹೀಗೆ ಬೇಗ ಬೇಗನೇ ಇವರು ಪ್ರಾಥಮಿಕ ಶಿಕ್ಷಣವನ್ನು ಕನಕಗಿರಿಯಲ್ಲಿ ಮುಗಿಸಿ, ಮಿಡ್ಲಸ್ಕೂಲ್ ಕಲಿಯಲು ಗಂಗಾವತಿಗೆ ಹೋದರು. ಆಗ ಇವರಿಗೆ ಕೇವಲ ಹತ್ತು ವರ್ಷ ವಯಸ್ಸು. ಹನ್ನೆರಡು ವರ್ಷ ತುಂಬುವದರೊಳಗೆ ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ, ಮಧ್ವವಿಜಯ, ಮಣಿಮಂಜರಿ ಈ ಮುಂತಾದ ಕಾವ್ಯಗಳನ್ನು, ಲಘು ವ್ಯಾಕರಣಗಳನ್ನು ಕಲಿತು ಬಿಟ್ಟಿದ್ದರು. ಇವರ ತಂದೆಗೆ ಸಿಟ್ಟು ಹೆಚ್ಚು, ಪಾಠ ತಪ್ಪಿದಾಗ ಹೊಡೆಯುತ್ತಿದ್ದರಂತೆ, ಆದರೆ ಅವರ ಪಾಠ ಹೇಳುವ ಕ್ರಮ ಚೆನ್ನಾಗಿತ್ತೆಂದು ಜಯತೀರ್ಥರು ಬರೆದುಕೊಂಡಿದ್ದಾರೆ. ಪದಹಾಡಲು, ಉಪನ್ಯಾಸ ನೀಡಲು ಪ್ರಾರಂಭದ ಹಂತದಲ್ಲಿಯೇ ತಂದೆ ಪ್ರೋತ್ಸಾಹಿಸುತ್ತಿದ್ದರೆಂದು ನೆನಪು ಮಾಡಿಕೊಂಡಿದ್ದಾರೆ.

ಅನಾರೋಗ್ಯದ ಕಾರಣ ಜಯತೀರ್ಥರಿಗೆ ಮಿಡ್ಲ ಸ್ಕೂಲ್ ಪರೀಕ್ಷೆಯನ್ನು ಪಾಸುಮಾಡಲಾಗಲಿಲ್ಲ. ಮುಂದೆ ಕೊಪ್ಪಳಕ್ಕೆ ಹೋಗಿ, ತರ್ಕ–ವೇದಾಂತ ಶಾಸ್ತ್ರಗಳಲ್ಲಿ ಖ್ಯಾತ ವಿದ್ವಾಂಸರಾಗಿದ್ದ ಹುಲಗಿ ಹುಚ್ಚಾಚಾರ್ಯರಲ್ಲಿ ಶಾಸ್ತ್ರಾಧ್ಯಯನ ಪ್ರಾರಂಭಿಸಿದರು. ಆಚಾರ್ಯರ ಮನೆಯಲ್ಲಿಯೇ ಊಟ, ಹನುಮದೇವರ ಗುಡಿಯ ಪೌಳಿಯೊಳಗಿದ್ದ ದೊಡ್ಡ ಕೋಣೆಯೇ ಇವರ ಪಾಠಶಾಲೆ ಹಾಗೂ ವಿಶ್ರಾಂತಿ ಗೃಹವಾಗಿತ್ತು.

ಶಾಸ್ತ್ರಾಧ್ಯಯನದ್ದು ನಿಯಮಗಳಿಂದ ಕೂಡಿದ ಜೀವನ. ಬೆಳಿಗ್ಗೆ ತಣ್ಣೀರ ಸ್ನಾನ, ಸಂಧ್ಯಾವಂದನೆ, ಹಾಲಿನ ಸೇವನೆ, ಪಾಠ–ಪ್ರವಚನ–ಚಿಂತನ. ಹೀಗೆ ಯಾಂತ್ರಿಕವಾಗಿದ್ದ ಈ ಜೀವನಶೈಲಿ ಜಯತೀರ್ಥರಿಗೆ ಬೇಸರವಾಯಿತು. ೧೯೩೩–೩೪ರ ಆ ಸಂದರ್ಭದಲ್ಲಿ ಭಾರತದಲ್ಲೆಲ್ಲ ರಾಜಕೀಯ ಗಾಳಿ ಬೀಸಲು ಪ್ರಾರಂಭವಾಗಿತ್ತು. ಸಾಯಂಕಾಲದ ತಿರುಗಾಟದಲ್ಲಿ ಗೆಳೆಯರು ಚರ್ಚಿಸುತ್ತಿದ್ದ

ರಾಜಕೀಯ ವರದಿಗಳು ಇವರಲ್ಲಿ ಕುತೂಹಲ ಕೆರಳಿಸಿದವು. ಇವರ ಇತರ ಗೆಳೆಯರು ಕ್ರಾಪು ಹಾರಿಸುತ್ತ, ಗುರುರಾಜ ಹೋಟೆಲ್ ಹೊಕ್ಕು, ಮನಸ್ಸಿಗೆ ಬಂದದ್ದನ್ನೆ ತಿಂದು ಹೊರ ಬರುತ್ತಿದ್ದುದನ್ನು ಕಂಡು ಜಯತೀರ್ಥರಿಗೆ ಹೊಟ್ಟೆಕಿಚ್ಚಾಗುತಿತ್ತಂತೆ. ತಾನೂ ಕೂಡ ಅವರಂತೆ ಕ್ರಾಪು ಬಿಡಬೇಕು, ಹೋಟೆಲ್‌ಗಳಲ್ಲಿ ತಿನ್ನಬೇಕೆಂದನಿಸುತಿತ್ತಂತೆ. ಈ ಆಸೆ ಅತಿಯಾದಾಗ ತಮ್ಮ ಚಿಕ್ಕ ಗೆಳೆಯನಿಂದ ಹೋಟೆಲ್‌ದಿಂದ ಉಪ್ಪಿಟ್ಟು ತರಿಸಿ ತಿಂದಿದ್ದರಂತೆ. ಇಂಥ ವ್ಯವಸ್ಥೆಯಲ್ಲಿಯೇ ಐದು ವರ್ಷ ತರ್ಕಶಾಸ್ತ್ರದ ಅಧ್ಯಯನ ಮಾಡಿದರು. ಆದರೆ ವಯಸ್ಸಿಗೆ ಸಹಜವಾದ ತಳಮಳ ಹೆಚ್ಚಾಗ ತೊಡಗಿತು. ಹರಿಕಥೆಯಿಂದ ವೈಚಾರಿಕತೆಗೆ ಮನಸ್ಸುವಾಲಿತು. "ಈ ಸಂಸ್ಕೃತ ವಿದ್ಯೆ ನನಗೆ ಬೇಕಿಲ್ಲ"ವೆಂದು ಒಂದು ರಾತ್ರಿ ಪತ್ರ ಬರೆದು ಆಚಾರ್ಯರಿಗೆ ಕೊಡಲು ಸಹಪಾಠಿಯಲ್ಲಿ ಪತ್ರ ನೀಡಿ ರಾತ್ರಿ ರೈಲಿಗೆ ಟಿಕೆಟ್ ತೆಗೆದುಕೊಂಡು ರಾಯಚೂರಿಗೆ ಹೋಗಿಬಿಟ್ಟರು.

ರಾಯಚೂರಿನಲ್ಲಿ ತಮ್ಮ ಬಂಧುಗಳ ಹತ್ತಿರ ತಾತ್ಕಾಲಿಕ ಆಶ್ರಯ ಪಡೆದ ಜಯತೀರ್ಥರು ತಮ್ಮ ಮುಂದಿನ ಜೀವನದ ಬಗೆಗೆ ಚಿಂತಿಸಿದರು. ಸಂಗೀತದ ಅಧ್ಯಯನ ಮಾಡಲು ಬಡೋದಗೆ ಹೋದರೆ ಹೇಗೆ? ಅಥವಾ ಚಿತ್ರರಂಗ ಸೇರಿದರೆ ಹೇಗೆ? ಹೀಗೆ ಹತ್ತಾರು ವಿಚಾರಗಳು ಬಂದು ಹೋದವು. ಕೈಯಲ್ಲಿ ಕಾಸಿರಲಿಲ್ಲವಾದ್ದರಿಂದ, ಬೆರಳಲ್ಲಿದ್ದ ಚಿನ್ನದುಂಗರವನ್ನು ಒತ್ತೆಯಿಟ್ಟರು. ಹಣ ಸಂಪಾದನೆ ಮಾಡುವುದು ಅನಿವಾರ್ಯವಾಗಿತ್ತು. ಆದುದರಿಂದ ಗದ್ವಾಲ್ ರಾಜ ನಡೆಸುತ್ತಿದ್ದ ಸಭೆಗೆ ಮತ್ತು ಮಂತ್ರಾಲಯದಲ್ಲಿ ನಡೆಯುತ್ತಿದ್ದ ಆರಾಧನಾ ಸಭೆಗಳಿಗೆ ಹೋಗಲು ಪ್ರಾರಂಭಿಸಿದರು. ಅದರಿಂದ ಸ್ವಲ್ಪ ಹಣವೂ ಲಭಿಸಿತು. ಒಮ್ಮೆ ಮಂತ್ರಾಲಯಕ್ಕೆ ಹೋಗಿದ್ದರು. ಆಗ ಇವರ ತಂದೆಯವರು ಇವರನ್ನು ಹುಡುಕುತ್ತ ಮಂತ್ರಾಲಯಕ್ಕೆ ಬಂದಿದ್ದರು. ಹೀಗೆ ಮತ್ತೆ ತಂದೆಯ ಕೈಯಲ್ಲಿ ಸಿಕ್ಕುಬಿದ್ದರು. ಕೊಪ್ಪಳ ಬಿಟ್ಟು ಓಡಿ ಬಂದ ನಂತರ ಜಯತೀರ್ಥರು ಕ್ರಾಪ್‌ಕಟ್ ಮಾಡಿಸಿದರು. ಚಂಡಿಕೆ ಸೊರಗಿತ್ತು. ಇದನ್ನು ನೋಡಿದ ತಂದೆಗೆ ಸಿಟ್ಟು ಬಂತು, ಅವರ ಸ್ನೇಹಿತರಾಗಿದ್ದ ಪಂಡಿತ ವೆಂಕೋಬಾಚಾರ್ಯರು, ಜಯತೀರ್ಥರನ್ನು ಕರೆದು ಗದರಿಸಿದರು. ಹುಲಗಿ ಆಚಾರ್ಯರ ಶಿಷ್ಯನಾಗಿ ಹೀಗೆ ಕ್ರಾಪು ಬಿಡುವುದೇ? ಎಂದು ಗದರಿಸಿದಾಗ ಜಯತೀರ್ಥರು ಧೈರ್ಯದಿಂದಲೇ ಉತ್ತರ ನೀಡಿದರು. "ಸ್ವಾಮಿ, ಜ್ವರ ಬಂದಿತ್ತು ಬೋಳಿಸಬಾರದೆಂದು ಹೀಗೆ ಮಾಡಿದೆ, ಯಾಕೆ? ಕಟ್ ಮಾಡಿಸುವುದು ನಿಷಿದ್ಧವೆ?" ಎಂದು ಕೇಳಿದರು. ಆಗ ಪಂಡಿತ ವೆಂಕೋಬಾಚಾರ್ಯರಿಗೆ ಸಿಟ್ಟು ತಲೆಗೇರಿತು. "ಹೇ ರಂಡೇಗಂಡ? ಪಂಚ ಶಿಖಾಮುಂಡಯೇತ್ ಎಂದು ಶಾಸ್ತ್ರ ಹೇಳಿಲ್ಲವೇನೊ?" ಎಂದು ಗದರಿಸಿದರು. ಆಗ ಜಯತೀರ್ಥರು

ಸುಮ್ಮನಿರಲಿಲ್ಲ" ಸ್ವಾಮಿ ನಾನು ಬ್ರಹ್ಮಚಾರಿ, ನನಗೆ ಪಂಚಶಿಖಾಮುಂಡನ ಹೇಗೆ?" ಎಂದು ಪ್ರಶ್ನಿಸಿದರು. ಆಗ ಪಂಡಿತರು "ಥುತ್ ಹಾಳಾಗಿ ಹೋಗು, ಅಧಿಕ ಪ್ರಸಂಗಿ" ಎಂದು ಸುಮ್ಮನಾಗಿಬಿಟ್ಟರು. ಮಂತ್ರಾಲಯದಿಂದ ಕನಕಗಿರಿಗೆ ತಂದೆಯವರೊಂದಿಗೆ ವಾಪಸ್ ಬಂದರು.

■

## ೨. ಮದುವೆ – ಸಂಸಾರ – ಉನ್ನತ ಶಿಕ್ಷಣ

ಕನಕಗಿರಿಯಂಥ ದೊಡ್ಡ ಊರಿನ ಪೌರೋಹಿತ್ಯ, ಹೊಲ ಮನೆಗಳನ್ನು ನೋಡಿಕೊಳ್ಳಲಿ, ಇನ್ನು ಓದು ಸಾಕು ಎಂಬುದು ಜಯತೀರ್ಥರ ಅಜ್ಜಿಯ ಅಭಿಮತ. ಮಂತ್ರಾಲಯದಿಂದ ಕನಕಗಿರಿಗೆ ಬಂದ ಮೇಲೆ ಜಯತೀರ್ಥರು ಪೌರೋಹಿತ್ಯದ ಕೆಲಸ ಮಾಡಿದರು. ಆದರೆ ಅವರ ತಂದೆಗೆ ಮಗ ಪಂಡಿತನಾಗಬೇಕೆಂಬ ಹಂಬಲ. ಆದುದರಿಂದ ಮತ್ತೆ ಕೊಪ್ಪಳಕ್ಕೆ ಹೋಗಿ ಆಚಾರ್ಯರಲ್ಲಿ ಓದಲು ಕಳಿಸಿದರು. ಅನುವ್ಯಾಖ್ಯಾನ ಪ್ರಾರಂಭವಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಪಾಠ ಸಾಗಿತ್ತು. ಆಗ ಜಯತೀರ್ಥರು ಮಡಿಯ ಡಂಭಾಚಾರ ಟೀಕಿಸಿ ಒಂದು ಚಿಕ್ಕ ಪ್ರಹಸನ ಬರೆದರು.

ಈ ಕಡೆ, ಜಯತೀರ್ಥರ ಮದುವೆ ಮಾಡಬೇಕೆಂದು ಕನ್ಯಾ ನೋಡುವ ಕಾರ್ಯಕ್ರಮ ಪ್ರಾರಂಭವಾಗಿತ್ತು. ಆಗಿನ ಕಾಲದಲ್ಲಿ ತಂದೆ–ತಾಯಿ ನೋಡಿ ಒಪ್ಪಿದ ಕನ್ಯೆಯನ್ನೇ ಮದುವೆ ಮಾಡಿಕೊಳ್ಳುವ ಸಂಪ್ರದಾಯವಿತ್ತು. ಹೀಗಾಗಿ ಇವರ ಸೋದರತ್ತೆಯ ಚಿಕ್ಕ ಮಗಳನ್ನೇ ತರಬೇಕೆಂಬುದು ಅಜ್ಜಿಯ ಆಸೆಯಾಗಿತ್ತು. ಆದರೆ ತಂದೆಗೆ ಪ್ರತಿಷ್ಠಿತ ಮನೆತನದ ಸೊಸೆ ಬೇಕಾಗಿತ್ತು. ಕುಕನೂರಿನ ವಿದ್ಯಾನಂದ ಗುರುಕುಲದಲ್ಲಿ ಶಿಕ್ಷಕರಾಗಿದ್ದ ರಾಮಚಂದ್ರ ರಾವ್ ಪಟ್ವಾರಿಯವರ ಮಗಳ ಸಂಬಂಧದ ಬಗೆಗೂ ಪ್ರಸ್ತಾಪ ಬಂತು. ಆದರೆ ಜಯತೀರ್ಥರಿಗೆ ಈ ವಿಷಯ ತಿಳಿದ ನಂತರ, ಕನ್ಯ ನೋಡದೆ ನಾನು ಮದುವೆಯಾಗುವದಿಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟರು. "ಕನ್ಯೆಯನ್ನು ತಾನೇ ನೋಡುತ್ತಾನಂತೆ, ಇವನೊಬ್ಬ ಹೊಸ ಹಾದಿ ಹಾಕಿದ" ಎಂದು ಹಿರಿಯರು ಹುಬ್ಬೇರಿಸಿದರು. ಆದರೂ ಜಯತೀರ್ಥರ ಮಾತೇ ನಡೆಯಿತು. ಎಲ್ಲರೂ ಬಂಡಿ ಕಟ್ಟಿಕೊಂಡು ಕನಕಗಿರಿಯಿಂದ ಕುಕನೂರಿಗೆ ಹೋಗಿ ಕನ್ಯಾ ನೋಡಿ ಬಂದರು. ಅಡಿವೆಕ್ಕನ ಆತಿಥ್ಯದಲ್ಲಿ ಎಲ್ಲ ಮಾತುಕತೆಗಳು ಮುಗಿದವು.

ವರನಿಗೆ ನಾಲ್ಕು ನೂರು ರೂಪಾಯಿ ವರದಕ್ಷಿಣೆ ಕೊಡಬೇಕೆಂದು ಮಾತುಕತೆಯಾಯಿತು. ಆಗ ರಾಮಚಂದ್ರರಾವ್ ಪಟ್ವಾರಿಯವರು ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಬಿ.ಎ. ಮುಗಿಸಿ ಶಿಷ್ಯವೇತನ ಪಡೆದು

ಮೈಸೂರಿನಲ್ಲಿ ಕನ್ನಡ ಎಂ.ಎ ಮಾಡಲು ಹೋಗಿ ಬಂದಿದ್ದರು. ಅವರ ಮೂಲ ಊರು ಕುಕನೂರ ಹತ್ತಿರವಿರುವ ಒಂಕಲಕುಂಟೆ. ಎಂ.ಎ ಪಾಸಾದನಂತರ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇರಿಕೊಂಡರು. ಆಗ ಅವರ ತಮ್ಮಂದಿರು ಈ ಸಂಬಂಧ ಬಿಟ್ಟುಕೊಟ್ಟು, ಯಾವುದಾದರೂ ನೌಕರಿ ಮಾಡುವ ಸುಶಿಕ್ಷಿತ ಹುಡುಗನಿಗೆ ಮಗಳನ್ನು ಕೊಡಬೇಕೆಂದು ಸೂಚಿಸಿದರಂತೆ, ಆದರೆ ಪಟ್ವಾರಿಯವರು ಕೊಟ್ಟ ಮಾತಿಗೆ ತಪ್ಪಲಿಲ್ಲ. ಜಯತೀರ್ಥ–ಸೀತಾ ಅವರ ಮದುವೆ ಕನಕಗಿರಿಯ ಕನಕಾಚಲಸ್ವಾಮಿಯ ದೇವಸ್ಥಾನದಲ್ಲಿ ಎರಡು ದಿನಗಳ ಲಡ್ಡಿನ ಪ್ರಸ್ತದೊಂದಿಗೆ ನಡೆದುಹೋಯಿತು. ವರನಿಗೆ ಹದಿನೆಂಟು ತುಂಬಿರಲಿಲ್ಲ, ಕನ್ಯೆಗೆ ಹದಿನಾಲ್ಕು ದಾಟಿರಲಿಲ್ಲ. ಹೀಗಾಗಿ ಅದೊಂದು ಗೊಂಬೆಯ ಮದುವೆಯ ರೀತಿಯಲ್ಲಿ ನಡೆದು ಹೋಯಿತೆಂದು ಜಯತೀರ್ಥರು ಬರೆದಿದ್ದಾರೆ. ಆಗ ಜಯತೀರ್ಥರು ಏಳನೇ ಕ್ಲಾಸ್‌ದಲ್ಲಿ ಫೇಲಾದ ವ್ಯಕ್ತಿ, ಆದರೆ ಸೀತಾ ಏಳನೇ ಕ್ಲಾಸ್ ಪಾಸಾದ ಜಾಣೆ. ಮದುವೆಯ ಸಂದರ್ಭವನ್ನು ಜಯತೀರ್ಥರು ಹೀಗೆ ನೆನಪಿಸಿಕೊಳ್ಳುತ್ತಾರೆ.

"ಭೋಜನ ಕಾಲದಲ್ಲಿ ನಾನೇ ಶ್ಲೋಕಗಳನ್ನು ರಾಗವಾಗಿ ಹೇಳಿ ಪಕ್ಕದ ಪತ್ನಿಯನ್ನು ನೋಡಿದ್ದೆ. ಅವಳ ಕಣ್ಣು ಫಳಕ್ಕನೆ ಮಿಂಚಿದ್ದವು. ನನ್ನನ್ನು ಮೀರಿಸಲೆಂಬಂತೆ ಉರುಟಣೆಯ ಹಾಡುಗಳನ್ನು ಹಾಡಿದಳು. ಕೆಲವು ನನಗಿನ್ನೂ ನೆನಪಿವೆ"– (ಜಯತೀರ್ಥ–ಅಭಿನಂದನಗ್ರಂಥ, ಪುಟ:೧೫) ಎಂದು ಹೇಳಿಕೊಂಡಿದ್ದಾರೆ.

೧೯೪೮ ರ ಶ್ರಾವಣದಲ್ಲಿ ಮದುವೆಯಾಯಿತು. ಮದುವೆಯಾದ ಮರುದಿನ ಬೀಗರೂ–ಬಂಧುಗಳೂ ಮನೆಯಲ್ಲಿ ಸೇರಿದ್ದರು. ಆಗ ಇವರ ಮಾವ ರಾಮಚಂದ್ರ ಪಟ್ವಾರಿಯವರು ನೀವೇಕೆ ವಿದ್ಯೆ ಕಲಿಯಲಿಲ್ಲ? ಎಂದು ಪ್ರಶ್ನಿಸಿದರು. "ಕಲಿಯಬೇಕೆಂಬ ಇಚ್ಛೆಯಿದ್ದರೂ ತಂದೆಗೆ ಇಷ್ಟವಿರಲಿಲ್ಲ"ವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಪಟ್ವಾರಿಯವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಉಪನ್ಯಾಸಕರಾದ ಮೇಲೆ ಹೈದ್ರಾಬಾದ್‌ನಲ್ಲಿಯೇ ಮನೆ ಮಾಡಿದ್ದರು. ಹೇಗೂ ಹೈದ್ರಾಬಾದ್‌ದಲ್ಲಿ ತಮ್ಮ ಮನೆಯಿದೆ ನೀವು ವಿದ್ಯಾಭ್ಯಾಸ ಮುಂದುವರಿಸಬಹುದೆಂದು ಪಟ್ವಾರಿಯವರು ಹೇಳಿದ್ದು, ಜಯತೀರ್ಥರಿಗೆ ಹೋದ ಜೀವ ಬಂದಂತಾಯಿತು. ಅನಿವಾರ್ಯವಾಗಿ ತಂದೆ ಒಪ್ಪಿಗೆ ಕೊಟ್ಟರು. ಹೀಗೆ ಮದುವೆಯಾದ ನಂತರ ಇವರ ವಿದ್ಯಾಭ್ಯಾಸ ಪ್ರಾರಂಭವಾಯಿತು.

ಹೈದ್ರಾಬಾದ್‌ಗೆ ಹೋದ ಮಲೆ ಜಯತೀರ್ಥರ ಮನಸ್ಸಿನಲ್ಲಿದ್ದ ಆಸೆಯ ಗರಿಗಳು ಬಿಚ್ಚಿಕೊಂಡವು. ಸಿಕಂದ್ರಾಬಾದ್‌ನ ಒಂದು ವಠಾರದಲ್ಲಿ ಪಟ್ವಾರಿಯವರ

ಬಾಡಿಗೆ ಮನೆಯಲ್ಲಿ ವಾಸ. ಏಳನೇ ಕ್ಲಾಸ್ ಫೇಲಾದ ಇವರಿಗೆ ಅಸ್ವಾರುಲ್ ಉಲೂಮ್ ಎಂಬ ಮುಸ್ಲೀಂ ಸಂಸ್ಥೆಯ ಹೈಸ್ಕೂಲ್‌ಗೆ ಸೇರಿಸಿದರು. ಆದರೆ ಅಲ್ಲಿದ್ದ ಇವರ ಸಹಪಾಠಿಗಳು ಚಿಕ್ಕವರು. ಚಿಕ್ಕಹುಡುಗರ ಜತೆಗೆ, ಮದುವೆಯಾಗಿದ್ದ ಈ ಮಹಾಶಯರಿಗೆ ಕೂತು ಓದುವದು ನಾಚಿಕೆಯೆನಿಸಿತು. ಮಾವನಿಗೆ ಈ ವಿಷಯ ತಿಳಿಸಿದರು. ಇವರ ಮಾವನವರ ಮನೆಯ ಹತ್ತಿರವೇ ಪ್ರೊ. ಡಿ.ಕೆ. ಭೀಮಸೇನರಾಯರ ಮನೆ. ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಹಿರಿಯ ಉಪನ್ಯಾಸಕರು. ಮಾವನವರಾದ ಪಟ್ವಾರಿಯವರು, ಭೀಮಸೇನ ರಾಯರೊಂದಿಗೆ ಮಾತನಾಡಿ ಇದಕ್ಕೆ ಪರಿಹಾರ ಕಂಡುಕೊಂಡರು. ಖಾಸಗಿಯಾಗಿ ಅಭ್ಯಾಸ ಮಾಡಿಸಿ ಒಮ್ಮೆಲೇ ಮೆಟ್ರಿಕ್ ಪರೀಕ್ಷೆಗೆ ಕೂಡಿಸಬೇಕೆಂದು ನಿರ್ಧರಿಸಿದರು. ತಂದೆ ಕೊಡಿಸದ ವಿದ್ಯಾಭ್ಯಾಸವನ್ನು ಮಾವ ಕೊಡಿಸಿದರು. ೧೯೪೩ರಲ್ಲಿ ಬನಾರಸ್ಸಿಗೆ ಹೋಗಿ ಪರೀಕ್ಷೆಗೆ ಬರೆದರು. ಸಂಸ್ಕೃತ ಮತ್ತು ಕನ್ನಡದಲ್ಲಿ ವಿಶಿಷ್ಟ ಶ್ರೇಣಿಯೊಂದಿಗೆ ಮ್ಯಾಟ್ರಿಕ್ ಎರಡನೇ ದರ್ಜೆಯಲ್ಲಿ ಪಾಸಾಗಿದ್ದರು. ಮ್ಯಾಟ್ರಿಕ್ ಪಾಸಾದ ನಂತರ ಜಯತೀರ್ಥರು ಪತ್ನಿಯೊಂದಿಗೆ ಕನಕಗಿರಿಗೆ ಬಂದರು.

ಕನಕಗಿರಿಯಲ್ಲಿದೇ ಒಕ್ಕಲುತನ ಮಾಡಬೇಕೆಂದು ನಿರ್ಧರಿಸಿದರು. ಆದರೆ ಹಿಂದೆ ತಂದೆ ಎತ್ತು-ಬಂಡಿ ಇಟ್ಟು, ಒಕ್ಕಲುತನ ಮಾಡಿ ಹಾನಿಗೊಳಗಾದದ್ದು ನೆನಪಾಯಿತು. ಅಷ್ಟೊತ್ತಿಗೆ ಚೊಚ್ಚಲ ಮಗಳು ನಲಿನಿ ಜನಿಸಿದಳು. ಒಂದು ವರ್ಷದ ನಂತರ ಮಗುವಿಗೆ ಜ್ವರ ಬಂದು ಕೂಸು ಸತ್ತು ಹೋಯಿತು. ಕನಕಗಿರಿಯಲ್ಲಿರುವುದೇ ಬೇಡವೆಂದು ಜಯತೀರ್ಥ ದಂಪತಿಗಳು ಮತ್ತೆ ಹೈದ್ರಾಬಾದಿಗೆ ಹೊರಟರು.

ಹೈದ್ರಾಬಾದದ ನೃಪತುಂಗ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆಗೆ ಸೇರಿಕೊಂಡು ತಿಂಗಳಿಗೆ ಮೂವತ್ತು ರೂಪಾಯಿ ಸಂಬಳ ಜೊತೆಗೆ ಅಜಮೀರ್ ಬೋರ್ಡಿನ ಇಂಟರ್ ಪರೀಕ್ಷೆಗಾಗಿ ಅಭ್ಯಾಸ. ಶಿಕ್ಷಕ ಕೆಲಸ ಮಾಡುತ್ತಲೇ ಟ್ಯೂಷನ್ ಮೂಲಕ ಇಂಟರ್ ಪರೀಕ್ಷೆಯ ಸಿದ್ಧತೆ. ಇಂದೂರಿಗೆ ಹೋಗಿ ಪರೀಕ್ಷೆ ಕೊಟ್ಟು ಬಂದಾಯ್ತು. ಇಂಟರ್ ಪರೀಕ್ಷೆಯಲ್ಲಿಯೂ ಎರಡನೇ ದರ್ಜೆಯಲ್ಲಿ ತೇರ್ಗಡೆಯಾದರು. ಆಗ ನೃಪತುಂಗ ಶಾಲೆಯಲ್ಲಿ ಇವರಿಗೆ ಹದಿನೈದು ರೂಪಾಯಿ ಸಂಬಳ ಹೆಚ್ಚಿಸಿದರು. ಮಾವನ ಮೇಲೆ ಹೆಚ್ಚು ಭಾರ ಹಾಕುವುದು ಸರಿಯಲ್ಲವೆಂದು ಆಗ ಜಯತೀರ್ಥರು ಬೇರೆ ಮನೆ ಮಾಡಿದರು. ಇಂಟರ್ ಪರೀಕ್ಷೆ ಪಾಸಾದಾಗ ಇವರಿಗೆ ಮಗಳು ಜನಿಸಿದಳು, ಗೀತಾ ಎಂದು ಹೆಸರಿಟ್ಟರು. ೧೯೪೫ ರಲ್ಲಿ ಇಂಟರ್ ಪರೀಕ್ಷೆ ತೇರ್ಗಡೆ ಮತ್ತು ಗೀತಾಳ ಜನನ. ಹೀಗೆ ಜಯತೀರ್ಥರ ಸ್ವತಂತ್ರ ಸಂಸಾರ ಪ್ರಾರಂಭವಾಯಿತು. ಕನಕಗಿರಿಯಲ್ಲಿದ್ದ ಅಜ್ಜಿ ಆಗಲೇ ಕಣ್ಮುಚ್ಚಿದ್ದಳು. ಹೈದ್ರಾಬಾದ್‌ಗೆ ತಂದೆ- ತಾಯಿ-ತಮ್ಮನನ್ನು ಕರೆಸಿಕೊಂಡರು.

ಜಯತೀರ್ಥರಿಗೆ ಬಿ.ಎ. ಓದುವ ಹಂಬಲ. ಆದರೆ ಖಾಸಗಿಯಾಗಿ ಓದಲು ಸೌಲಭ್ಯವಿರಲಿಲ್ಲ. ಶಿಕ್ಷಕ ಕೆಲಸವನ್ನು ಬಿಡುವಂತಿರಲಿಲ್ಲ. ಆದರೂ ಓದಬೇಕೆಂಬ ಹಟ ಬೆಳೆಯ ತೊಡಗಿತು. ಹೆಂಡತಿ–ಮಗಳನ್ನು ಕನಕಗಿರಿಯಲ್ಲಿ ಬಿಟ್ಟು ಬಂದು ಉಸ್ಮಾನಿಯಾ ವಿಶ್ವವಿದ್ಯಾಲಯದ ಬಿ.ಎ ವರ್ಗಕ್ಕೆ ಪ್ರವೇಶ ಪಡೆದರು.

ಜಯತೀರ್ಥರು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಬಿ.ಎ. ವರ್ಗಕ್ಕೆ ಸೇರಿದಾಗ ಹಾಸ್ಟೆಲದಲ್ಲಿರುತ್ತಿದ್ದರು. ಇವರಿಗೆ ಪ್ರೊ. ಡಿ.ಕೆ. ಭೀಮಸೇನರಾಯರು, ಮಾವನವರಾಗಿದ್ದ ಪ್ರೊ. ಪಟ್ವಾರಿಯವರು ಕನ್ನಡ ಕಲಿಸುತ್ತಿದ್ದರು. ಪ್ರೊ. ವೀರಭದ್ರರು ಇಂಗ್ಲೀಷ ಕಲಿಸುತ್ತಿದ್ದರು. ರಾಘವೇಂದ್ರ ಇಟಗಿಯವರು ಇವರ ಸಹಪಾಠಿ ಯಾಗಿದ್ದರು. ಇದೇ ಅವಧಿಯಲ್ಲಿ ಡಾ. ವಿ.ಕೆ. ಗೋಕಾಕ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಇಂಗ್ಲೀಷ ಪ್ರಾಧ್ಯಾಪಕರಾಗಿ ಬಂದರು. ಅವರು ಬಂದ ಮೇಲೆ ಜಯತೀರ್ಥ ಮೊದಲಾದ ಸಹಪಾಠಿಗಳಿಗೆ ಒಂದು ಆಶಾಕಿರಣ ಮೂಡಿತು. ಗೆಳೆಯರೆಲ್ಲ ಸೇರಿ "ಜಿಜ್ಞಾಸು ಕೂಟ" ಕಟ್ಟಿಕೊಂಡು ಸಾಹಿತ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಜಯತೀರ್ಥರು ಬಿ.ಎ ಎರಡನೇ ತರಗತಿಗೆ ಬರುವ ಹೊತ್ತಿಗೆ ಪ್ರೋ. ಗೋಕಾಕರು ವೀಸ್‌ನಗರ ಕಾಲೇಜಿಗೆ ತೆರಳಿದರು. ನತರದ ದಿನಗಳಲ್ಲಿ ಹೈದ್ರಾಬಾದ ವಿಮೋಚನಾ ಚಳುವಳಿಗಳು ಪ್ರಾರಂಭವಾದವು. ೧೯೪೮ರಲ್ಲಿ ಪ್ರಥಮ ರ‍್ಯಾಂಕ್‌ದೊಂದಿಗೆ ಜಯತೀರ್ಥರು ಬಿ.ಎ ಪದವಿ ಪಡೆದರು. ರಾಜ ಪುರೋಹಿತ ಎಂದರೆ ಉರ್ದುವಿನಲ್ಲಿ ಷಾಹಿ ಮುಲ್ಲಾ ಎಂದರ್ಥವಾಗುತ್ತದೆ. ಹೀಗಾಗಿ ಕೆಲವು ಗೆಳೆಯರು ಅವರನ್ನು ಷಾಹಿ ಮುಲ್ಲಾ ಎಂದು ಕರೆಯುತ್ತಿದ್ದರು. ಬಿ.ಎ. ಪದವಿ ಪಾಸಾದ ನಂತರ ಕಾನ್ವೊಕೇಷನ್‌ದಲ್ಲಿ ಪದವಿ ಪಡೆಯಬೇಕು. ಕಾನ್ವೊಕೇಷನ್‌ದಲ್ಲಿ ಕರಿಯ ಷೇರವಾನಿಯನ್ನು ಧರಿಸಿ ದಸ್ತಾರ್ (ದರ್ಬಾರೀ ಟೊಪ್ಪಿಗೆ) ಹಾಕಿಕೊಳ್ಳುವುದು ಕಡ್ಡಾಯವಾಗಿತ್ತು. ಆದರೆ ಜಯತೀರ್ಥ ಹಾಗು ಅವರ ಗೆಳೆಯರು ಪ್ರತಿಭಟನೆ ನಡೆಸಿದರು. ತಲೆಗೆ ಖಾದಿ ಟೊಪಿ ಹಾಕಿಕೊಂಡು, ಖಾದಿ ಧರಿಸಿಕೊಂಡು ಬಂದು ಪದವಿ ಪತ್ರ ತೆಗೆದುಕೊಳ್ಳುವದಾಗಿ ಅಧಿಕಾರಿಗಳಿಗೆ ತಿಳಿಸಿದರು. ಆ ಪದವಿ ಪ್ರಧಾನ ಸಮಾರಂಕ್ಕೆ ಸರ್ದಾರ ವಲ್ಲಭಬಾಯಿ ಪಟೇಲರೇ ಮುಖ್ಯ ಅತಿಥಿಗಳು. ಇದನ್ನು ಗಮನಿಸಿದ ಆಗಿನ ಉಪಕುಲಪತಿ ನವಾಬ ಅಲಿಯಾವರಜಂಗ್ ಅವರು ಚಾಣಾಕ್ಷತನ ತೋರಿಸಿ ಖಾದೀ ಟೊಪ್ಪಿಗೆ ಹಾಕಿಕೊಂಡು ಬಂದು ಪದವಿ ಪಡೆಯಲು ಅನುಮತಿ ನೀಡಿದರು.

ಆಗಿನ ಕಾಲದಲ್ಲಿ ಬಿ.ಎ ಪದವಿ ಪಡೆಯುವದೆಂದರೆ ಸಣ್ಣ ಮಾತಾಗಿರಲಿಲ್ಲ. ಇಡೀ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಒಂದೂ ಕಾಲೇಜು ಇರಲಿಲ್ಲ. ಈ ಪ್ರದೇಶದ ಯಾರೇ ಪದವಿ ಓದಬೇಕಂದರೂ ಹೈದ್ರಾಬಾದ್‌ಗೆ ಹೋಗಲೇಬೇಕು.

ಹೀಗಾಗಿ ಈ ಪ್ರದೇಶದ ಜನರಿಗೆ ಹೈದ್ರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯವು ಆ ಕಾಲದಲ್ಲಿ ಜ್ಞಾನದ ದೀವಿಗೆ ಹಚ್ಚುವ ಮಂದಿರವಾಗಿತ್ತು.

ಜಯತೀರ್ಥರು ಬಿ.ಎ ಪದವಿ ಪಡೆದ ತಕ್ಷಣವೇ ರಾಜಕೀಯ ಸೇರಬೇಕೆಂದು ಜನಾರ್ಧನರಾವ್ ದೇಸಾಯಿಯವರು ಕರೆಸಿ ಹೇಳಿದರು. ಆಗ ಸ್ಟೇಟ್ ಕಾಂಗ್ರೆಸ್ ಇಬ್ಭಾಗವಾಗಿತ್ತು. ಆದರೆ ರಾಜಕಯ ಭವಿಷ್ಯದ ಭರವಸೆ ಸಿಗಲಿಲ್ಲವಾದ್ದರಿಂದ ಜಯತೀರ್ಥರು ನೌಕರಿ ಮಾಡುವ ಕಡೆ ಗಮನಹರಿಸಿದರು. ಅಬಕಾರಿ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಹುದ್ದೆಗೆ ಆಯ್ಕೆಯಾದರು. ಆದರೆ ಅಷ್ಟರಲ್ಲಿ ಹೊಸದಾಗಿ ಜಾರಿಗೆ ಬಂದಿದ್ದ ಲೋಕ ಸೇವಾ ಆಯೋಗವು ತಹಸೀಲ್ದಾರ್ ಹುದ್ದೆಗಳ ಭರ್ತಿಗಾಗಿ ಅರ್ಜಿ ಕರೆದಿತ್ತು. ಲಿಖಿತ ಪರೀಕ್ಷೆ ಆಯಿತು. ಲಿಖಿತ ಪರೀಕ್ಷೆಯಲ್ಲಿ ಪಾಸಾದರು. ನಂತರ ಸಂದರ್ಶನ ನಡೆಯಿತು. ಹೈದ್ರಾಬಾದ್ ಕರ್ನಾಟಕ ಪ್ರದೇಶದಿಂದ ಹತ್ತು ಜನ ಪದವೀಧರರು ತಹಸೀಲ್ದಾರರಾಗಿ ನೇಮಕಗೊಂಡರು, ಅದರಲ್ಲಿ ಜಯತೀರ್ಥರೂ ಒಬ್ಬರು. ೧೯೪೯ರ ತಹಸ್ದೀಲಾರ ನೇಮಕ, ಅತ್ತ ಸುಧಾ ಹೆಣ್ಣು ಮಗುವಿನ ಜನನ. ಹೀಗಾಗಿ ೧೯೪೯ ರಿಂದ ಮುಂದಕ್ಕೆ ಜಯತೀರ್ಥರ ಶುಭದಿನಗಳು ಪ್ರಾರಂಭವಾದವು. ಜಹೀರಾಬಾದ್‌ದಲ್ಲಿ ತಹಸೀಲ್ದಾರ ಹುದ್ದೆಗೆ ಹಾಜರಾಗಿ, ತಿಂಗಳೊಳಗಾಗಿ ಬೀದರ್‌ಗೆ ವರ್ಗವಾಗಿ ಬಂದರು.

■

## ೩. ಚಳುವಳಿ

ಜಯತೀರ್ಥರು ಹೈದ್ರಾಬಾದನಲ್ಲಿದ್ದಾಗ ಆರ್ಯ ಸಮಾಜದವರ ಸತ್ಯಾಗ್ರಹಗಳು ನಿಜಾಮರ ಆಳ್ವಿಕೆಯ ವಿರುದ್ಧ ನಡೆಯುತ್ತಿದ್ದವು. ಅಖಿಲ ಭಾರತ ಮಟ್ಟದ ಉಗ್ರ ಭಾಷಣಕಾರರ ಭಾಷಣಗಳು ಪರಿಣಾಮಕಾರಿಯಾಗಿದ್ದವು. ಸ್ಟೇಟ್ ಕಾಂಗ್ರೆಸ್ ಮೇಲೆ ಆಗಲೇ ನಿರ್ಬಂಧ ಹಾಕಲಾಗಿತ್ತು. ಮುಖಂಡರು ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಈ ಎಲ್ಲದರ ಪರಿಣಾಮ ಜಯತೀರ್ಥರ ಮೇಲಾಯಿತು. ಬಿ.ಎ ಕೊನೆಯ ವರ್ಷದಲ್ಲಿ ಓದುತ್ತಿದ್ದಾಗಲೇ ಭಾರತದಲ್ಲಿ ರಾಜಕೀಯ ಬಿರುಗಾಳಿ ಬೀಸತೊಡಗಿತು. ಭಾರತಕ್ಕೆ ದೊರೆತ ಸ್ವಾತಂತ್ರ್ಯ, ಹೈದ್ರಾಬಾದ್ ಪ್ರಾಂತ್ಯದವರಿಗಿಲ್ಲವೆಂಬ ವಿಷಯ ಮನದಟ್ಟಾಗುತ್ತಿದ್ದಂತೆ; ಚಳುವಳಿಗಳು ಪ್ರಾರಂಭವಾದವು. ಆಗ ವಿದ್ಯಾರ್ಥಿಗಳು ಅಂತಹ ಚಳುವಳಿಗಳಲ್ಲಿ ಬೀದಿಗಿಳಿದು ಹೋರಾಡಿದರು. ಅವರಲ್ಲಿ ಜಯತೀರ್ಥರೂ ಒಬ್ಬರು.

ಹಿಂದೆ ವಂದೇಮಾತರಂ ಚಳುವಳಿ ನಡೆದಿತ್ತು. ಅದರಲ್ಲಿ ಜಯತೀರ್ಥರು ಭಾಗವಹಿಸಿರಲಿಲ್ಲವಾದರೂ ಅದರ ಸ್ಫೂರ್ತಿಯಿತ್ತು. ಹಾಸ್ಟೆಲ್‌ಗಳ ವಿದ್ಯಾರ್ಥಿಗಳನ್ನು ಸಂಘಟಿಸುವುದು, ಸತ್ಯಾಗ್ರಹ ನಡೆಸುವುದು, ಜನಾಭಿಪ್ರಾಯ ನಿರ್ಮಾಣ ಇಂತಹ ಕಾರ್ಯಗಳಲ್ಲಿ ಜಯತೀರ್ಥರು ಭಾಗವಹಿಸಿದರು. ರಾಜಕೀಯ ನಾಯಕರುಗಳನ್ನು ಬಂಧಿಸಿದಾಗಲೆಲ್ಲ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆಗಳನ್ನು ನಡೆಸಲಾಗುತಿತ್ತು. ಇಂತಹ ಮೆರವಣಿಗೆಗಳ ನೇತೃತ್ವವನ್ನು ಜಯತೀರ್ಥರು ವಹಿಸುತ್ತಿದ್ದರು. ಲಾಠಿ ಏಟು ತಿಂದು ಕಾರಾಗೃಹವನ್ನು ಸೇರಿದರು. ಕಾರಾಗೃಹದಿಂದ ಬಿಡುಗಡೆಯಾದ ನಂತರ ಮತ್ತೆ ಹೋರಾಟ.

ಹೈದ್ರಾಬಾದ್ ಸಂಸ್ಥಾನದಲ್ಲಿ ಆಗ ಪರಿಸ್ಥಿತಿ ಉಗ್ರವಾಗಿತ್ತು. ಆಗ ಜಯತೀರ್ಥರು ಬಿ.ಎ ಅಂತಿಮ ವರ್ಗದಲ್ಲಿ ಓದುತ್ತಿದ್ದರು. ಕಾನೂನು ಮತ್ತು ರಕ್ಷಣೆಗಾಗಿ ನಿಜಾಮ್ ಸರ್ಕಾರದ ಸೈನ್ಯ ಹಾಗೂ ಪೋಲಿಸರಿದ್ದರು. ಇವೆರಡರ ಮಧ್ಯ ಮುಸ್ಲಿಂ ತೀವ್ರಗಾಮಿ ಸಂಘಟನೆಯೊಂದು ಹುಟ್ಟಿಕೊಂಡಿತ್ತು. ಕಾಸೀಂ ರಝ್ವಿ ಇದರ ನಾಯಕನಾಗಿದ್ದ ಈ ಸಂಘಟನೆಯ ಸದಸ್ಯರು ತೀವ್ರಗಾಮಿ ಮುಸ್ಲಿಮರೇ ಆಗಿದ್ದು, ಅವರನ್ನು ರಜಾಕಾರರೆಂದು ಕರೆಯುತ್ತಿದ್ದರು. ಈ ರಜಾಕಾರರಿಗೆ ನಿಜಾಮನ ಪ್ರೋತ್ಸಾಹವೂ ಇತ್ತು.

ಶ್ರೀಮಂತ ಹಿಂದೂಗಳ ಆಸ್ತಿಯನ್ನು ಲೂಟಿ ಮಾಡುವುದು, ಹಿಂದೂ ಸ್ತ್ರೀಯರ ಮಾನಾಪಹರಣ ಮಾಡುವುದು ಕೊಲೆ ಮುಂತಾದ ಭಯೋತ್ಪಾದನೆಯ ಚಟುವಟಿಕೆ ನಡೆಸುವುದು ರಜಾಕಾರರ ನಿತ್ಯದ ಕಾರ್ಯವಾಗಿತ್ತು. ಪೋಲೀಸರು ಇದನ್ನು ತಡೆದು ಜನರಿಗೆ ರಕ್ಷಣೆ ನೀಡುತ್ತಿರಲಿಲ್ಲ. ಆದ್ದರಿಂದ ಹೈದ್ರಾಬಾದ್ ಸಂಸ್ಥಾನದಲ್ಲಿ ವಾಸಿಸುತ್ತಿದ್ದ ಹಿಂದೂಗಳ ಪರಿಸ್ಥಿತಿ ಚಿಂತಾಜನಕವಾಗಿತ್ತು. ಈ ಸಂಸ್ಥಾನಕ್ಕೆ ಸೇರಿದ್ದ ಅಂದಿನ ಬೀದರ – ಕಲಬುರ್ಗಿ–ರಾಯಚೂರ ಜಿಲ್ಲೆಗಳ ಪ್ರದೇಶಗಳಲ್ಲಿದ್ದ ಜನರು ಅನೇಕ ಸಮಸ್ಯೆಗಳನ್ನೆದುರಿಸುತ್ತಿದ್ದರು. ಆಗ ನಿರುದ್ಯೋಗ–ಹಸಿವು– ಬಡತನಗಳಿಗಿಂತ ರಜಾಕಾರರ ಹಾವಳಿಯೇ ಈ ಪ್ರದೇಶದ ಜನತೆಯನ್ನು ಮೆತ್ತಗೆ ಮಾಡಿತ್ತು. ಈ ರಜಾಕಾರರ ಚಮಚಾಗಳಂತೆ ಕೆಲವು ಗೌಡ–ಕುಲಕರ್ಣಿಗಳು ಒಳಗೊಳಗೇ ಶಾಮೀಲಾಗಿ ಹಳ್ಳಿಗಳ ಲೂಟಿಗೆ ಕಾರಣರಾಗಿದ್ದರು.

ನಿಜಾಮ ಪೋಲಿಸರನ್ನು ಮತ್ತು ರಜಾಕಾರರನ್ನು ಹಿಂಸಾತ್ಮಕವಾಗಿ ಪ್ರತಿಭಟಿಸುವದರ ಸಲುವಾಗಿಯೇ ಕೆಲವು ಸತ್ಯಾಗ್ರಹಿಗಳು ನಿಜಾಮ್ ಸರಕಾರದ ಗಡಿಯಾಚೆ ಶಿಬಿರಗಳನ್ನು ಸ್ಥಾಪಿಸಿಕೊಂಡಿದ್ದರು. ರಾಯಚೂರ ಜಿಲ್ಲೆಯಲ್ಲಿ ಇಂತಹ ಪ್ರತಿಭಟನೆಯ ಸಂಘಟನೆಗಾಗಿ ರಚಿತವಾದ ಮೂರು ಸದಸ್ಯರ ಸಮಿತಿಯಲ್ಲಿ ಜಯತೀರ್ಥ ರಾಜಪುರೋಹಿತರೂ ಒಬ್ಬರಾಗಿದ್ದರು. ಗಾಣಧಾಳ ನಾರಾಯಣಪ್ಪ ಹಾಗೂ ಬಿ.ಎಚ್. ಇನಾಮ್‌ದಾರ್ ಇತರ ಇಬ್ಬರು ಸದಸ್ಯರಾಗಿದ್ದರು. ಗಜೇಂದ್ರಗಡ, ಇಟಗಿ, ಮುಂಡರಗಿ, ಕಂಪ್ಲಿ, ಚಳ್ಳೆಕೂಡ್ಲೂರು ಈ ಮುಂತಾದ ಊರುಗಳಲ್ಲಿ ಕಾಂಗ್ರೆಸ್ಸಿನ ಸಶಸ್ತ್ರ ಶಿಬಿರದ ಕೇಂದ್ರಗಳಿದ್ದವು. ಇಂತಹ ಶಿಬಿರಗಳಿಂದ ಸ್ವಾತಂತ್ರ್ಯ ಹೋರಾಟಗಾರರು ಆಗಾಗ್ಗೆ ನಿಜಾಮ್ ಗಡಿಯೊಳಕ್ಕೆ ನುಗ್ಗಿ ರಜಾಕಾರರ ಮತ್ತು ಪೋಲಿಸರ ವಿರುದ್ಧ ಸಶಸ್ತ್ರ ಕಾರ್ಯಾಚರಣೆ ನಡೆಸುತ್ತಿದ್ದರು. ಕೈಬಾಂಬುಗಳನ್ನು – ಶಸ್ತ್ರಾಸ್ತ್ರಗಳನ್ನು ಗದಗ ಕೇಂದ್ರದಿಂದ ರೈಲಿನಲ್ಲಿ, ತುಂಗಭದ್ರಾ ದಡದ ಶಿಬಿರಗಳಿಗೆ ಸಾಗಿಸುವುದು ರಾಜ ಪುರೋಹಿತರ ಕೆಲಸವಾಗಿತ್ತು. ಅನೇಕ ಸಲ ಅವರು ಸಶಸ್ತ್ರ ದಾಳಿಗೂ ಸಜ್ಜಾಗಬೇಕಾಗಿತ್ತು.

ಒಂದು ದಿನ ನಾಲ್ಕಾರು ಜನ ಮಿತ್ರರು ಕೂಡಿಕೊಂಡು ನಿಜಾಮ್ ಗಡಿಯಲ್ಲಿದ್ದ ಕೋರಗಲ್ ಎಂಬ ಊರಿನ ಕರೊಡಗಿರಿ ನಾಕಾಕ್ಕೆ ಬೆಂಕಿಯಿಟ್ಟು ಭಸ್ಮ ಮಾಡಿದರು. ಮತ್ತೊಂದು ದಿನ ಗುನ್ನಾಳಿಯಲ್ಲಿ ಒತ್ತಾಯದಿಂದ ಕಂದಾಯ ವಸೂಲಿ ಮಾಡುತ್ತಿದ್ದ ತಹಸೀಲ್ದಾರರ ಮೇಲೆ ದಾಳಿ ಮಾಡಿದರು. ಇದರಲ್ಲಿ ಗೆದ್ದಗೇರಿ ಬಂಡೆಪ್ಪನಿಗೂ, ತಹಸೀಲ್ದಾರನಿಗೂ ಗಾಯಗಳಾದವು. ರಾತ್ರಿಯೇ ನಡೆದು ಗಡಿಪಾರಾದರು. ಹಾಗೆ ಹಿಂಸಾತ್ಮಕ ಪ್ರತಿಭಟನೆಗಳಿಂದ ಈ ಸತ್ಯಾಗ್ರಹಿಗಳು ನಿಜಾಮ್ ಪೋಲಿಸರಲ್ಲಿ ಭಯವನ್ನು ಹುಟ್ಟುಹಾಕಿದರು. ಹಾಡಹಗಲೇ ಸುಲಿದು ತಿನ್ನುತಿದ್ದ ರಜಾಕಾರರಿಗೆ

ಈ ಸತ್ಯಾಗ್ರಹಿಗಳು ಸಿಂಹಸ್ವಪ್ನವಾದರು. ಆಗ ಹೆಂಡದಂಗಡಿಗಳನ್ನು ಸುಡಿಸುವುದು ಈ ಸತ್ಯಾಗ್ರಹಿಗಳ ಮುಖ್ಯ ಕಾರ್ಯವಾಗಿತ್ತು. ಭಯದ ನೆರಳಲ್ಲಿ ನಲುಗುತ್ತಿದ್ದ ಹಳ್ಳಿಯ ಜನತೆಗೆ ಸತ್ಯಾಗ್ರಹಿಗಳ ಇಂತಹ ಶಿಬಿರಗಳು ಆಸರೆಯಾಗಿ ನಿಂತವು. ಇಂತಹ ಸತ್ಯಾಗ್ರಹಿಗಳ ನಾಯಕರಲ್ಲೊಬ್ಬರಾದ ಶರಣಗೌಡ ಸರ್ದಾರರ ಬಾಯಿಯಿಂದಲೇ ಇಂತಹ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದೇನೆ.

ವಯೋವೃದ್ಧ ಸರ್ದಾರ ಶರಣಗೌಡರು ನಿಜವಾದ ಕ್ರಾಂತಿಕಾರಿ. ಅವರನ್ನು ಎರಡು ವರ್ಷಗಳ ಹಿಂದೆ, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ಹೈದ್ರಾಬಾದ ಕರ್ನಾಟಕ ವಿಮೋಚನಾ ದಿನಾಚರಣೆಗೆ ಕರೆಸಿದಾಗ, ಅವರು ಅಂದಿನ ಶಿಬಿರಗಳ ಹೋರಾಟಗಳನ್ನು ಕುರಿತು ಸುದೀರ್ಘವಾಗಿ ಮಾತನಾಡಿದರು. ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಶರಣಗೌಡರ ಭಾಷಣ ಪ್ರಚೋದನಕಾರಿ ಯಾಗಿತ್ತು. ಸ್ವಾತಂತ್ರ್ಯದ ಮಹತ್ವ, ವಿಮೋಚನಾ ಹೋರಾಟದ ಪ್ರಾಮುಖ್ಯತೆ ಇಂದಿನ ಯುವ ಪೀಳಿಗೆಗೆ ಗೊತ್ತಿಲ್ಲವೆಂದು ಭಾಷಣ ಪ್ರಾರಂಭಿಸಿದ ಶರಣಗೌಡರು, ರಜಾಕಾರರ ಹಾವಳಿಯ ಶೋಷಣೆಯನ್ನು ವಿವರವಾಗಿ ತಿಳಿಸಿದರು. ಆ ಸಂದರ್ಭದಲ್ಲಿ ಜಯತೀರ್ಥ ರಾಜಪುರೋಹಿತರ ನೆನಪಾಯಿತು.

ಹೀಗೆ ರಾಜಪುರೋಹಿತರು ಶಿಬಿರಗಳಲ್ಲಿ ಕೆಲಸ ಮಾಡುತ್ತಿದ್ದಾಗಲೇ ಅವರ ಮೇಲೆ ನಿಜಾಮ್ ಸರಕಾರದಿಂದ ವಾರೆಂಟ್ ಜಾರಿಯಾಯಿತು. ಆಗ ಕನಕಗಿರಿಯಲ್ಲಿದ್ದ ರಾಜಪುರೋಹಿತರ ಪತ್ನಿ ಹಾಗೂ ತಂದೆ-ತಾಯಿಗಳನ್ನು ಭೇಟಿಯಾಗಲು, ರಾಜಪುರೋಹಿತರ ಸ್ನೇಹಿತರು ಅವರನ್ನು ಕನಕಗಿರಿಗೆ ಕಂಬಳಿಯ ಮುಸುಕಿನಲ್ಲಿ ಕರೆದುಕೊಂಡು ಹೋಗಿದ್ದರು. ಜಯತೀರ್ಥರ ಮೇಲೆ ಕೇವಲ ಬಂಧನದ ವಾರೆಂಟ್ ಇತ್ತು, ಆದರೆ ರಜಾಕಾರರು ಅವರನ್ನು ಮುಗಿಸಿಬಿಡಬೇಕೆಂದು ಮಾತಾಡುತ್ತಿದ್ದರು. ಈ ವಿಷಯ ಜಯತೀರ್ಥರ ತಂದೆ-ತಾಯಿ-ಬಂಧು ಮಿತ್ರರಿಗೆ ಗಾಬರಿಯನ್ನುಂಟು ಮಾಡಿತು. ಜಯತೀರ್ಥರ ತಂದೆಯವರು ಕೂಡಲೇ ಒಂದು ಬಂಡಿಯನ್ನು ತರಿಸಿ ಮಗನನ್ನು ಗಡಿ ದಾಟಿ ಹೋಗಬೇಕೆಂದು ಕಳಿಸಿಕೊಟ್ಟರು. ಆದರೆ ಜಯತೀರ್ಥರು ಗಡಿದಾಟುವ ಬದಲು ಗೌರೀಪುರಕ್ಕೆ ಹೋದರು. ಗೌರೀಪುರದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುವದೆಂದು ಮೊದಲೇ ಗೊತ್ತಾಗಿತ್ತು. ಗೌರೀಪುರದ ಗುಡಿಯ ಪೌಳಿಯಲ್ಲಿ ಸಾವಿರಾರು ಜನ ಸೇರಿದ್ದರು.

ಸುತ್ತಲ ಜನ ದೊಣ್ಣೆ-ಕೊಡಲಿ-ಬಡಿಗೆಗಳನ್ನು ಹಿಡಿದುಕೊಂಡು ಕಾವಲು ನಿಂತಿದ್ದರು. ಇಂತಹ ವಾತಾವರಣದಲ್ಲಿ ಜಯತೀರ್ಥರು ಎರಡು ಗಂಟೆಗಳ ಆವೇಶಪೂರ್ಣ ಭಾಷಣ ಮಾಡಿದರು. ಜಯತೀರ್ಥರು ಗೌರೀಪುರದಲ್ಲಿದ್ದ ಸುದ್ದಿ ಗೊತ್ತಾಗಿ ಕುಷ್ಟಗಿಯಿಂದ ಪೋಲಿಸ್‌ದಳ ಬೆನ್ನುಹತ್ತಿತು. ಆಗ ಜಯತೀರ್ಥರು

ಬಂದೂಕಧಾರಿ ರೋಣದ ವೀರಭದ್ರಪ್ಪನವರೊಂದಿಗೆ ಹುಲಸನ ಹಟ್ಟಿಗೆ ಓಡಿದರು. ಹುಲಸನ ಹಟ್ಟಿಯಲ್ಲಿ ಊಟ ಮುಗಿಸಿ ಒಂಕಲಕುಂಟೆಗೆ ಬಂದರು. ಮುಂದೆ-ಮುಂದೆ ಜಯತೀರ್ಥರು, ಹಿಂದೆ-ಹಿಂದೆ ಪೋಲಿಸ್ ದಳ. ಒಂಕಲಕುಂಟೆಯ ಕಾರ್ಯಕರ್ತರಿಗೆ ಜಯತೀರ್ಥರ ರಕ್ಷಣೆ ಸಮಸ್ಯೆಯಾಯಿತು. ಆಗ ಅವರನ್ನು ಉಪ್ಪಲದಿನ್ನಿ ಗ್ರಾಮದ ಮಡಿವಾಳಪ್ಪನೆಂಬ ರೈತನ ಗೋದಲೆಯಲ್ಲಿ ಅಡಗಿಸಿಟ್ಟರು.

ಮಡಿವಾಳಪ್ಪನ ಮನೆಯಲ್ಲಿ ಮೂರೇ ಜನ. ಮಡಿವಾಳಪ್ಪ – ಆತನ ಹೆಂಡತಿ ಮತ್ತು ಹರೆಯದ ಮಗ. ಬೆಳೆ ಕಾಯಲು ಮಗ ಹೊಲದಲ್ಲಿದ್ದ. ರಾಜಪುರೋಹಿತರು ಗೋದಲೆಯಲ್ಲಿ ದಂಟುಗಳ ನಡುವೆ. ಆಗ ಉಪ್ಪಲದಿನ್ನಿಯ ಮನೆಮನೆಯನ್ನೂ ಪೊಲೀಸರು ಶೋಧಿಸುತ್ತಿದ್ದರು. ಗಾಬರಿಯಾದ ಮಡಿವಾಳಪ್ಪ "ನಾನೂ-ನೀವೂ ಸೆರೆಸಿಕ್ಕಿ ಬೀಳ್ತೇವಿ ಧಣೇರ" ಎಂದ. "ಹಾಗಾದರೆ ನಾನು ಹೋಗಿ ಬಿಡ್ತೇನೆ ಮಡಿವಾಳಪ್ಪ, ನನಗಾಗಿ ನಿಮಗೆಲ್ಲರಿಗೂ ತೊಂದರೆ ಬೇಡ" ಎಂದು ರಾಜ ಪುರೋಹಿತರು ಗೋದಲೆಯಿಂದ ಇಳಿದು ಬಾಗಿಲತ್ತ ಧಾವಿಸಿದರು. ಆಗ ಮಡಿವಾಳಪ್ಪ –"ಸ್ವಲ್ಪ ನಿಲ್ಲರಿ ಧಣೇರ, ನಾನು ನಿಮಗ ಹೋಗ್ರಿ ಅನಲಿಲ್ಲ. ದನಾ ಮಳೆಯಾಗ ತೋಯ್ತಿದ್ರ ನಾವು ಮುಸುಕಿನಾಗ ಕರ್ರೊಂಬೋಜನ. ನಿಮ್ಮನ್ನ ಹ್ಯಾಂಗ್ ಹೊರಗ ಕಳೆಸೇನ್ರಿ? ಬರ್ರಿ, ಅಲ್ಲೆ ನನ್ನ ಹೇಣ್ತಿ ಹಂತೇಕ್ ಹೋಗಿ ಕೌದಿ ಹೊತಕೊಂಡು ಮಕ್ಕೋರಿ. ನನ್ನ ಮಗ ಮಲಗ್ಯಾನಂತ ಹೇಳ್ತೀನಿ" ಅಂದ. ರೈತನ ಮಾತು ಕೇಳಿ ಮೂಕವಿಸ್ಮಿತರಾಗಿ ಆ ತಾಯಿಯ ಪಕ್ಕದಲ್ಲಿ ಪುಟ್ಟಮಗುವಿನಂತೆ ಮಲಗಿದರು. ಅಷ್ಟರಲ್ಲಿ ಪೋಲಿಸರು ಬಾಗಿಲು ತಟ್ಟಿದರು. ಮಡಿವಾಳಪ್ಪ ಸಹಜವಾಗಿ ವರ್ತಿಸಿ ಸ್ವಲ್ಪೂ ಸಂಶಯ ಬಾರದಂತೆ ಪೋಲೀಸರನ್ನು ಸಾಗು ಹಾಕಿದ. ನಿಷ್ಕಳಂಕ ಪ್ರೇಮದ ಪರಾಕಾಷ್ಠೆಯಿದು. ಈ ವಿಷಯವನ್ನು ಪ್ರೊ. ಡಿ.ಆರ್. ಬಳೂರಗಿಯವರು ತಮ್ಮ ಲೇಖನದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

(ನೋಡಿ : ಜಯತೀರ್ಥ, ಪುಟ : ೬೩, ಅಭಿನಂದನ ಗ್ರಂಥ)

ವಿದ್ಯಾರ್ಥಿ ಕ್ರಿಯಾಸಮಿತಿಯಲ್ಲಿ ಜಯತೀರ್ಥರೂ ಇದ್ದರು. ಹೀಗಾಗಿ ನಂತರ ನಡೆದ ರಜಾಕಾರರರೊಂದಿಗೆ ನಡೆಸಿದ ಸಶಸ್ತ್ರ ಹೋರಾಟದಲ್ಲಿ, ವಿಧ್ವಂಸಕ ಕಾರ್ಯಗಳಲ್ಲಿ ಈ ಎಲ್ಲ ಗೆಳೆಯರು ತೊಡಗಿದ್ದರು. ಎಷ್ಟೋಸಲ ಭೂಗತರಾಗಿ ರುತ್ತಿದ್ದರು. ಆಗ ಮನೆಯವರಿಗೆ ಸಹಿತ ಕಿರುಕುಳ ಕೊಡಲಾಗುತಿತ್ತು. ಅಂತಿಮವಾಗಿ ನಡೆದ ಪೋಲಿಸ್ ಆ್ಯಕ್ಷನ್‌ದಿಂದ ಹೈದ್ರಾಬಾದ ಕರ್ನಾಟಕ ಪ್ರದೇಶ ವಿಮೋಚನೆ ಪಡೆಯಿತು. ಇಂತಹ ಹೋರಾಟಗಳಲ್ಲಿ ಜಯತೀರ್ಥರಂತಹ ಸಾವಿರಾರು ವಿದ್ಯಾರ್ಥಿಗಳ ಶ್ರಮವೂ ಸೇರಿತ್ತು.

ಪೋಲಿಸ್ ಕಾರ್ಯಾಚರಣೆಗಾಗಿ ಬಂದ ಭಾರತ ಸರ್ಕಾರದ ಸೇನೆಯೊಂದಿಗೆ

ಜಯತೀರ್ಥರು ಗಂಗಾವತಿಗೆ ಹೋದರು. ಅಂದು ಸಾಯಂಕಾಲ ಅಲ್ಲೊಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಎಲ್ಲರನ್ನೂ ಅಭಿವಂದಿಸಿದರು. ಈ ಸಂದರ್ಭದಲ್ಲಿ ಬುರ್ಲಿಬಿಂದು ಮಾಧವಾಚಾರ್ಯರು ಜಯತೀರ್ಥರೊಂದಿಗಿದ್ದರು. ಜಯತೀರ್ಥರು ಮರುದಿನ ಕನಕಗಿರಿಗೆ ಹೋಗಿ ಜನರ ವಿಜಯೋತ್ಸಾಹದಲ್ಲಿ ಭಾಗಿಯಾದರು. ಕಾಲೇಜು ತೊರೆದಿದ್ದ ಸಾವಿರಾರು ವಿದ್ಯಾರ್ಥಿಗಳಿಗಾಗಿ ವಿಶೇಷ ಪರೀಕ್ಷೆಯ ದಿನಾಂಕ ಪ್ರಕಟಿಸಲಾಯಿತು. ಒಂದೇ ತಿಂಗಳ ಅವಧಿಯಲ್ಲಿ ಹಗಲೂ-ರಾತ್ರಿ ಅಧ್ಯಯನ ಮಾಡಿ ಬಿ.ಎ ಪದವಿಯನ್ನು ಪಡೆದರು.

ಹೀಗೆ ಕಾಲೇಜಿನ ದಿನಗಳಲ್ಲಿ ಹೈದ್ರಾಬಾದ ವಿಮೋಚನಾ ಚಳುವಳಿಯಲ್ಲಿ ನಿಜಾಮ್ ಸರಕಾರದ ವಿರುದ್ಧ ಜಯತೀರ್ಥರು ಮತ್ತು ಅವರ ಗೆಳೆಯರು ಭಾಗವಹಿಸಿದ್ದರು. ಬ್ರಾಹ್ಮಣ ಹುಡುಗರು ಚಳುವಳಿಯಲ್ಲಿ ಭಾಗವಹಿಸುವುದು ತುಂಬ ವಿರಳ. ಆದರೆ ಜಯತೀರ್ಥರು ಅದನ್ನು ಮೀರಿದ್ದರು. ಸಂಪ್ರದಾಯಸ್ಥ-ಮಡಿವಂತಿಕೆಯ ಕುಟುಂಬದಲ್ಲಿ ಬೆಳೆದರೂ ಅವರು ವಿಚಾರವಂತರಾಗಿ, ಹೋರಾಟಗಾರರಾಗಿ ರೂಪ ಪಡೆದರು.

ಚಳುವಳಿ ಮನಷ್ಯನಲ್ಲಿ ಉತ್ಸಾಹವನ್ನುಂಟುಮಾಡುತ್ತದೆ. ವ್ಯಕ್ತಿಗಿಂತ ಸಮಾಜ ಮುಖ್ಯ ಚಳುವಳಿ ಯಾವಾಗಲೂ ಸಮಾಜ ಮುಖಿಯಾಗಿರುತ್ತದೆ. ಜಯತೀರ್ಥರು ಭಾಗವಹಿಸಿದ್ದ ಹೈದ್ರಾಬಾದ್ ವಿಮೋಚನಾ ಚಳುವಳಿ ಎರಡು ಕಾರಣಗಳಿಂದ ಮಹತ್ವದ್ದಾಗಿದೆ. ಭಾರತಕ್ಕೆ ೧೯೪೭ ಆಗಸ್ಟ್ ೧೫ಕ್ಕೆ ಸ್ವಾತಂತ್ರ್ಯ ದೊರೆತರೂ ಈ ಪ್ರದೇಶಕ್ಕೆ ಆಗ ಸ್ವಾತಂತ್ರ್ಯ ದೊರೆಯಲಿಲ್ಲ. ಹೈದ್ರಾಬಾದ್ ನಿಜಾಮ್ ತಾನು ಆಳುತ್ತಿದ್ದ ಪ್ರದೇಶವನ್ನು ಬಿಟ್ಟು ಕೊಡಲು ಸಿದ್ಧನಿರಲಿಲ್ಲ. ರಜಾಕಾರ ಹಾವಳಿ, ಎಲ್ಲ ರೀತಿಯ ಗೂಂಡಾಗಳ ಸಂಗಮವಾಗಿತ್ತು. ಇಂತಹ ಗೂಂಡಾಗಿರಿಯನ್ನು ಹೋಗಲಾಡಿಸಿ, ಜನ ಸಮುದಾಯ ಶಾಂತಿ-ನೆಮ್ಮದಿಯಿಂದ ಬದುಕುವಂತಾಗ ಬೇಕಾದರೆ ಚಳುವಳಿ ಅನಿವಾರ್ಯವಾಗಿತ್ತು.

ಹೈದ್ರಾಬಾದ ನಿಜಾಮ್‌ನಿಂದ ವಿಮೋಚನೆ ಹೊಂದುವುದು ಒಂದು ಉದ್ದೇಶವಾದರೆ, ಈ ಪ್ರದೇಶದಲ್ಲಿ ಕಮರಿಹೋಗಿದ್ದ ಕನ್ನಡವನ್ನು ಕಟ್ಟಿನಿಲ್ಲಿಸುವುದು ಎರಡನೇ ಉದ್ದೇಶವಾಗಿತ್ತು. ಹೀಗಾಗಿ ಹೈದ್ರಾಬಾದ ವಿಮೋಚನಾ ಹೋರಾಟದಿಂದ ಸ್ವಾತಂತ್ರ್ಯ-ಕನ್ನಡದ ಬೆಳವಣಿಗೆ-ಸ್ವಾಭಿಮಾನದ ಬದುಕು ಜತೆಜತೆಯಾಗಿ ದೊರೆತವು. ಇಂತಹ ಚಳುವಳಿಗಳಲ್ಲಿ ಬೆಳೆದ ಅನುಭವ ಇದ್ದುದರಿಂದಲೇ ಮುಂದೆ ಜಯತೀರ್ಥರು ಉನ್ನತ ಹುದ್ದೆಗಳನ್ನೇರಿದಾಗ ಕನ್ನಡದ ಸಲುವಾಗಿ-ಕನ್ನಡಿಗರ ಸಲುವಾಗಿ ನಿಷ್ಠೆಯಿಂದ ಕೆಲಸ ಮಾಡಲು ಸಾಧ್ಯವಾಯಿತು.

■

## ೪. ಕನ್ನಡ ಕಟ್ಟಿದ ಪ್ರಸಂಗಗಳು

ಅ) ಆಡಳಿತ ಕನ್ನಡ :

ಒಂದು ರಾಜ್ಯದ ಭಾಷೆ ಉಳಿಯಬೇಕಾದರೆ ಎರಡು ಕಾರಣಗಳಿವೆ. ಆ ರಾಜ್ಯದಲ್ಲಿ ವಾಸಿಸುತ್ತಿರುವ ಜನರು, ಆ ಭಾಷೆಯನ್ನು ನಿತ್ಯ ಬಳಸುತ್ತಿರಬೇಕು. ಆ ರಾಜ್ಯದಲ್ಲಿರುವ ಸರಕಾರ ಆ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಿರಬೇಕು. ಇವೆರಡೂ ಆಗದಿದ್ದರೆ ಆ ಭಾಷೆ, ಮೃತಭಾಷೆಯ ಪಟ್ಟಿಗೆ ಸೇರಿ ಬಿಡುತ್ತದೆ. ಯಾವುದೇ ಭಾಷೆಗೆ ಸ್ವತಂತ್ರವಾದ ಚಲನಶೀಲತೆಯಿಲ್ಲ. ಬಳಕೆಯಾದಾಗಲೇ ಅದು ಚಲನಶೀಲತೆಯನ್ನು ಪಡೆದುಕೊಳ್ಳುತ್ತದೆ. ಭಾಷೆಯನ್ನು ಬಳಸುವವರು ಜನರು; ಆ ಭಾಷೆಯನ್ನು ಪ್ರೋತ್ಸಾಹಿಸಬೇಕಾದದ್ದು ಆ ರಾಜ್ಯದ ಸರಕಾರದ ಕರ್ತವ್ಯ. ಹೀಗಾಗಿ ಭಾಷೆಗೆ ಸ್ವತಂತ್ರ ಅಸ್ತಿತ್ವವಿಲ್ಲ. ಅದು ಜನರ ನಾಲಿಗೆ ಮೇಲಿದ್ದಾಗಲೇ ಹೊಸ ಬೆಳವಣಿಗೆ ಸಾಧ್ಯವಾಗುತ್ತದೆ.

ಹೈದ್ರಾಬಾದ ನಿಜಾಮನ ಆಳ್ವಿಕೆಯಲ್ಲಿ, ಕನ್ನಡ ಪ್ರದೇಶವಾದ ಅಂದಿನ ಬೀದರ, ಗುಲಬರ್ಗಾ, ರಾಯಚೂರ ಜಿಲ್ಲೆಗಳಲ್ಲಿ ಕನ್ನಡ ಕಣ್ಮರೆಯಾಗ ತೊಡಗಿತ್ತು. ಇದನ್ನು ಜಯತೀರ್ಥ ಪುರೋಹಿತರು ಹಾಗೂ ಅವರ ಸಮಕಾಲೀನರು ಕಣ್ಣಾರೆ ಕಂಡಿದ್ದರು. ನಿಜಾಮ್ ತನ್ನ ರಾಜ್ಯಾಡಳಿತ ಭಾಷೆ, ಉರ್ದು ಎಂದು ಘೋಷಿಸಿದ್ದ. ಆಡಳಿತ ಭಾಷೆ ಉರ್ದುವಾದಕೂಡಲೇ, ಎಲ್ಲ ಶಾಲೆ–ಕಾಲೇಜು–ವಿಶ್ವವಿದ್ಯಾಲಯ ಉರ್ದುಮಯವಾದವು. ಜನತೆಗೆ ಭಾಷೆಗಿಂತ ಬದುಕು ಮುಖ್ಯ. ಹೀಗಾಗಿ ಅಂದಿನ ಬಹಳಷ್ಟು ಕನ್ನಡಿಗರು ನೌಕರಿಗಾಗಿ ಉರ್ದುವನ್ನು ಅನಿವಾರ್ಯವಾಗಿ ಓದಬೇಕಾಯಿತು. ಮೆಡಿಕಲ್–ಎಂಜಿನಿಯರಿಂಗ್–ಕಾನೂನು ಎಲ್ಲವೂ ಉರ್ದು ಮಯವಾಯಿತು. ನಿಜಾಮನ ಈ ಆಡಳಿತದಲ್ಲಿ ಕನ್ನಡ ಹೇಳ ಹೆಸರಿಲ್ಲದಂತಾಯಿತು. ಈ ಪ್ರದೇಶದಲ್ಲಿ ರಾಷ್ಟ್ರಕೂಟರು, ಚಾಲುಕ್ಯರು, ಕಲಚೂರಿಗಳು ಈ ಮೊದಲಾದ ಕನ್ನಡ ಅರಸರು ಆಳಿದ್ದರೆಂಬುದೇ ಮರೆತು ಹೋಯಿತು.

ಉರ್ದು ಭಾಷೆಯ ತೀವ್ರತೆಯಲ್ಲಿ, ನಿಜಾಮನ ಅಧಿಕಾರ ಶಾಹಿಯ ದಬ್ಬಾಳಿಕೆಯಲ್ಲಿ ಕನ್ನಡಿಗರೆಲ್ಲ ತತ್ತರಿಸಿ ಹೋದರು. ಕನ್ನಡಿಗರ ಸಂಸ್ಕೃತಿ, ಕರ್ನಾಟಕದ ಪರಂಪರೆ ಎಲ್ಲಾ ಮಸುಕಾಗತೊಡಗಿತು. ಶರಣರು–ದಾಸರು–ತತ್ವಪದಕಾರರು

ಕನ್ನಡದಲ್ಲಿ ಬರೆದದ್ದು, ಬೆಳಗಿದ್ದು ಎಲ್ಲವೂ ಪರದೆಯ ಹಿಂದೆ ಸರಿಯಿತು. ನೃಪತುಂಗನ ಪರಾಕ್ರಮ, ಶ್ರೀವಿಜಯನ ಪ್ರತಿಭೆ ಎಲ್ಲವೂ ಇದ್ದೂ ಇರದಂತಾಯಿತು. ರಜಾಕಾರ ಹಾವಳಿಯಲ್ಲಂತೂ ಸಾವು ಬದುಕಿನ ಪ್ರಶ್ನೆಯೇ ಮುಖ್ಯವಾಗಿ ಭಾಷೆಯೆಂಬುದು ಮರೆತು ಹೋಯಿತು. ಜಯತೀರ್ಥರು ಈ ಎಲ್ಲವನ್ನು ಕಣ್ಣಾರೆ ಕಂಡಿದ್ದರು. ಅವರೊಳಗಡೆ ಕನ್ನಡದ ಕೆಚ್ಚು ಉರಿಯುತ್ತಿತ್ತು. ವಿದ್ಯಾರ್ಥಿಯಾಗಿದ್ದಾಗ ಇದನ್ನೆಲ್ಲ ಕಣ್ಣಾರೆ ಕಂಡ ಜಯತೀರ್ಥರು, ಜಿಲ್ಲಾಧಿಕಾರಿಯಾದಾಗ ಮರೆಯದೆ ಕನ್ನಡದ ಋಣ ತೀರಿಸಿದರು. ಈ ಎಲ್ಲ ಹಿನ್ನೆಲೆಯಿರುವುದರಿಂದಲೆ ಅವರಿಗೆ ಭಾಷೆ ಮತ್ತು ಬದುಕಿಗೆ ಸಂಬಂಧಿಸಿದ ಪ್ರಣಾಳಿಕೆ ಸ್ಪಷ್ಟವಾಗಿ ಗೊತ್ತಿತ್ತು. ಅಂತೆಯೇ ಅವರ ಅಧಿಕಾರವಧಿಯಲ್ಲಿ ಆಡಳಿತ ಕನ್ನಡದ ಕನಸು ಚಿಗುರೊಡೆಯಿತು.

ಒಂದು ಭಾಷೆಯನ್ನಾಡಲು ಹೆಚ್ಚಿನ ಸಿದ್ಧತೆ ಬೇಕಾಗುವದಿಲ್ಲ. ಅಲ್ಲಿಯ ಜನರಿಗೆ ಆ ಭಾಷೆಯನ್ನಾಡಬೇಕೆಂಬ ಮನಸ್ಸಿದ್ದರೆ ಸಾಕು. ಆದರೆ ಆ ಭಾಷೆಯನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡಬೇಕಾದಾಗ ಬಹಳಷ್ಟು ಸಿದ್ಧತೆ ಬೇಕು. ಅಂತಹ ಭಾಷಾ ಮಾಧ್ಯಮದಲ್ಲಿಯೇ ಶಿಕ್ಷಣವನ್ನು ಜಾರಿಗೊಳಿಸಬೇಕೆಂದಾಗ ಇನ್ನೂ ಹೆಚ್ಚಿನ ಸಿದ್ಧತೆಬೇಕು. ಈ ವಿಷಯದಲ್ಲಿ ಹೈದ್ರಾಬಾದ ನಿಜಾಮನ ಭಾಷಾ ಬದ್ಧತೆಯನ್ನು ಮೆಚ್ಚಲೇಬೇಕು. ಆರು ತಿಂಗಳುಗಳಲ್ಲಿ ಆತ ಉರ್ದು ರಾಜ್ಯಾಡಳಿತ ಭಾಷೆ ಮಾಡುವಲ್ಲಿ ಯಶಸ್ವಿಯಾದ. ಎರಡು-ಮೂರು ವರ್ಷಗಳಲ್ಲಿ ಆತ ಮೆಡಿಕಲ್-ಎಂಜಿನಿಯರಿಂಗ್‌ದಂತಹ ಕೋರ್ಸ್‌ಗಳನ್ನು ಉರ್ದುವಿನಲ್ಲಿ ಕಲಿಸುವ ವ್ಯವಸ್ಥೆ ಮಾಡಿದ. ನಮ್ಮ ಸರಕಾರಗಳು ಅರವತ್ತು ವರ್ಷಗಳಲ್ಲಿ ಮಾಡಲಾಗದ್ದನ್ನು ನಿಜಾಮ್ ಹತ್ತು ವರ್ಷಗಳಲ್ಲಿ ಮಾಡಿ ತೋರಿಸಿದ.

ಈ ಎಲ್ಲ ಸಂಗತಿಗಳು ಸಿದ್ಧಯ್ಯಪುರಾಣಿಕ – ಜಯತೀರ್ಥ ಪುರೋಹಿತ ಹಾಗೂ ಅವರ ಸಮಕಾಲೀನರಿಗೆಲ್ಲ ತಿಳಿದ ವಿಷಯಗಳೇ ಆಗಿದ್ದವು. ಹೀಗಾಗಿ ಇಂತಹ ಅಧಿಕಾರಿಗಳು ಸ್ವಾತಂತ್ರ್ಯ ಸಿಕ್ಕಮೇಲೆ, ಹೈದ್ರಾಬಾದ್ ವಿಮೋಚನೆಯಾದ ಮೇಲೆ ಕನ್ನಡಕ್ಕಾಗಿ ಬಹಳಷ್ಟು ಶ್ರಮಪಟ್ಟರು. ತಾವೊಬ್ಬ ಐ.ಎ.ಎಸ್ ಅಧಿಕಾರಿಯೆಂಬುದನ್ನು ಮರೆತು, ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ಕನ್ನಡಕ್ಕಾಗಿ ದುಡಿದರು. ಈ ತಲೆಮಾರಿನವರು ಹೀಗೆ ಕನ್ನಡದ ಬಗೆಗೆ ಕಳಕಳಿ ತೋರಿಸದಿದ್ದರೆ, ಇಂದಿಗೂ ಕನ್ನಡ ಇಲ್ಲಿ ಎದ್ದು ನಿಲ್ಲುತ್ತಿರಲಿಲ್ಲ. ಇದಕ್ಕಾಗಿ ಇವರೆಲ್ಲ ಅಭಿನಂದನಾರ್ಹರು.

ಒಂದು ಭಾಷೆಯನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡಬೇಕಾದರೆ ಬಹಳಷ್ಟು ಸಿದ್ಧತೆ ಬೇಕಾಗುತ್ತದೆ. ಪ್ರಾರಂಭದಲ್ಲಿ ಒಳ್ಳೆಯ ಅನುವಾದಕರು ಬೇಕಾಗುತ್ತಾರೆ. ಆಡಳಿತದ ಪರಿಭಾಷೆಯನ್ನು ಸಿದ್ಧಪಡಿಸಬೇಕಾಗುತ್ತದೆ, ಇದಕ್ಕೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಆ ಭಾಷೆಯ ತಜ್ಞರು ಬೇಕಾಗುತ್ತಾರೆ. ಈ ಎಲ್ಲದರ ಜತೆಗೆ

ಕಾಲಾವಧಿ ಬೇಕಾಗುತ್ತದೆ. ಇಷ್ಟೆಲ್ಲ ಸಿದ್ಧತೆಗಳಾದರೂ ಆಳುವ ಸರಕಾರ ಮೀನಾಮೇಷ ಮಾಡಿದರೆ ಆ ಲೆಕ್ಕ ಅಲ್ಲಿಗೆ ಮುಗಿದಂತೆಯೆ, ಕರ್ನಾಟಕದಲ್ಲಿ ಹೀಗೇ ಆಗಿದೆ. ಕರ್ನಾಟಕ ಎಂಬ ಹೆಸರಿಡಲಿಕ್ಕೆಯೇ ಇಲ್ಲಿ ದಶಕಗಳು ಬೇಕಾಯಿತು. ಗಣರಾಜ್ಯೋತ್ಸವವಾಗಿ ಐದು ದಶಕಗಳು ಕಳೆದವು. ಕರ್ನಾಟಕದಲ್ಲಿ ಕನ್ನಡವೇ ಸರ್ವಸ್ವ. ಆದರೆ ಇಂದಿಗೂ ಆಡಳಿತದಲ್ಲಿ ಕನ್ನಡ ಎಷ್ಟು ಪ್ರತಿಶತವಿದೆ? ಅದಕ್ಕಾಗಿಯೇ ಮೀಸಲಾಗಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇದಕ್ಕೆ ಉತ್ತರ ಹೇಳಬೇಕು. ಕನ್ನಡದ ಹೆಸರಿನಲ್ಲಿ, ರೈತರ ಹೆಸರಿನಲ್ಲಿ ಪ್ರತಿಜ್ಞೆ ಸ್ವೀಕರಿಸಿದ ಸರಕಾರಗಳು ಇದಕ್ಕೆ ಉತ್ತರ ನೀಡಬೇಕು. ಇದನ್ನೆಲ್ಲ ನೋಡಿದರೆ ಆ ಕಾಲದಲ್ಲಿ ಜಯತೀರ್ಥರು ಪಟ್ಟ ನೋವೆಂತಹದೆಂಬುದು ಯಾರಿಗಾದರೂ ಸ್ಪಷ್ಟವಾಗುತ್ತದೆ.

ಜಯತೀರ್ಥರು ತಹಸೀಲ್ದಾರರಾಗಿ, ಅಸಿಸ್ಟೆಂಟ್ ಕಮೀಷನರ್ ಆಗಿ, ಮುನಿಸಿಪಲ್ ಕಮೀಷನರ್ ಆಗಿ, ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಣಾಧಿಕಾರಿಯಾಗಿ, ನೀರಾವರಿ ಯೋಜನೆಗಳ ಆಡಳಿತಾಧಿಕಾರಿಯಾಗಿ, ವಿಶೇಷ ಜಿಲ್ಲಾಧಿಕಾರಿಯಾಗಿ, ಕನ್ನಡ ಅಭಿವೃದ್ಧಿ ನಿರ್ದೇಶನಾಲಯದ ಪ್ರಥಮ ನಿರ್ದೇಶಕರಾಗಿ, ವಿದ್ಯಾ ಇಲಾಖೆಯ ಉಪಕಾರ್ಯದರ್ಶಿಯಾಗಿ, ಜಿಲ್ಲಾಧಿಕಾರಿಯಾಗಿ, ವಿಶ್ವವಿದ್ಯಾಲಯದ ಕುಲಸಚಿವರಾಗಿ ಹೀಗೆ ಹತ್ತು ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದವರಾಗಿದ್ದರು. ತ್ರಿವೇಂಡ್ರಮ್‌ದಲ್ಲಿ ನಡೆದ ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಅನೇಕ ರೀತಿಯ ತರಬೇತಿಗಳನ್ನು-ಕಾರ್ಯಾಗಾರಗಳನ್ನು ನಡೆಸಿದ್ದರು. ಆಡಳಿತದ ಬಗೆಗೆ ಅವರಿಗೆ ಅಪಾರ ಅನುಭವವಿತ್ತು. ಕನ್ನಡ ಭಾಷೆಯ ಬಗೆಗೆ ಅವರಲ್ಲಿ ಅಪಾರ ಪ್ರೀತಿಯಿತ್ತು. ಹೀಗಾಗಿ ಆಡಳಿತದಲ್ಲಿ ಕನ್ನಡ ಯಶಸ್ವಿಯಾಗಲು ಸಾಧ್ಯವಾಯಿತು.

ಆಗಿನ ಮುಖ್ಯ ಕಾರ್ಯದರ್ಶಿಗಳಾಗಿದ್ದ ಜಿ.ವಿ.ಕೆ ರಾಯರು ಕನ್ನಡ ಅಭಿವೃದ್ಧಿ ಇಲಾಖೆಯನ್ನು ಜಯತೀರ್ಥರಿಗೆ ವಹಿಸಿಕೊಟ್ಟಿದ್ದು ಬಹುಮುಖ್ಯವಾದ ಚಾರಿತ್ರಿಕ ಸಂಗತಿ. ಆ ಸ್ಥಾನಕ್ಕೆ ಬೇರೆಯವರನ್ನು ನೇಮಿಸಿದ್ದರೆ, ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರುವಲ್ಲಿ ವಿಳಂಬವಾಗಬಹುದಿತ್ತು. ಆದರೆ ಜಯತೀರ್ಥರು ಆ ಹುದ್ದೆಗೆ ಹೇಳಿಮಾಡಿಸಿದಂತಿದ್ದರು. ಆಡಳಿತ ಭಾಷಾ ನೀತಿಯ ನಿರ್ವಹಣೆಯಲ್ಲಿ ಮೌಲಿಕವಾದ ಪಾತ್ರ ವಹಿಸಿದರು. ಕರ್ನಾಟಕದಲ್ಲಿ ಕನ್ನಡವನ್ನು ಅನಾಸಕ್ತಿಯಿಂದ ನೋಡುತ್ತಿದ್ದ ಅಧಿಕಾರಿಗಳಿಗೆಲ್ಲ ಜಯತೀರ್ಥರು ಸಿಂಹಸ್ವಪ್ನವಾದರು. ಅಂತವರಿಗೆ ನಿಷ್ಠುರರಾಗಿ ಕನ್ನಡ ಆಡಳಿತ ಭಾಷೆಯಾಗಿ ಅನುಷ್ಠಾನಗೊಳ್ಳುವಲ್ಲಿ ಯಶಸ್ವಿಯಾದರು.

ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಜಯತೀರ್ಥರು ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಕನ್ನಡ ಪದಕೋಶ, ಕಚೇರಿ ಕೈಪಿಡಿ,

ವ್ಯವಹಾರಿಕ ಕನ್ನಡ, ಪತ್ರ ಲೇಖನ ಈ ಮೊದಲಾದ ಗ್ರಂಥಗಳನ್ನು ಸಿದ್ಧಪಡಿಸಿಕೊಂಡರು. ಒಬ್ಬ ಸಾಮಾನ್ಯ ಅಧಿಕಾರಿಗೂ ಇಂತಹ ಸಲಕರಣೆಗಳಿಂದ ಆಡಳಿತದಲ್ಲಿ ಕನ್ನಡ ಬಳಸಲು ಸುಲಭವಾಯಿತು. ಜಯತೀರ್ಥರ ನೇತೃತ್ವದಲ್ಲಿ ಸಿದ್ಧಗೊಂಡ "ಕಚೇರಿ ಕೈಪಿಡಿ" ಇಂದಿಗೂ ಕೂಡ ಆಡಳಿತ ನಡೆಸುವವರಿಗೆ ಮಾರ್ಗದರ್ಶಿಯಗಿದೆ.

ಕನ್ನಡದ ನಿಷ್ಠೆ ಅವರಲ್ಲಿದ್ದುದರಿಂದ ಅವರು ಇತರ ಅಧಿಕಾರಿಗಳ ಮನವೊಲಿಸಿ ಕನ್ನಡವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಕೆಲವು ಅಧಿಕಾರಿಗಳು ಹಾಗೂ ಕಚೇರಿ ಸಿಬ್ಬಂದಿ ಈ ವಿಷಯದಲ್ಲಿ ನಿರಾಸಕ್ತಿ ಹೊಂದಿದಾಗ ಅವರಿಗೆ ಕನ್ನಡದ ಬಗೆಗೆ ಆಸಕ್ತಿ ಹುಟ್ಟುವ ಹಾಗೆ ಮಾಡಿದರು. ಇನ್ನು ಕೆಲವರು ಉದ್ದೇಶಪೂರ್ವಕವಾಗಿ ಕನ್ನಡವನ್ನು ನಿರ್ಲಕ್ಷಿಸಿದಾಗ, ಅಂತವರ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಬೇಕಾಗುತ್ತದೆಂದು ಗುಡುಗಿದರು. ಹೀಗೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಸಂದರ್ಭದಲ್ಲಿ ಜಯತೀರ್ಥರು ಸಾಮ–ಭೇದ–ದಂಡ ಮೂರೂ ರೀತಿಯ ಮಾರ್ಗಗಳನ್ನನುಸರಿಸಿದರು.

ಜಯತೀರ್ಥರು ತಮ್ಮ ಮೂರು ದಶಕಗಳ ಸೇವಾವಧಿಯಲ್ಲಿ ಅನೇಕ ವಿಭಾಗಗಳಲ್ಲಿ, ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿದರು. ಅವರು ಹೋದಲ್ಲೆಲ್ಲ ಕನ್ನಡ ಆಡಳಿತ ಭಾಷೆಯಾಗಿ ಅಣಿಗೊಳ್ಳುತಿತ್ತು. ಅವರು ತಹಸೀಲ್ದಾರರಾಗಿ ನೇಮಕಗೊಂಡಾಗಲೇ ಕನ್ನಡದ ಕಾರ್ಯ ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಅವರಿಗೆ ತೊಂದರೆಯಾಗಲಿಲ್ಲ, ಅಲ್ಲಿದ್ದ ಗ್ರಾಮಸೇವಕರು, ಶಿರಸ್ತೇದಾರರು ಕನ್ನಡವನ್ನು ಸಂತೋಷದಿಂದ ಕಚೇರಿಯಲ್ಲಿ ಬಳಸತೊಡಗಿದರು.

ಅದೇ ಮೈಸೂರು ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಣಾಧಿಕಾರಿಯಾಗಿ ಹೋದ ಮೇಲೆ, ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುತ್ತಿರುವಾಗ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅವರು ಹಲವಾರು ಸಮಸ್ಯೆಗಳನ್ನೆದುರಿಸಿದರು. ಮೈಸೂರು ವಿಶ್ವವಿದ್ಯಾಲಯ ಪರೀಕ್ಷಾ ನಿಯಂತ್ರಣಾಧಿಕಾರಿಗಳಾಗಿದ್ದಾಗ ಅವರು ಎದುರಿಸಿದ ಸಮಸ್ಯೆಗಳನ್ನು ಪ್ರೊ. ಕು.ಶಿ. ಹರಿದಾಸಭಟ್ಟ ಅವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಅಲ್ಲಿ ವಿದ್ಯಾರ್ಥಿಗಳೇ ಪರೀಕ್ಷಾಧಿಕಾರಿಗಳನ್ನು ನಿಯಂತ್ರಿಸುತ್ತಿದ್ದರು. ಮೈಸೂರಿನ ಪರೀಕ್ಷಾ ವಿಭಾಗ ಎಷ್ಟೋ ಪ್ರಾಧ್ಯಾಪಕರನ್ನು, ಐ.ಎ.ಎಸ್ ಅಧಿಕಾರಿಗಳನ್ನು ಬಲಿ ತೆಗೆದುಕೊಂಡಿದೆಯೆಂದು ಭಟ್ಟರು ತಿಳಿಸಿದ್ದಾರೆ. ಜಯತೀರ್ಥರು ಇಂತಹ ಸಂದರ್ಭದಲ್ಲಿ ಪರೀಕ್ಷಾ ನಿಯಂತ್ರಣಾಧಿಕಾರಿಯಾಗಿ ದಿಟ್ಟತನದಿಂದ ಕಾರ್ಯ ನಿರ್ವಹಿಸಿದ್ದಲ್ಲದೆ, ಪರೀಕ್ಷಾಡಳಿತದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಿದರು. ಅಲ್ಲಿಂದ ಅವರು ಮರಳಿ ಮತ್ತೆ ರೆವಿನ್ಯೂ ಇಲಾಖೆಗೆ ಸೇರಿದರು.

ಕ್ರಿ.ಶ. ೧೯೬೭ರಲ್ಲಿ ಜಯತೀರ್ಥರು ರಾಯಚೂರ ಪುರಸಭೆಗೆ ಕಮೀಷನರ್ ಆಗಿ ಹೋದ ಮೇಲೆ ಅಲ್ಲಿ ಹೇಗೆ ಕನ್ನಡ ಕಟ್ಟುವ ಕೆಲಸವನ್ನು ಮಾಡಿದರೆಂಬುದನ್ನು, ಆಗ ನಗರ ಸಭೆಯ ಅಧ್ಯಕ್ಷರಾಗಿದ್ದ ಡಾ. ಸಂಗಮೇಶ್ವರ ಸರದಾರ ಅವರು ವಿವರವಾಗಿ ಹೇಳಿದ್ದಾರೆ. ಅವರು ಕಮೀಷನರ್‌ರಾಗಿ ಬಂದ ಮೇಲೆ ರಾಯಚೂರಿನಲ್ಲಿ ಉತ್ಸಾಹದ ವಾತಾವರಣ ಮೂಡಿತು. ಸ್ವತಃ ರಾಯಚೂರ ಜಿಲ್ಲೆಯವರಾಗಿದ್ದ ಜಯತೀರ್ಥರು ರಾಯಚೂರ ಪುರಸಭೆಯ ಅಧ್ಯಕ್ಷರನ್ನು, ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗಿರುವ ಹಕ್ಕು ಮತ್ತು ಸೌಲಭ್ಯಗಳನ್ನು ಮೊದಲು ತಿಳಿಸಿಕೊಟ್ಟರು. ಉರ್ದುಮಯವಾಗಿದ್ದ ಪುರಸಭೆಯನ್ನು ಕನ್ನಡಮಯ ಮಾಡಲು ಜಯತೀರ್ಥರು ನಿರಂತರ ಪ್ರಯತ್ನಿಸಿದರು. ಬೀದಿಗಳಿಗೆಲ್ಲ ಹೊಸದಾಗಿ ನಾಮಕರಣ ಮಾಡಿದರು, ಕನ್ನಡದಲ್ಲಿ ಫಲಕಗಳನ್ನು ಬರೆಸಿದರು. ಎಲ್ಲ ಬೀದಿಗಳ ನೈರ್ಮಲ್ಯ ಕಾಪಾಡಿದರು.

ತುಂಬಾ ಹಿಂದೆಯೇ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ ಕನ್ನಡಿಗ ಶ್ರೀಕಂಠೇಗೌಡರು, ಕನ್ನಡದ ಆಸ್ತಿಯೆಂದು ಖ್ಯಾತರಾದ ಮಾಸ್ತಿಯವರು, ನವರತ್ನ ರಾಮರಾಯರು, ಎಚ್.ಎಲ್. ನಾಗೇಗೌಡರು, ಸಿದ್ಧಯ್ಯ ಪುರಾಣಿಕರು, ಜಯತೀರ್ಥ ಪುರೋಹಿತರು ಇವರೆಲ್ಲಾ ಕನ್ನಡ ಕಟ್ಟಿದ ಅಧಿಕಾರಿಗಳೇ ಆಗಿದ್ದಾರೆ. ಕರ್ನಾಟಕದಲ್ಲಿ ಇಂತಹದೊಂದು ಪರಂಪರೆ ಬೆಳೆದುಕೊಂಡು ಬಂದಿದೆ. ಇವರು ಕಲಿತದ್ದು, ಕನ್ನಡೇತರ ಭಾಷೆ ಆದರೆ ಬೆಳೆಸಿದ್ದು ಕನ್ನಡವನ್ನು. ಆದರೆ ಇಂದಿನ ಎಷ್ಟೋ ಅಧಿಕಾರಿಗಳು ಕಲಿತಿದ್ದು ಕನ್ನಡ, ಆದರೆ ಬೆಳೆಸುತ್ತಿರುವುದು ಇಂಗ್ಲೀಷನ್ನು. ಈ ಕಾರಣಕ್ಕಾಗಿಯಾದರೂ ಇಂದಿನ ಕನ್ನಡ ಬಳಸದ ಅಧಿಕಾರಿಗಳು ಜಯತೀರ್ಥ ಪುರೋಹಿತರು ಹಾಗೂ ಅವರ ಸಮಕಾಲೀನ ಅಧಿಕಾರಿಗನ್ನು ಓದಬೇಕು. ಆಗ ತಾವು ನಾಡು-ನುಡಿಗೆ ಮಾಡುವಂತಹದ್ದು ಎಂತಹ ದ್ರೋಹವೆಂಬುದು ತಾನೇ ಸ್ಪಷ್ಟವಾಗುತ್ತದೆ.

ಜಯತೀರ್ಥರು ತಮ್ಮ ಅಧಿಕಾರವಧಿಯಲ್ಲಿ ವಿವಿಧ ಹುದ್ದೆಗಳಲ್ಲಿ, ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿದರು. ಭೂಕಂದಾಯದ ಅಧಿಕಾರಿಯಾಗಿ, ವಿಶೇಷ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವಿರುವಂತೆ, ವಿಶ್ವವಿದ್ಯಾಲಯದ ಕುಲಸಚಿವರಾಗಿ ಸೇವೆ ಸಲ್ಲಿಸಿರುವ ಅನುಭವವೂ ಇದೆ. ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಸರಕಾರ ನಿರ್ಧಾರ ತೆಗೆದುಕೊಂಡಾಗ ಕಣ್ಣೆದುರಿಗೆ ಬಂದವರು ಜಯತೀರ್ಥರು. ಆ ಹೊತ್ತಿಗಾಗಲೇ ಜಯತೀರ್ಥರು ಸಾಕಷ್ಟು ಕನ್ನಡದ ಕೆಲಸವನ್ನು ಮಾಡಿದ್ದರು.

ಕನ್ನಡ ಆಡಳಿತ ಭಾಷೆಯಾಗುವ ಮೊದಲು ಅದಕ್ಕೆ ಅಗತ್ಯವಾದ ವಾತಾವರಣವನ್ನು ನಿರ್ಮಿಸುವ ಕಾರ್ಯ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಸಿಕ್ಕಿತು. ಅದು ಆಡಳಿತ ಭಾಷೆ ಜಾರಿಗೆ ತರುವ ಸಿದ್ಧತೆಯ ಸಂದರ್ಭವಾಗಿತ್ತು.

ಆಡಳಿತ ಭಾಷೆಗೆ ಪೂರಕ ಸಾಹಿತ್ಯದ ನಿರ್ಮಾಣ ಆಗ ಅನಿವಾರ್ಯವಾಗಿತ್ತು. ಜಯತೀರ್ಥರು ರಾಜ್ಯದಾದ್ಯಂತ ವಿಚಾರ ಸಂಕಿರಣಗಳನ್ನೇರ್ಪಡಿಸಿದರು. ವಿವಿಧ ಹಂತಗಳಲ್ಲಿ ಭಾಷಾ ತರಬೇತಿ ನೀಡಿದರು. ಕನ್ನಡ ಬೆರಳಚ್ಚು ಕಲಿಯುವವರಿಗೆ, ಕಲಿಸುವವರಿಗೆ ಉತ್ತೇಜನ ಕೊಟ್ಟರು. ಸರಕಾರಿ ಕಚೇರಿಗಳಿಗೆ ಬೆರಳಚ್ಚು ಯಂತ್ರಗಳನ್ನು ಪೂರೈಸುವ ವ್ಯವಸ್ಥೆ ಮಾಡಿದರು. ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡು ಕಾರ್ಯಕ್ರಮ ರೂಪಿಸಲು ೧೫ ಲಕ್ಷ ರೂಪಾಯಿ ಬೇಕೆಂದಾಗ, ಸರಕಾರ ಕೂಡಲೇ ಕೇಳಿದಷ್ಟು ಹಣವನ್ನು ಬಿಡುಗಡೆ ಮಾಡಿತು.

ಪ್ರಾದೇಶಿಕ ಭಾಷೆಗಳನ್ನು ಆಡಳಿತದಲ್ಲಿ ಬೇರೆ ರಾಜ್ಯ ಸರಕಾರಗಳು ಹೇಗೆ ಬಳಸುತ್ತವೆಯೆಂಬುದನ್ನು ಅಧ್ಯಯನ ಮಾಡಲು, ಬೇರೆ ರಾಜ್ಯಗಳಿಗೆ ಜಯತೀರ್ಥರು ಪ್ರವಾಸ ಕೈಕೊಂಡು, ಕರ್ನಾಟಕದಲ್ಲಿ ಮಾಡಬೇಕಾದುದೇನೆಂಬುದನ್ನು ಸ್ಪಷ್ಟಪಡಿಸಿಕೊಂಡರು. ಪುರೋಹಿತರು ಕೈಕೊಂಡ ಈ ಕಾರ್ಯಕ್ಕೆ ರಾಷ್ಟ್ರಮನ್ನಣೆ ದೊರಕಿತು.

ದಕ್ಷಿಣ ರಾಜ್ಯಗಳ ಆಡಳಿತ ಭಾಷಾ ಸಮ್ಮೇಳನಗಳನ್ನು ಏರ್ಪಡಿಸಿದರು. ಈ ಆಡಳಿತ ಭಾಷೆ ಜಾರಿಗೆ ಸಂಬಂಧಿಸಿದಂತೆ ಮೂವತ್ತೆರಡು ಪ್ರಬಂಧಗಳು ಮಂಡನೆಯಾದವು. ಎಲ್ಲ ರಾಜ್ಯಗಳಿಗೂ ಸಮಾನವಾಗಿರುವ ಕೆಲವು ಸಮಸ್ಯೆಗಳನ್ನು ಕುರಿತು ಚರ್ಚಿಸಲಾಯಿತು. ಈ ವಿಷಯಕ್ಕೆ ಸಂಬಧಿಸಿದಂತೆ ರಾಷ್ಟ್ರೀಯ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಯಿತು.

ಕರ್ನಾಟಕ ಲೋಕಸೇವಾ ಆಯೋಗವು ಎರಡನೇ ದರ್ಜೆ ಗುಮಾಸ್ತರ ೫೦೦೦ ಹುದ್ದೆಗಳಿಗಾಗಿ ಅರ್ಜಿ ಕರೆದಿತ್ತು. ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಹೊಂದಿರಬೇಕೆಂದು ತಿಳಿಸಿತ್ತು. ಆದರೆ ಅಭ್ಯರ್ಥಿಗಳು ಇಂಗ್ಲೀಷ್‌ದಲ್ಲಿಯೇ ಪ್ರವೇಶ ಪರೀಕ್ಷೆ ಬರೆಯಬೇಕಾಗಿತ್ತು.

ಕೆ.ಪಿ.ಎಸ್.ಸಿ ನಡೆಸುತ್ತಿದ್ದ ಈ ಪರೀಕ್ಷೆಯಲ್ಲಿ ಇಂಗ್ಲೀಷ್ ಜತೆಗೆ ಕನ್ನಡದಲ್ಲಿಯೂ ಪ್ರಶ್ನೆಪತ್ರಿಕೆ ಇರಬೇಕೆಂಬುದು ರಾಜ್ಯದ ಬಹುತೇಕ ವಿದ್ಯಾರ್ಥಿಗಳ ಬಯಕೆಯಾಗಿತ್ತು. ಇದನ್ನು ಸಾಧಿಸಲು ಜಯತೀರ್ಥರು ಬಹುವಾಗಿ ಶ್ರಮಿಸಿದರು. ಅಡಿಗಡಿಗೆ ಅಡ್ಡಿ ಆತಂಕಗಳು ಎದುರಾದವು. ಆದರೂ ಜಯತೀರ್ಥರು ಬಿಡಲಿಲ್ಲ, ಹಿಡಿದಿದ್ದನ್ನು ಸಾಧಿಸಿದರು.

ಕೇಂದ್ರ ಸರಕಾರದಲ್ಲಿ ಯಾವುದೇ ಸರಕಾರಿ ಆಜ್ಞೆ ಇಂಗ್ಲೀಷ್‌ದಲ್ಲಿದ್ದರೆ, ಅದರ ಹಿಂದಿ ಪಾಠಾಂತರ ಪ್ರಕಟವಾಗಲೇಬೇಕು. ಇದು ಅಲ್ಲಿಯ ಪರಿಪಾಠ. ಕರ್ನಾಟಕದಲ್ಲಿಯೂ ಅಂತಹ ಪರಿಪಾಠವನ್ನು ಜಯತೀರ್ಥರು ಬೆಳೆಸಲಾರಂಭಿಸಿದರು. ಸರಕಾರದ ಮಟ್ಟದಲ್ಲಿ ಒಂದು ಭಾಷಾಂತರ ವಿಭಾಗ ಕಾರ್ಯೋನ್ಮುಖವಾಗಿರಬೇಕು. ಆಂಧ್ರ ಪ್ರದೇಶ ಹೇಗೆ ತನ್ನ ರಾಜ್ಯದಲ್ಲಿ ತೆಲುಗು ಆಡಳಿತ ಭಾಷೆಗೆ ಪ್ರಾಶಸ್ತ್ಯ ನೀಡಿದೆಯೋ ಅದೇ ರೀತಿ ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕೆಂದು ಜಯತೀರ್ಥರು ಕಚೇರಿಗಳಲ್ಲಿ ಎಲ್ಲ ಸಿಬ್ಬಂದಿಗೆ ಮನಮುಟ್ಟುವಂತೆ ಹೇಳುತ್ತಿದ್ದರು.

ತಮಿಳುನಾಡಿನಲ್ಲಿ ಇಂಗ್ಲೀಷ್ ಬೆರಳಚ್ಚು ಯಂತ್ರಗಳನ್ನೇ ವಾಪಸ್ ಪಡೆದರು. ಇಂಗ್ಲೀಷ್ ಬೆರಳಚ್ಚು ಯಂತ್ರಗಳೇ ಇಲ್ಲದಾದಾಗ ಅನಿವಾರ್ಯವಾಗಿ ಕಚೇರಿ ಸಿಬ್ಬಂದಿ ತಮಿಳಿನಲ್ಲಿ ಟೈಪ್ ಮಾಡಲು ಪ್ರಾರಂಭಿಸಿದರು. ಅದೇ ರೀತಿಯ ನಿರ್ಣಯಗಳನ್ನು ಕರ್ನಾಟಕವೂ ಕೈಕೊಳ್ಳಬೇಕೆಂದು ಜಯತೀರ್ಥರು ವಾದಿಸಿದರು. ಇಂಗ್ಲೀಷನ್ನು ಆಡಳಿತ ಭಾಷೆಯ ಸ್ಥಾನದಿಂದ ಕೆಳಗಿಳಿಸಿದರೆ, ಕೆಲಸ ಕಾರ್ಯಗಳು ವಿಳಂಬವಾಗುತ್ತವೆಂದು ಕಚೇರಿ ಸಿಬ್ಬಂದಿ ನೆಪ ತೆಗೆದಾಗ, ಜಯತೀರ್ಥರು ಸ್ಪಷ್ಟವಾದ ಉತ್ತರ ನೀಡಿದರು. ವಿಳಂಬವಾಗುವದಕ್ಕೆ ಭಾಷೆ ಕಾರಣವಲ್ಲ, ನಿಮ್ಮ ಸೋಮಾರಿತನ ಕಾರಣವೆಂದು ನೇರವಾಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರ್ಮಾಣವಾದಾಗ ಅದರ ಕರ್ಣಧಾರತ್ವ ಜಯತೀರ್ಥರ ಕೈಗೆ ಬಂತು. ವಿವಿಧ ಇಲಾಖೆಯಲ್ಲಿದ್ದ ಅಧಿಕಾರಿಗಳಿಗೆ ಕನ್ನಡ ಕಲಿಸುವ ಕೆಲಸ ಪ್ರಾರಂಭವಾಯಿತು. ಇವರೆಲ್ಲ ಕನ್ನಡ ಮಾತನಾಡಬಲ್ಲವರೇ ಆಗಿದ್ದರೂ, ಕನ್ನಡದಲ್ಲಿ ಆಡಳಿತ ನಡೆಸಲು ಆಗುತ್ತಿರಲಿಲ್ಲ. ಜಯತೀರ್ಥರು ಅದನ್ನೆಲ್ಲ ತಾಳ್ಮೆಯಿಂದ ಕಲಿಸಿಕೊಟ್ಟರು. ಆಡಳಿತ ಮಾಧ್ಯಮವಾಗಬೇಕಾದರೆ ಕನ್ನಡಕ್ಕಿರುವ ಅಗತ್ಯ ಹಾಗೂ ಅರ್ಹತೆಗಳನ್ನು ಕುರಿತು ಚಿಂತಿಸಿದರು.

ಕನ್ನಡ ಸಂಸ್ಕೃತಿಯ ಇಲಾಖೆಯಲ್ಲಿದ್ದಾಗ, ಸಾಹಿತ್ಯ – ಸಂಗೀತ – ಸಂಸ್ಕೃತಿಗಳು ಜನಸಮುದಾಯವನ್ನು ಮುಟ್ಟಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಈ ಯೋಜನೆಯಲ್ಲಿ ಮೊದಲ ಬಾರಿಗೆ ಪುರಂದರದಾಸರ ಉತ್ಸವವನ್ನು ಹಂಪಿಯಲ್ಲಿ ಮಾಡಿದರು. ಪ್ರತಿವರ್ಷ ಪುರಂದರದಾಸರ ಪುಣ್ಯತಿಥಿಯ ಹೊತ್ತಿಗೆ ಹಂಪೆಯಲ್ಲಿ ಒಂದು ದೊಡ್ಡ ಸಂಗೀತೋತ್ಸವ ನಡೆಯಬೇಕೆಂಬ ಯೋಜನೆ ಸಿದ್ಧಪಡಿಸಿ ಸರಕಾರದ ಅನುಮೋದನೆಯನ್ನು ಪಡೆದುಕೊಂಡರು. ಮುಂದೆ ಉಡುಪಿಯಲ್ಲಿ ಕನಕೋತ್ಸವ ಹಾಗೂ ಇತರ ಪ್ರದೇಶಗಳಲ್ಲಿ ಅಲ್ಲಿಯ ಪ್ರಾದೇಶಿಕೋತ್ಸವಗಳು ಪ್ರಾರಂಭವಾದವು.

ಜಯತೀರ್ಥರ ಸತತ ಪ್ರಯತ್ನದಿಂದ ಜಿಲ್ಲಾ ಮಟ್ಟದ – ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕನ್ನಡದ ಬಳಕೆ ತೀವ್ರಗತಿಯಿಂದ ಸಾಗಿತು. ಕನ್ನಡದ ಭಾಷಾ ಆಯೋಗದ ಕೆಲಸವೂ ಇವರ ನೇತೃತ್ವದಲ್ಲೆ ನಡೆದಿತ್ತು. ಆಮೇಲೆ ಅಕಾಡೆಮಿಗಳ ಕಾರ್ಯನಿರ್ವಹಣೆಯೂ ಇವರ ಪಾಲಿಗೇ ಬಂತು. ಹೀಗೆ ಎಲ್ಲ ಹಂತದಲ್ಲೂ ಕನ್ನಡವನ್ನು ಮೇಲೆತ್ತಲು ಜಯತೀರ್ಥರು ಶ್ರಮಿಸಿದರು.

ಕನ್ನಡ ಆಡಳಿತ ಭಾಷೆಗೆ ಸಂಬಂಧಿಸಿದಂತೆ, ಅದರ ಮಹತ್ವವನ್ನು ವಿವರಿಸುವ ಅವರ ಅನೇಕ ಭಾಷಣಗಳು ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕನ್ನಡ ನಾಡಿನಲ್ಲಿ ಕನ್ನಡದ ಸ್ಥಾನಮಾನ ಏನೆಂಬುದನ್ನು ಅವರು ಪ್ರತಿಪಾದಿಸಿದ್ದಾರೆ. ರಾಜ ಪುರೋಹಿತರ ಈ ಪ್ರಸಿದ್ಧಿಯನ್ನು ಕಂಡು, ಅವರ ಪ್ರಶಸ್ತಿಗಳನ್ನು ನೋಡಿ ಅವರ ಸಮಕಾಲೀನ ಅಧಿಕಾರಿಗಳಲ್ಲಿ ಕೆಲವರಿಗೆ ಅಸೂಯೆಯಿತ್ತು. ಕನ್ನಡ ಆಡಳಿತ ಭಾಷೆಯೆಂದು ಸರಕಾರ ಘೋಷಣೆ ಮಾಡುವದಕ್ಕಿಂತ ಮೊದಲೇ ಇವರು ಕನ್ನಡದ ಕೆಲಸವನ್ನು, ಅದಕ್ಕೆ ಸಂಬಂಧಿಸಿದ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಹೀಗೆ ಕನ್ನಡ ಕಡ್ಡಾಯಗೊಳಿಸಲು ಒತ್ತಾಯಿಸಿದಾಗ ಅನೇಕ ಅಧಿಕಾರಿಗಳು ಪ್ರಶ್ನಿಸಿದ್ದುಂಟು. ಡಾ. ಹಾ.ಮಾ. ನಾಯಕರು ಈ ವಿವರಗಳನ್ನು ತಮ್ಮ ಲೇಖನದಲ್ಲಿ ಕೊಟ್ಟಿದ್ದಾರೆ.

ಒಬ್ಬ ಅಧಿಕಾರಿ ಹಾ.ಮಾ. ನಾಯಕರವರಿಗೆ ಹೀಗೆ ಕೇಳಿದರು–"ಹೀಗೆ ಹೇಳಲು ನಿಮ್ಮ ರಾಜಪುರೋಹಿತರಿಗೆ ಅಧಿಕಾರ ಕೊಟ್ಟವರು ಯಾರು?". ಆಗ ಹಾ.ಮಾ.ನಾ ಅವರು ಅವರಿಗೆ ತಕ್ಕ ಉತ್ತರವನ್ನು ಹೀಗೆ ನೀಡಿದರು –"ರಾಜಪುರೋಹಿತರಿಗೆ ಕನ್ನಡದ ಜನ ಅಧಿಕಾರಿ ಕೊಟ್ಟಿದ್ದಾರೆ."–ಈ ಮಾತು ಕೇಳಿ ಆ ಅಧಿಕಾರಿ ಸುಮ್ಮನಾಗಿಬಿಟ್ಟರಂತೆ. ಇದು ತುಂಬ ಸಮರ್ಪಕವಾದ ಉತ್ತರವಾಗಿದೆ. ಕನ್ನಡ ಸಂಘಟನೆಗಳ, ಕನ್ನಡ ಕಾರ್ಯಕರ್ತರ ದೊಡ್ಡ ಶಕ್ತಿಯೆಂದರೆ ಅದು ಕನ್ನಡಿಗರದ್ದು. ಅಂತಹ ಆ ಸರ್ವೋಚ್ಚ ಅಧಿಕಾರ–ಶಕ್ತಿಯನ್ನು ಸರಕಾರದಿಂದಲೂ ಕಸಿದುಕೊಳ್ಳುವ ದಕ್ಕಾಗುವುದಿಲ್ಲ. ಏಕೆಂದರೆ ಸರಕಾರದ ಶಕ್ತಿಗಿಂತ ಜನಶಕ್ತಿ ದೊಡ್ಡದು. ಜಯತೀರ್ಥರಿಗೆ ಇವೆರಡೂ ಶಕ್ತಿಗಳ ಬಲ ಸಿಕ್ಕಿದ್ದರಿಂದ ಕನ್ನಡ ಅನುಷ್ಠಾನ ಸಾಧ್ಯವಾಯಿತು.

೧೯೭೦ಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾಗಿ ನೇಮಕಗೊಂಡು ಬಂದ ಜಯತೀರ್ಥರು, ಕೆಲವೇ ತಿಂಗಳುಗಳಲ್ಲಿ ಆ ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕಗೊಂಡು ೧೯೮೩ ರವರೆಗೆ ಸೇವೆ ಸಲ್ಲಿಸಿದ್ದರು. ಆ ದಶಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಈ ಪ್ರದೇಶದಲ್ಲಿ ಇನ್ನೂ ಸಮರ್ಪಕವಾಗಿ ಜಾರಿಯಾಗಿರಲಿಲ್ಲ. ಡಾ. ನಾಗರಜ ಅವರು ಆ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿದ್ದರು. ಪ್ರಾರಂಭದಲ್ಲಿ ಸಿಬ್ಬಂದಿ ನೇಮಕಾತಿ ಆದೇಶಗಳು

ಇಂಗ್ಲೀಷದಲ್ಲಿಯೇ ಇದ್ದವು. ಈ ವಿಷಯದ ಬಗೆಗೆ ಗಂಭೀರರಾದ ಜಯತೀರ್ಥರು, ಕುಲಪತಿಗಳೊಂದಿಗೆ ಚರ್ಚಿಸಿ ಕನ್ನಡದಲ್ಲಿಯೇ ಆಡಳಿತ ವ್ಯವಹಾರವಾಗಬೇಕೆಂದು ವಿಶ್ವವಿದ್ಯಾಲಯದ ಸಿಬ್ಬಂದಿಗೆ ತಾಕೀತು ಮಾಡಿದರು. ನಂತರದ ಅವಧಿಗೆ ಡಾ. ಹಾ.ಮಾ. ನಾಯಕ ಕುಲಪತಿಯಾಗಿ ಬಂದರು, ಜಯತೀರ್ಥರು ಆಗ ನಿವೃತ್ತರಾಗಿದ್ದರು. ಜಯತೀರ್ಥರು ಹಚ್ಚಿದ ಕನ್ನಡದ ಬಳ್ಳಿಯನ್ನು ಹಾಮಾನಾಯಕರು ವಿಶ್ವವಿದ್ಯಾಲಯದ ತುಂಬ ಬೆಳೆಸಿದರು. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಾರಂಭದ ಕುಲಸಚಿವರಾಗಿ ಜಯತೀರ್ಥರು ಮಾಡಿದ ಕಾರ್ಯ ಶ್ಲಾಘನೀಯವಾಗಿದೆ. ನಿವೃತ್ತಿಯಾಗಿ ಮೂರು ವರ್ಷಗಳ ನಂತರ ಅವರು ನಿಧನರಾದರು.

ಹೈದ್ರಾಬಾದ ಕರ್ನಾಟಕ ಪ್ರದೇಶದ ಅಂದಿನ ಮೂರೂ ಜಿಲ್ಲೆಗಳ ಪ್ರತಿಯೊಂದು ಊರು–ತಾಲಕಿನ ಪರಿಚಯ ಅವರಿಗಿತ್ತು. ರಾಯಚೂರ ಜಿಲ್ಲೆಯಲ್ಲಿ ಹುಟ್ಟಿದ್ದರು, ಬೀದರ – ಕಲಬುರ್ಗಿ ಜಿಲ್ಲೆಗಳಲ್ಲಿ ಕೆಲಸ ಮಾಡಿದರು. ಹೀಗಾಗಿ ಈ ಪ್ರದೇಶದ ಎಲ್ಲ ವಿದ್ಯಮಾನಗಳೂ ಅವರಿಗೆ ಗೊತ್ತಿದ್ದವು. ಜನರನ್ನು ಬಹುವಾಗಿ ಹಚ್ಚಿಕೊಳ್ಳುತ್ತಿದ್ದ ಜಯತೀರ್ಥರು ನಗುನಗುತ್ತಲೇ ಕೆಲಸ ಮಾಡಿಕೊಡುತ್ತಿದ್ದರು. ಇದು ಅವರ ಆಡಳಿತ ಶೈಲಿಯ ವಿಶಿಷ್ಟತೆಯಾಗಿತ್ತು.

ಆಡಳಿತ ಕನ್ನಡಕ್ಕೆ ಸಂಬಂಧಿಸಿದಂತೆ ಜಯತೀರ್ಥರ ಅನೇಕ ಬಿಡಿಲೇಖನಗಳು ಗಮನ ಸೆಳೆಯುತ್ತವೆ. "ಆಡಳಿತ ಕನ್ನಡ" ಎಂಬ ಅವರ ಪ್ರಬಂಧವು, ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಿಂದ ಪ್ರಕಟವಾಗಿದೆ. ಈ ಲೇಖನದಲ್ಲಿ ಜಯತೀರ್ಥರು ಆಡಳಿತದಲ್ಲಿ ಕನ್ನಡವನ್ನು ಏಕೆ ಬಳಸಬೇಕು? ಹೇಗೆ ಬಳಸಬೇಕು? ಎಂಬಂತಹ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದ್ದಾರೆ. ಅವರ ಈ ಪ್ರಬಂಧ "Kannada in Administration"ಹೆಸರಿನಲ್ಲಿ ಇಂಗ್ಲೀಷ್‌ದಲ್ಲಿಯೂ ಪ್ರಕಟವಾಗಿದೆ. ಕನ್ನಡ ಬಾರದ ಉನ್ನತ ಅಧಿಕಾರಿಗಳಿಗೆ ಕನ್ನಡ ಆಡಳಿತ ಭಾಷೆಯ ಮಹತ್ವವನ್ನು ತಿಳಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

"Official Language Problems Analysed" – ಎಂಬ ಸಂಪಾದಿತ ಇಂಗ್ಲೀಷ್ ಕೃತಿಯ ಉದ್ದೇಶವೂ ಇದೇಯಾಗಿದೆ. ಆಡಳಿತ ಭಾಷೆಯನ್ನಾಗಿ – ಕಚೇರಿ ಭಾಷೆಯನ್ನಾಗಿ ಬಳಸುವಾಗ ಬರುವ ಸಮಸ್ಯೆಗಳನ್ನು ಕುರಿತು ಇಲ್ಲಿಯ ಲೇಖನಗಳು ಚರ್ಚಿಸುತ್ತವೆ. ಈ ಕೃತಿ ಮೊದಲು ಕನ್ನಡದಲ್ಲಿ "ಆಡಳಿತ ಭಾಷಾ ಸಮಸ್ಯೆಯ ವಿಶ್ಲೇಷಣೆ" ಎಂಬ ಹಸರಿನಲ್ಲಿ ಪ್ರಕಟವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕೃತಿಯನ್ನು ಪ್ರಕಟಿಸಿದೆ.

ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ "ಕಚೇರಿ ಕೈಪಿಡಿ"

ಮತ್ತೊಂದು ಮಹತ್ವದ ಸಂಪಾದಿತ ಕೃತಿ. ಈ ಕೃತಿ ಹೆಸರೇ ಸೂಚಿಸುವಂತೆ ಕನ್ನಡ ಆಡಳಿತ ಭಾಷೆ ಮಾಡುವವರಿಗೆ ನಿಜಕ್ಕೂ ಕೈಪಿಡಿಯಾಗಿದೆ. ಪ್ರತಿಯೊಂದು ಕಚೇರಿಯಲ್ಲಿಯೂ ಈ ಕೃತಿ ಸಿಗುತ್ತದೆ. ಕನ್ನಡವನ್ನು ಬಳಸಲು ಹಿಂಜರಿಯುತ್ತಿರುವವರಿಗೆ ಇಂತಹ ಕೃತಿಗಳು ಮಾರ್ಗದರ್ಶನ ನೀಡುತ್ತವೆ.

ಕನ್ನಡವನ್ನು ಆಡಳಿತಭಾಷೆಯನ್ನಾಗಿ ಮಡಬೇಕೆಂಬ ಉದ್ದೇಶದಿಂದ ಜಯತೀರ್ಥರು ಅನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ. ಅವು ಅಂದಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. "ಆಡಳಿತ ಭಾಷೆ" ಹೆಸರಿನ ಲೇಖನ ೧೯೭೪ರ "ಕನ್ನಡ ನುಡಿ"ಯಲ್ಲಿ ಪ್ರಕಟವಾಗಿದೆ. ಸಂಕ್ಷಿಪ್ತವಾದ ಲೇಖನ ಇದಾಗಿದ್ದರೂ ಆಡಳಿತ ಭಾಷೆಗೆ ಸಂಬಂಧಿಸಿದಂತೆ ಅನೇಕ ಮಹತ್ವದ ಸಂಗತಿಗಳನ್ನು ತಿಳಿಸುತ್ತದೆ.

"ಕನ್ನಡ ಅಭಿವೃದ್ಧಿಯ ಎರಡು ವರ್ಷಗಳು" –ಎನ್ನುವ ಮತ್ತೊಂದು ಲೇಖನವು ಸಂಯುಕ್ತ ಕರ್ನಾಟಕ, ಕನ್ನಡ ನುಡಿ, ಉದಯವಾಣಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ೧೯೭೮ರಲ್ಲಿ ಈ ಲೇಖನವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದೆ.

೧೯೭೭ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟವಾಗಿರುವ ಅವರ ಇನ್ನೊಂದು ಪ್ರಮುಖ ಲೇಖನವೆಂದರೆ – "ಆಡಳಿತದಲ್ಲಿ ಕನ್ನಡವೇ ಏಕೆ ಬೇಕು?" ಎಂಬುದಾಗಿದೆ. ಕನ್ನಡದ ಮಹತ್ವವನ್ನು ಆ ಭಾಷೆಯ ಸಮೃದ್ಧಿಯನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

"ಲೋಕಸೇವಾ ಆಯೋಗ ಪರೀಕ್ಷೆಗಳಲ್ಲಿ ಕನ್ನಡ" ಎಂಬ ಇನ್ನೊಂದು ಲೇಖನ ೧೯೭೭ರಲ್ಲಿ "ಆಡಳಿತ ಭಾಷೆ ಸಮಸ್ಯೆಗಳ ವಿಶ್ಲೇಷಣೆ" ಗ್ರಂಥದಲ್ಲಿ ಪ್ರಕಟವಾಗಿದೆ. ಲೋಕಸೇವಾ ಆಯೋಗ ನಡೆಸುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮೊದಲು ಕನ್ನಡ ವಿಷಯವಿರಲಿಲ್ಲ. ನಂತರದಲ್ಲಿ ಜಯತೀರ್ಥರು ಹಾಗೂ ಇತರ ಕನ್ನಡ ಕಟ್ಟಾಳುಗಳ ಹೋರಾಟದಿಂದ ಅದು ಸಾಧ್ಯವಾಯಿತು.

೧೯೬೯ರಲ್ಲಿ "ಕಸ್ತೂರಿ" ಪತ್ರಿಕೆಯಲ್ಲಿ ಪ್ರಕಟವಾಗಿರುವ ಅವರ ಲೇಖನ– "ಆಡಳಿತದಲ್ಲಿ ದಕ್ಷತೆ ಏಕಿಲ್ಲ?" ಎಂಬುದು, ಅಧಿಕಾರಿಗಳ ಅದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಹೀಗೆ ಆಡಳಿತದಲ್ಲಿ ಕನ್ನಡ ತರಲು ಜಯತೀರ್ಥರು ಅನೇಕ ರೀತಿಯ ಪ್ರಯತ್ನಗಳನ್ನು ಮಾಡಿರುವುದು ಕಂಡುಬರುತ್ತದೆ.

**ಆ)ಕನ್ನಡ ತೀರ್ಪುಗಳು**

ಜಯತೀರ್ಥ ಪುರೋಹಿತರು ಚಿತ್ರದುರ್ಗದಲ್ಲಿ ವಿಶೇಷ ಜಿಲ್ಲಾಧಿಕಾರಿಯಾಗಿ

ಸೇವೆ ಸಲ್ಲಿಸುತ್ತಿದ್ದಾಗ ಪ್ರಥಮವಾಗಿ ಕನ್ನಡದಲ್ಲಿ ತೀರ್ಪುಗಳನ್ನು ನೀಡಿದರು. ಕನ್ನಡ ಭಾಷೆಯ ಅನುಷ್ಠಾನ ಕಾರ್ಯಕ್ರಮದಲ್ಲಿ ಇದು ಅತ್ಯಂತ ಮಹತ್ವದ ಹೆಜ್ಜೆ. ಇಂದಿಗೂ ಕೂಡ ನ್ಯಾಯಾಲಯಗಳಲ್ಲಿ ಕನ್ನಡ ಕಾಣಿಸುತ್ತಿಲ್ಲ. ಕನ್ನಡದಲ್ಲಿ ತೀರ್ಪು ನೀಡುವ ನ್ಯಾಯಾಧೀಶರ ಸಂಖ್ಯೆಯಂತೂ ತುಂಬ ವಿರಳ. ಆ ಕಾಲಘಟ್ಟದಲ್ಲಿ ಕನ್ನಡದಲ್ಲಿ ತೀರ್ಪುಗಳನ್ನು ನೀಡಿ ಜಯತೀರ್ಥರು ಇತಿಹಾಸ ನಿರ್ಮಿಸಿದರು.

ಭಾರತ ಹಳ್ಳಿಗಳ ದೇಶ; ಇಲ್ಲಿ ಇಂಗ್ಲೀಷ ಬಲ್ಲವರ ಸಂಖ್ಯೆ ಬಹಳ ವಿರಳ. ಆಯಾ ರಾಜ್ಯದ ರಾಜ್ಯ ಭಾಷೆಯಲ್ಲಿಯೇ ವ್ಯವಹಾರ ನಡೆಸುವದರಿಂದ, ತೀರ್ಪು ನೀಡುವದರಿಂದ ಅಲ್ಲಿಯ ಗ್ರಾಮೀಣ ಜನತೆಗೆ ಅನುಕೂಲವಾಗುತ್ತದೆ. ಇಂಗ್ಲೀಷ್‌ದಲ್ಲಿ ತೀರ್ಪು ಇದ್ದಾಗ, ಅದನ್ನು ತಿಳಿದುಕೊಳ್ಳಲು ಗ್ರಾಮೀಣರು ಪರದಾಡ ಬೇಕಾಗುತ್ತದೆ.

ಗ್ರಾಮೀಣ ಜನರ ಜೀವನಾಡಿಯನ್ನು ಬಲ್ಲ ಜಯತೀರ್ಥರು ಕನ್ನಡದಲ್ಲಿ ತೀರ್ಪುಗಳನ್ನು ನೀಡಿದರು. ಆ ಕಾಲದಲ್ಲಿ ಇದಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಕೋಶಗಳಿರಲಿಲ್ಲ, ಉತ್ತೇಜನ ನೀಡುವವರೂ ಬಹಳ ಕಡಿಮೆ. ಅಂತಹ ಸಂದರ್ಭದಲ್ಲಿ ಕನ್ನಡದಲ್ಲಿ ತೀರ್ಪುಗಳನ್ನು ನೀಡಿ, ಮತ್ತೆ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು ಅತ್ಯಂತ ಮಹತ್ವದ ಸಂಗತಿ.

ಕನ್ನಡ ಭಾಷೆ ಎಲ್ಲ ಹಂತದಲ್ಲಿ ಸಶಕ್ತವಾದ ಭಾಷೆ. ಆದರೆ ಬಹಳಷ್ಟು ಅಧಿಕಾರಿಗಳಿಗೆ – ನ್ಯಾಯಾಧೀಶರಿಗೆ ಈ ನಾಡಿನಲ್ಲಿ ಕನ್ನಡ ಬರುವದಿಲ್ಲ. ಆ ರಾಜ್ಯದ ರಾಜ್ಯ ಭಾಷೆಯನ್ನು ಬಳಸದೇ ಇರುವದೆಂದರೆ ಪ್ರಜ್ಞಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅಪಮಾನವೆಂದೇ ಅರ್ಥ. ಯಾವ ನೆರವೂ ಇಲ್ಲದ ಸಂದರ್ಭದಲ್ಲಿ, ಕನ್ನಡದ ಬಗೆಗೆ ಮೂಗುಮುರಿಯುತ್ತಿದ್ದ ಜನರೇ ಹೆಚ್ಚಾಗಿದ್ದ ಕಾಲದಲ್ಲಿ ಕನ್ನಡದಲ್ಲಿ ತೀರ್ಪುಗಳನ್ನು ನೀಡಿರುವುದು, ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು, ಜಯತೀರ್ಥರ ಕ್ರಾಂತಿಕಾರಕ ಹೆಜ್ಜೆಯಾಗಿದೆ.

ಜಯತೀರ್ಥರು ಇಂತಹ ಮಹತ್ವದ ಕಾರ್ಯಸಾಧನೆಗಾಗಿ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಪಾರಿಭಾಷಿಕ ಪದಗಳನ್ನು ಕಂಡುಕೊಂಡಿದ್ದರು. ಹೀಗಾಗಿ ಧೈರ್ಯದಿಂದ ಮುನ್ನುಗ್ಗಿದರು. ಇವತ್ತಿನ ಕಾಲಘಟ್ಟದಲ್ಲಿಟ್ಟು ಆ ತೀರ್ಪುಗಳನ್ನು ನೋಡಿದಾಗ ಅದರಲ್ಲಿ ಅನೇಕ ಅರೆ–ಕೊರೆಗಳು ಕಾಣಿಸುತ್ತವೆ. ಅಗತ್ಯಕ್ಕಿಂತ ಹೆಚ್ಚು ಸಂಸ್ಕೃತ ಶಬ್ದಗಳು, ಪದಪುಂಜಗಳು ಅಲ್ಲಿರುವದನ್ನು ಕಾಣಬಹುದು. ಉದಾಹರಣೆಗೆ "ಪ್ರಿಸಾಯಿಡಿಂಗ್ ಆಫೀಸರ್" ಪದಕ್ಕೆ ಅವರು "ಅಧಿಷ್ಠಿತರು" ಪದವನ್ನು ಬಳಸುತ್ತಾರೆ. ಇಂಗ್ಲೀಷಿನ "ಪ್ರೋಕ್ಲೇಮೆಷನ್" ಪದಕ್ಕೆ ಸಂವಾದಿಯಾಗಿ "ಪ್ರಖ್ಯಾಪನ" ಪದವನ್ನು ತರುತ್ತಾರೆ.

ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕೆನ್ನುತ್ತದೆ. ಕನ್ನಡ, ಆಡಳಿತ ಭಾಷೆಯಾಗುವದೆಂದರೆ ಯಾವ ಕನ್ನಡ? ಯಾವ ಕಾಲದ ಕನ್ನಡ? ಎಂಬ ಪ್ರಶ್ನೆಗಳು ತಲೆಯೆತ್ತುತ್ತವೆ. ಸಂಸ್ಕೃತ ಭೂಯಿಷ್ಠ ಕನ್ನಡವಾಗಲಿ, ನಯಸೇನ ಧರ್ಮಾಮೃತದಲ್ಲಿ ಬಳಸಿದ ಕನ್ನಡವಾಗಲಿ, ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಕನ್ನಡವಾಗಲಿ, ಗೋಪಾಲಕೃಷ್ಣ ಅಡಿಗರ ಭೂಮಿಗೀತದಲ್ಲಿ ಕಾಣಿಸಿ ಕೊಂಡಿರುವ ಕನ್ನಡವಾಗಲಿ – ಇವು ಯಾವೂ ಜನ ಸಾಮಾನ್ಯರ ಕನ್ನಡವಲ್ಲ. ಇಂತಹ ಮಾದರಿಗಳನ್ನು ತಂದು ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಿದರೆ, ಜನ ಸಾಮಾನ್ಯರಿಗೆ ನೀರಿಳಿಯದ ಗಂಟಲಲ್ಲಿ ಕಡಬು ತುರುಕಿದಂತಾಗುತ್ತದೆ.

ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಉದ್ದೇಶವೆಂದರೆ ಸಾಮಾನ್ಯ ಜನತೆಗೆ ಅದು ಅರ್ಥವಾಗಬೇಕೆಂಬುದು. ಹೀಗಾಗಿ ಜನಸಾಮಾನ್ಯರು ದಿನನಿತ್ಯ ಬಳಸುವ ಭಾಷೆಯೇ ನಿಜವಾದ ಕನ್ನಡ. ಅದರಲ್ಲಿ ಅನೇಕ ಪದಗಳು ಬೇರೆ ಬೇರೆ ಭಾಷೆಯವುಗಳಾಗಿರಬಹುದು. ಯಾವುದೇ ಭಾಷೆ ಬೆಳೆಯಬೇಕಾದರೆ ಕೊಡು-ಕೊಳ್ಳುವಿಕೆ ತೀರಾ ಅನಿವಾರ್ಯ. ಆ ಕಾರಣಕ್ಕಾಗಿಯೇ ತತ್ಸಮ-ತದ್ಭವಗಳಿರುವುದು. ಶುದ್ಧ ಕನ್ನಡ (ಪ್ಯೂರ್ ಕನ್ನಡ) ಎಂಬ ಗ್ರಹಿಕೆಯೇ ತಪ್ಪು ತಿಳುವಳಿಕೆಯಿಂದ ಬಂದುದಾಗಿದೆ. ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಾಗ ಇಂತಹ ಎಲ್ಲ ಭ್ರಮೆಗಳನ್ನು ಕೈಬಿಟ್ಟು, ನೇರವಾಗಿ ಜನಸಾಮಾನ್ಯರಿಗೆ ತಿಳಿಯುವಂತಹ ಕನ್ನಡವನ್ನೇ ಬಳಸಬೇಕು. Bank ಇಂಗ್ಲೀಷ್ ಪದ, ಬ್ಯಾಂಕು ಕನ್ನಡ ಪದ; ಹೀಗೆ ಅನೇಕ ಇಂಗ್ಲೀಷ್ ಪದಗಳು ಕನ್ನಡದ ನಾಲಿಗೆಗೆ ಬಂದಾಗ ಸಹಜವಾಗಿಯೇ ತತ್‌ಸಮ ಪದಗಳಾಗಿ ಬಿಡುತ್ತವೆ ; ಕನ್ನಡ ಬಳಸುವವರು ಇದನ್ನು ಗಮನಿಸಬೇಕು. ಅದನ್ನು ಬಿಟ್ಟು Bank ಎಂದರೆ "ಹಣ ಇಡುವ ಮನೆ" ಅಥವಾ "ಹಣ ಇಟ್ಟು ತೆಗೆದುಕೊಳ್ಳುವ ಮನೆ" ಎಂದು ಬಳಸುವುದು ಸೂಕ್ತವಾಗುವದಿಲ್ಲ. ಅದೇ ರೀತಿ "ತೀರ್ಥ" ಪದವನ್ನು ಇಂಗ್ಲೀಷ್‌ದಲ್ಲಿ ಬಳಸಬೇಕಾದಾಗ water ಎಂದು ಬಳಸುವದು ದೊಡ್ಡ ತಪ್ಪು. ತೀರ್ಥ-water ಅಲ್ಲ. ಭಾಷೆ ಯಾವಾಗಲೂ ಸಂಸ್ಕೃತಿಯನ್ನವಲಂಬಿಸಿರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ "ತೀರ್ಥ" ಪದ ಇಲ್ಲ, ಅದೇ ರೀತಿ ಕನ್ನಡದಲ್ಲಿ '"Bank' ಪದ ಇಲ್ಲ. ಆಗ ಪಾಶ್ಚಾತ್ಯರು "ತೀರ್ಥ" ಪದವನ್ನು ಅದೇ ಹೆಸರಿನಲ್ಲಿ ಬಳಸುತ್ತಾರೆ, ಅದರಂತೆ ನಾವೂ ಕೂಡ Bank ಪದವನ್ನು ಬ್ಯಾಂಕು ಎಂದು ಬಳಸುವುದು ಸೂಕ್ತವಾದುದಾಗಿದೆ.

ಇಲ್ಲಿ ಜಯತೀರ್ಥರು "ಪ್ರಿಸಾಯಿಡಿಂಗ್ ಆಫೀಸರ್" ಪದಕ್ಕೆ "ಅಧಿಷ್ಠಿತ"ರೆಂದು ಬಳಸಿದ್ದಾರೆ. ಈ "ಅಧಿಷ್ಠಿತರು" ಪದ ಯಾರಿಗೆ ತಿಳಿಯುತ್ತದೆ? ಇಂತಹ ಅನೇಕ ಸಮಸ್ಯೆಗಳು – ಸವಾಲುಗಳು ಕಾಣಿಸಿಕೊಳ್ಳುವುದು ಸಹಜ. ಇಂತಹ

ಸಂದರ್ಭಗಳಲ್ಲಿ ಆಡಳಿತಗಾರರಿಗೆ ಜನಸಾಮಾನ್ಯರು ಮತ್ತು ಅಂದು ಅವರು ಆಡುವ ಭಾಷೆ ಮುಖ್ಯವಾಗಬೇಕೇ ಹೊರತು, ಯಾವುದೇ ಪಾಂಡಿತ್ಯ ಪೂರ್ಣವಾದ ಭಾಷೆಯೂ ಅಲ್ಲ, ಕಾವ್ಯದ ಭಾಷೆಯೂ ಅಲ್ಲ.

ಈ ನೆಲೆಯಲ್ಲಿ ನೋಡಿದಾಗ ಜಯತೀರ್ಥರು ನೀಡಿದ ಕನ್ನಡ ತೀರ್ಪುಗಳಲ್ಲಿ ಅನೇಕ ಮಿತಿಗಳಿವೆ. ಆದರೆ ಆ ಸಂದರ್ಭದಲ್ಲಿ ಅದು ಅನಿವಾರ್ಯವಾಗಿತ್ತು. ಧೈರ್ಯದಿಂದ ಕನ್ನಡ ಬಳಸುವುದು ಅಗತ್ಯವಾಗಿತ್ತು. ಸಂಸ್ಕೃತ ಪದಗಳಿರಲಿ, ಸಂಸ್ಕೃತ ಭೂಯಿಷ್ಠ ಶೈಲಿಯಿರಲಿ, ಮೊದಲು ಇಂಗ್ಲೀಷನ್ನು ಕೈಬಿಡಬೇಕಾಗಿತ್ತು. ಆ ಹಿನ್ನೆಲೆಯಲ್ಲಿ ಕನ್ನಡ ತೀರ್ಪುಗಳನ್ನು ಪರಿಶೀಲಿಸಬೇಕಾಗುತ್ತದೆ.

ಜಯತೀರ್ಥರು ಒಬ್ಬ ಸಂಶೋಧನಾ ವಿದ್ಯಾರ್ಥಿಯಂತೆ ಆಗ ಕೆಲಸ ಮಾಡಿದರು. ಇದಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಸಂಗ್ರಹಿಸಿದರು. ಪಾರಿಭಾಷಿಕ ಪದಗಳಿಗೆ ಸಂಬಂಧಿಸಿದಂತೆ, ಅನುಬಂಧಗಳಿಗೆ ಸಂಬಂಧಿಸಿದಂತೆ ಹಸ್ತಪ್ರತಿಗಳನ್ನು, ಎಪಿಗ್ರಾಫಿಯ ಕರ್ನಾಟಕ ವಿಭಾಗದ ಶಾಸನ ಸಂಪುಟಗಳನ್ನು ಪರಿಶೀಲಿಸಿದರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಂತವರ ಮೂಲಕ ಶತಮಾನಕ್ಕೂ ಹಿಂದಿದ್ದ ಕನ್ನಡ ತೀರ್ಪುಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದರು. ಜನಪದ ನ್ಯಾಯಪದ್ಧತಿಯ ಪ್ರಸಂಗಗಳನ್ನು ಅವರು ತಿಳಿದುಕೊಂಡಿದ್ದರು. ಇದು ಅವರಲ್ಲಿದ್ದ ಕನ್ನಡದ ಬಗೆಗಿನ ನಿಷ್ಠೆಯನ್ನು ಹೇಳುತ್ತದೆ.

ಜಯತೀರ್ಥರು ಎಲ್ಲರಿಗೂ ತಿಳಿಯುವಂತೆ ಸರಳ ಕನ್ನಡದಲ್ಲಿ ತೀರ್ಪುಗಳನ್ನಿತ್ತಿದ್ದಾರೆ. ಈ ತೀರ್ಪುಗಳ ಶೈಲಿ, ಪರಿಭಾಷೆ ಇಂದಿನ ಅಧಿಕಾರಿಗಳಿಗೆ ಮಾದರಿಯಾಗಿದೆ.

"ಆ ಆಜ್ಞೆಯ ವಿರುದ್ಧ ತೇಲ್ಕರ ಸಹಾಯಕ ಕಮೀಷನರ ಹತ್ತಿರ ಅಪೀಲು ದಾಖಲೆ ಮಡಿದಾಗ ಅವರು ದಿನಾಂಕ : ೨೪-೯-೭೧ ರಂದು ಆಜ್ಞೆ ಮಾಡಿ ಈ ಪ್ರಕರಣದ ಮರು ವಿಚಾರಣೆಗಾಗಿ ತಹಸೀಲ್ದಾರರಿಗೆ ವಾಪಸ್ ಮಾಡಿದರು."

– (ಪು : ೧೦೭, ಕನ್ನಡ ತೀರ್ಪುಗಳು)

"ಸಂಬಂಧಿತ ದಾಖಲೆಗಳೊಂದಿಗೆ ಅಪರಾಧಿ ನೌಕರನ ವಿವರಣೆಯನ್ನು ಪರಾಂಬರಿಸಲಾಯಿತು. ವಿವರಣೆಗಳು ಸಮರ್ಪಕವಾಗಿಲ್ಲ. ಆಪಾದನೆಗಳು ಸಂಶಯಾತೀತವಾಗಿ ಸಾಬೀತಾಗಿವೆಯೆಂಬುದು ನನ್ನ ನಿರ್ಧಾರವಾಗಿದೆ."

– (ಪು : ೧೯೩, ಕನ್ನಡ ತೀರ್ಪುಗಳು)

ಜಯತೀರ್ಥರ "ಕನ್ನಡ ತೀರ್ಪುಗಳು" ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದೆ. ಈ ಪುಸ್ತಕದಲ್ಲಿ ಪ್ರಸ್ತಾವನೆ, ನಿದರ್ಶನ ಮತ್ತು ಅನುಬಂಧಗಳೆಂಬ

ಮೂರು ಭಾಗಗಳಿವೆ. ಇವು ಸಮಗ್ರವಾಗಿವೆ, ಪರಿಪೂರ್ಣವಾಗಿವೆಯೆಂದು ಲೇಖಕರು ಹೇಳಿಲ್ಲ, ಬದಲಾಗಿ ಈ ಕೃತಿ ಕುರಿತು ಅವರು ಹೀಗೆ ಹೇಳಿದ್ದಾರೆ.

"ಇವು ರೆವಿನ್ಯೂ ನ್ಯಾಯಾಲಯದ ತೀರ್ಪುಗಳು. ಇವುಗಳ ಇತಿಮಿತಿ ನನಗೆ ಗೊತ್ತಿದೆ. ಸಿವಿಲ್ ಹಾಗೂ ಕ್ರಿಮಿನಲ್ ಸ್ವರೂಪದ ಪ್ರಕರಣಗಳ ವಿಚಾರಣೆಗಳು ಹೆಚ್ಚು ಹೆಚ್ಚು ಜಟಿಲವಾಗಿರುತ್ತವೆ. ಅಲ್ಲಿ ಕನ್ನಡವನ್ನು ಬಳಸುವಾಗ ಹೆಚ್ಚಿನ ಪರಿಶ್ರಮ ಬೇಕಾಗಬಹುದು. ಜಾಗರೂಕತೆಯೂ ಬೇಕಾಗುತ್ತದೆ."

ಆದರೆ ಈ ಕೃತಿ ಆ ಸಂದರ್ಭದಲ್ಲಿ ಎಷ್ಟೊಂದು ಅಗತ್ಯವಾಗಿತ್ತೆಂದರೆ, ಅನೇಕರು ಈ ಕೃತಿಯ ಮಹತ್ವವನ್ನು ವಿವರಿಸಿದ್ದಾರೆ.

"ಇಲ್ಲಿ ಪ್ರಕಟವಾಗುತ್ತಿರುವ ತೀರ್ಪುಗಳು ಇನ್ನು ಮುಂದೆ ಕಛೇರಿಗಳಲ್ಲಿಯೂ, ನ್ಯಾಯಾಲಯಗಳಲ್ಲಿಯೂ ತೀರ್ಪುಗಳನ್ನು ಕನ್ನಡದಲ್ಲಿ ಬರೆಯವವರಿಗೆ ನೆರವು ನೀಡುತ್ತವೆಂಬುದರಲ್ಲಿ ಒಂದು ಮಾದರಿಯೊನ್ನೊದಗಿಸುತ್ತದೆಂಬುದರಲ್ಲಿ ಸಂಶಯ ವಿಲ್ಲ"

– ಡಾ. ಹಾ.ಮಾ. ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯ ಇದಾಗಿದೆ. ಈ ಕೃತಿಯ ಮೂಲಕ ಜಯತೀರ್ಥರು ಸರಕಾರದ ಗಮನ ಸೆಳೆದರು. ಕೇಂದ್ರ ಸರಕಾರದ ಅಧಿಕೃತ ಭಾಷಾ ಆಯೋಗದ ಕಾರ್ಯದರ್ಶಿಗಳಾಗಿದ್ದ ಶ್ರೀ ಬಿ.ಕೆ. ಶರ್ಮ ಅವರು ಮುಕ್ತಕಂಠದಿಂದ ಈ ಕೃತಿಯನ್ನು ಪ್ರಶಂಸಿಸಿದ್ದಾರೆ.

"ಬೇರೆ ಯಾವುದೇ ಭಾಷೆಯಲ್ಲಿಯೂ ಈ ಪ್ರಕಟಣೆಗೆ ಸಂವಾದಿಯಾದ ಕೃತಿ ನಿಜವಾಗಿಯೂ ಇಲ್ಲ" ವೆಂದು ಶ್ರೀಶರ್ಮ ಸ್ಪಷ್ಟಪಡಿಸಿದ್ದಾರೆ. ಈ ಕೃತಿಗೆ ವಿಶೇಷ ರಾಜ್ಯ ಪ್ರಶಸ್ತಿ ಬಂದಿರುವುದನ್ನು ಮತ್ತೊಮ್ಮೆ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಜಯತೀರ್ಥರು ಸಂಪಾದಿಸಿರುವ ಇನ್ನೊಂದು ಪ್ರಮುಖ ಕೃತಿಯೆಂದರೆ "ಬಹುಮಾನಿತ ಕನ್ನಡ ತೀರ್ಪುಗಳು" ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದೆ. ಇದರಲ್ಲಿ ಬಹುಮಾನ ಪಡೆದ ಕನ್ನಡ ತೀರ್ಪುಗಳಿವೆ. ಇವು ಆಡಳಿತದಲ್ಲಿ ಕನ್ನಡ ಬಳಸುವವರಿಗೆ, ಕನ್ನಡದಲ್ಲಿ ತೀರ್ಪು ನೀಡುವವರಿಗೆ ಮಹತ್ವದ ಆಕರಗಳಾಗಿವೆ.

### ಇ) ಕನ್ನಡಪರ ಹೇಳಿಕೆಗಳು

ಗಾದೆಮಾತು–ಪಡೆನುಡಿ ಈ ಮುಂತಾದವುಗಳು ಶತಮಾನಗ ಜೀವನಾನುಭವ ದಿಂದ ಬೆಳೆದುಕೊಂಡು ಬರುತ್ತವೆ. ಆದರೆ ಕನ್ನಡಾಭಿಮಾನದಿಂದ, ಕನ್ನಡ ನಾಡು–ನುಡಿ –ಸಂಸ್ಕೃತಿಯನ್ನು ಕುರಿತು ಕೆಲವು ಮೌಲಿಕ ವಿಚಾರಗಳನ್ನು ನಮ್ಮ ಹಿರಿಯರು

ನುಡಿಗಟ್ಟುಗಳನ್ನಾಗಿಸಿದ್ದಾರೆ. ಇಂತಹ ನುಡಿಗಟ್ಟುಗಳನ್ನು ಹೇಳಲು ಪ್ರಾರಂಭಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ.

"ಕನ್ನಡಕ್ಕಾಗಿ ಕೈಯೆತ್ತು
ನಿನ್ನ ಕೈ ಕಲ್ಪವೃಕ್ಷವಾಗುತ್ತದೆ"

ಕುವೆಂಪು ಅವರ ಈ ನುಡಿಗಟ್ಟನ್ನು ಕೇಳಿದ ಕನ್ನಡಿಗರಿಗೆ ರೋಮಾಂಚನ ವಾಗುತ್ತದೆ. ಅಂತಹ ಶಕ್ತಿ ಇಂತಹ ನುಡಿಗಟ್ಟುಗಳಿಗಿದೆ. ಅನೇಕ ಕನ್ನಡ ಕವಿಗಳು ಕನ್ನಡ ನಾಡು-ನುಡಿಯ ಮಹತ್ವವನ್ನು ಇಂತಹ ಕೆಲವು ನುಡಿಗಟ್ಟುಗಳ ಮೂಲಕ ಹೇಳಿದ್ದಾರೆ.ಪ್ರಾಸಬದ್ಧವಾಗಿ ಎರಡೆರಡೇ ಸಾಲುಗಳಲ್ಲಿ ಹೀಗೆ ನುಡಿಗಟ್ಟುಗಳನ್ನು ಕಟ್ಟಿಕೊಡುವ ಕಾರ್ಯ ಇತ್ತೀಚೆಗೆ ನಡೆದಿದೆ. ಅದೇ ರೀತಿ ಕನ್ನಡ ಪರ ಹೇಳಿಕೆಗಳೂ ಪ್ರಕಟವಾಗುತ್ತಲಿವೆ.

ಜಯತೀರ್ಥ ಪುರೋಹಿತರು ಐ.ಎ.ಎಸ್ ಶ್ರೇಣಿಯ ಅಧಿಕಾರಿಗಳಾಗಿದ್ದರೂ ಗ್ರಾಮೀಣ ಪರಿಸರದಿಂದ ಬಂದವರು, ಕನ್ನಡವನ್ನೇ ಉಸಿರಾಗಿಸಿಕೊಂಡವರು. ಅವರು ಕನ್ನಡ ಅನುಷ್ಠಾನಕ್ಕಾಗಿ ಮಾಡಿದ ಕಾರ್ಯ ಅನುಪಮವಾದುದು. ಕನ್ನಡದ ಕಾರ್ಯದ ಜತೆಗೆ ಕನ್ನಡ ಆಡಳಿತ ಭಾಷೆಯನ್ನು ಕುರಿತು, ನಾಡು-ನುಡಿಯ ಉಳಿವಿಗಾಗಿ ಅವರು ಅನೇಕ - ಮಹತ್ವದ ಸಾಲುಗಳನ್ನು ಬರೆದಿದ್ದಾರೆ. ಅವರ "ಜಯತೀರ್ಥ" ಅಭಿನಂದನ ಗ್ರಂಥದಲ್ಲಿ, ಅದರ ಪ್ರಧಾನ ಸಂಪಾದಕರಾದ ಬ.ವೀ. ಹಂಪನಗೌಡ್ರ ಅವರು ಜಯತೀರ್ಥರ ಕನ್ನಡಪರ ಹೇಳಿಕೆಗಳನ್ನು ಅಲ್ಲಲ್ಲಿ ಉದ್ಧರಿಸಿದ್ದಾರೆ. ಅವುಗಳನ್ನು ಇಲ್ಲಿ ನಮೂದಿಸಲಾಗಿದೆ. ಇದರೊಂದಿಗೆ ಅವರ ಪ್ರಬಂಧಗಳ ಸಂಕಲನದಿಂದ ಕೆಲವು ಹೇಳಿಕೆಗಳನ್ನು ಆಯ್ದು ಸಂಗ್ರಹಿಸಿಕೊಡಲಾಗಿದೆ.

೧. ಆಡಳಿತದಲ್ಲಿ ಕನ್ನಡವನ್ನು ಬಳಿಸಿ ಕನ್ನಡಕ್ಕೆ ಅಥವ ಕನ್ನಡ ಜನರಿಗೆ ಮಹಾದುಪಕಾರ ಮಾಡುತ್ತಿದ್ದೇವೆಂದು ನಾವ್ಯಾರೂ ಭಾವಿಸಬೇಕಾಗಿಲ್ಲ. ಇದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಂದು ಅಗತ್ಯ.

೨. ಆಡಳಿತ ಭಾಷೆ ಇಂದು ಭಾವನಾತ್ಮಕ ವಿಚಾರವಲ್ಲ. ಅದು ವ್ಯಾವಹಾರಿಕ ಅಗತ್ಯವಾಗಿದೆ.

೩. ಆಡಳಿತ ಭಾಷೆಯ ವಿಚಾರವೆಂದರೆ ಕರ್ನಾಟಕದ ಜನಸಾಮಾನ್ಯರಿಗಾಗಿ ಸೀಮಿತ ಕ್ಷೇತ್ರದಲ್ಲಿ ಕನ್ನಡ ಬಳಸುವ ವಿಚಾರ ಅಷ್ಟೆ. ರಾಷ್ಟ್ರೀಯ ಏಕತೆಗೂ ಭಾಷೆಯ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

೪. ಆಡಳಿತ ಭಾಷೆಯ ಪ್ರಶ್ನೆ ಕೇವಲ ನೂರಾರು ಜನ ಅಧಿಕಾರಿಗಳ ಅಥವಾ

ಸಾವಿರಾರು ಜನ ಕೆಲಸ ಹುಡುಕಿಕೊಂಡು ಬರುವವರ ಪ್ರಶ್ನೆಯಲ್ಲ. ಇದು ಕೋಟಿ ಕೋಟಿ ಕನ್ನಡ ಜನಸಾಮಾನ್ಯರ ಅನುಕೂಲದ ಪ್ರಶ್ನೆ.

೫. ಪ್ರಾದೇಶಿಕ ಭಾಷೆ ಬರಲಾರದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಆ ಭಾಷೆಗೆ ಪರೋಕ್ಷವಾಗಿ ಆತಂಕ ಒಡ್ಡುವ ಒಂದು ಪ್ರಬಲವರ್ಗವೆಂಬುದು ಅನೇಕ ಆಯೋಗಗಳ ಅಭಿಪ್ರಾಯ.

೬ ಕನ್ನಡದಲ್ಲಿ ಕವಿರಾಜಮಾರ್ಗ ಮತ್ತು ಪಂಪಭಾರತಗಳು ರಚಿತವಾದಾಗ ಇಂಗ್ಲೀಷ್ ಭಾಷೆಯಲ್ಲಿ ಅಂಧಕಾರ ಯುಗವಿತ್ತು. ಸಾಹಿತ್ಯ ರಚನೆಗಾಗಿ ಆ ಭಾಷೆಯೇ ರೂಪುಗೊಂಡಿರಲಿಲ್ಲ.

೭ ಇಂಗ್ಲೀಷ್‌ಗೂ ನಮಗೂ ಜನ್ಮಜನ್ಮಾಂತರ ಸಂಬಂಧವೇನೂ ಇಲ್ಲ. ಕನ್ನಡಕ್ಕೂ ನಮ್ಮ ಜನತೆಗೂ ಕನಿಷ್ಠ ಸಾವಿರಾರು ವರ್ಷಗಳ ಸಂಬಂಧವಾದರೂ ಇದೆ.

೮. ಭಾಷೆ ತಯಾರಾಗಿಲ್ಲವೆಂದರೆ ಭಾಷೆ ಬಳಸುವವರು ತಯಾರಾಗಿಲ್ಲವೆಂದೇ ಅರ್ಥ. ಬಳಸಿದಂತೆ ಭಾಷೆ ತಯಾರುಗುತ್ತದೆ.

೯. ಆಡಳಿತ ಭಾಷೆಯ ಸಮಸ್ಯೆಯೊಂದು ಸಮಸ್ಯೆಯೇ ಅಲ್ಲ. ಇದು ನಾವಾಗಿ ಅಂದರೆ ಇಂಗ್ಲೀಷ್ ಮೂಲಕ ಲಾಭಸ್ಥಾನಗಳಲ್ಲಿ ಕುಳಿತಿರುವ ಕೆಲವೇ ಜನರು ಮತ್ತು ಕನ್ನಡದ ಹಿನ್ನಲೆ ಹಾಗೂ ಸಾಧ್ಯತೆಗಳನ್ನು ತಿಳಿಯದ ಜನರು ಹುಟ್ಟಿಸಿಕೊಂಡ ಸಮಸ್ಯೆಯಾಗಿದೆ.

೧೦. ಇತರ ಭಾಷಿಗರಿಗೆ ತೊಂದರೆಯಾಗಬಾರದೆನ್ನುವಾಗ ಇಲ್ಲಿಯ ಜನರಿಗೂ ಹಾಗೂ ಜನರ ನುಡಿ ಮತ್ತು ರಾಜ್ಯ ಭಾಷೆಯಾದ ಕನ್ನಡಕ್ಕೂ ತೊಂದರೆಯಾಗಿರಬಾರದೆಂಬುದನ್ನು ಸಹ ಗಮನದಲ್ಲಿಡಬೇಕು.

೧೧. ಸೇವಾ ಪರೀಕ್ಷೆಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಮಾಧ್ಯಮಕ್ಕೆ ಅವಕಾಶವಿಲ್ಲದಿದ್ದರೆ ಶಿಕ್ಷಣದಲ್ಲಿ ಕನ್ನಡಕ್ಕೆ ಭವಿಷ್ಯವಿಲ್ಲ.

೧೨. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ನೌಕರಿ ಕೊಡಿ. ಆಗ ಕನ್ನಡ ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ.

೧೩. ಇಂಗ್ಲೀಷ್ ಭಾಷೆಯ ಕಲಿಕೆಯ ಅಗತ್ಯವನ್ನು ಮರೆಯಬಾರದು. ಆದರೆ ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಕಲಿಸಬೇಕಾದರೆ ಉಳಿದೆಲ್ಲ ವಿಷಯಗಳನ್ನು ಇಂಗ್ಲೀಷ್‌ನಲ್ಲೇ ಕಲಿಸಬೇಕಾಗಿಲ್ಲ.

೧೪. ಹತ್ತೊಂಬತ್ತನೇ ಶತಮಾನದಲ್ಲಿ ಕನ್ನಡ ಅಭ್ಯಾಸ ಮಾಡುವ ಮಿಶನ್‌ಗಳಲ್ಲಿ ಶಬ್ದಮಣಿದರ್ಪಣದ ಪ್ರತಿ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು.

೧೫. ಡೇನಿಯಲ್ ಸ್ಯಾಂಡರ್ಸ್‌ನ್, ಯುರೋಪಿಯನ್ ಜನರಿಗೆ ಕನ್ನಡ ಭಾಷೆಯ ಪರಿಚಯವನ್ನು ಹಂತ ಹಂತವಾಗಿ ಮಾಡಿಕೊಡುವ ಉದ್ದೇಶದಿಂದ ನಾಲ್ಕು ಕಥಾ ಸಂಗ್ರಹಗಳ ಹೊಳಹು ಹಾಕಿದ್ದ.

೧೬. ಇತಿಹಾಸ–ಶಾಸನವೆಂದರೆ ಅದು ಪ್ರಾಚ್ಯವಸ್ತು ಸಂಗ್ರಹಾಲಯದವರ ಆಸ್ತಿ, ಸಾಹಿತ್ಯ–ವಾಙ್ಮಯವೆಂದರೆ ಅದು ಭಾಷಾ ಅಧ್ಯಾಪಕರ ಹಕ್ಕು ಅಂತ ತಿಳಿದುಕೊಂಡಿರುವ ನಮಗೆ ಆಗಿನ ಬಿಳಿಯ ಜನರ ವೈವಿಧ್ಯಪೂರ್ಣ ಆಸಕ್ತಿಗಳು ಮಾದರಿಯಾಗಿವೆ.

೧೭. ಎಸ್.ಜಿ. ಶಾಸ್ತ್ರಿಗಳು ಇಂಗ್ಲೆಂಡಿನಲ್ಲಿ ರೈಸ್‌ನನ್ನು ಸಂಧಿಸಿದಾಗ "ಆಹಾ ಕನ್ನಡ ಎಷ್ಟು ಚೆಂದ. ಎಷ್ಟು ಮಧುರ, ಕನ್ನಡದಲ್ಲಿಯೇ ಮಾತಾಡುವಾ" ಎಂದರಂತೆ. ಕನ್ನಡಿಗರೇ ಆದ ನಮ್ಮಲ್ಲಿ ಎಷ್ಟು ಜನರಿಗೆ ಈ ಅಭಿಮಾನವಿದೆ?

೧೮. ರೈಸ್ ಮತ್ತು ಫ್ಲೀಟ್ ಕನ್ನಡ ನಾಡಿನ ಇತಿಹಾಸ ಸಂಶೋಧನೆಯ ರಂಗದಲ್ಲಿ ಅಶ್ವಿನೀ ದೇವತೆಗಳಿದ್ದಂತೆ.

೧೯. ಬಾಸೆಲ್ ಮಿಶನ್ನಿನವರು ಮೊದಲ ಬಾರಿ ೧೮೪೫ರಲ್ಲಿ ಪ್ರಕಟಿಸಿದ ಪದ್ಯ ಸಂಗ್ರಹದಲ್ಲಿ ೬೮ ಕನ್ನಡ ಗೀತೆಗಳಿವೆ.

೨೦. "ಟೀಪುಸುಲ್ತಾನ ಹೈದರಾಲಿಗಳು ಮುಸಲ್ಮಾನರಾಗಿದ್ದರೂ ತಮ್ಮ ರಾಜ್ಯದ ಭಾಷೆಯದ ಕನ್ನಡವನ್ನು ಚೆನ್ನಾಗಿ ತಿಳಿದಿದ್ದರು. ಆಳುವವರು ಆಳಿಸಿಕೊಳ್ಳುವವರ ಭಾಷೆಗೆ ಅಪರಿಚಿತರಾಗಿದ್ದರೆ ದೇಶಕ್ಕೆ ಪಿಡುಗಾಗಬಲ್ಲಂಥ ದಲ್ಲಾಳಿಗಳ ಗುಂಪೊಂದು ತಲೆಯೆತ್ತುತ್ತದೆ"ಂಬ ಜಾನ್ ಮ್ಯಾಕೆರಲ್ ಅವರ ಹೇಳಿಕೆಯನ್ನು ಕನ್ನಡಿಗರು ಗಮನಿಸಬೇಕು.

೨೧. ಕನ್ನಡ ಚರಿತ್ರೆ–ಸಾಹಿತ್ಯವನ್ನು ಕಟ್ಟಿಕೊಟ್ಟ, ಕರಿನಾಡಿನಲ್ಲಿ ಬಂದ ಈ ಬಿಳಿಯರನ್ನು ಕನ್ನಡಿಗರು ಕೃತಜ್ಞತೆಯಿಂದ ನೆನೆಯಬೇಕು.

೨೨. ಕನ್ನಡವನ್ನು ಆಡಳಿತ ಭಾಷೆಯಾಗಿ, ಶಾಸನಗಳಲ್ಲಿ ದತ್ತಿಗಳಲ್ಲಿ ಬಳಸಿದವರಲ್ಲಿ ಬಾದಾಮಿಯ ಚಾಲುಕ್ಯರು ಮೊದಲಿಗರೆಂಬುದನ್ನು ಗಮನಿಸಬೇಕು.

೨೩. ಹರ್ಮನ್ ಮೋಗ್ಲಿಂಗ್‌ನ ಕೆಲಸ ಸಾಮಾನ್ಯವಾದುದಲ್ಲ. ೧೮೬೦ರಲ್ಲಿ ದಾಸರ ಪದಗಳನ್ನು ಸಂಗ್ರಹಿಸಿ ೫೧೬ ಪುಟಗಳ ಗ್ರಂಥವಾಗಿ ಜರ್ಮನ್ ಟಿಪ್ಪಣಿಯೊಂದಿಗೆ ಪ್ರಕಟಿಸಿದ.

೨೪. ಕನ್ನಡ ಶಿಕ್ಷಣ, ಪಠ್ಯಪುಸ್ತಕ ರಚನೆ, ಶಾಸನಗಳ ಸಂಗ್ರಹ, ಇತಿಹಾಸ ಲೇಖನ, ಕನ್ನಡ ಕೃತಿಗಳ ಸಂಪಾದನೆ – ಈ ರಂಗಗಳಲ್ಲಿ ಎಲಿಯಟ್ ಮಾಡಿದ ಕನ್ನಡ ಸೇವೆ ಅಪ್ರತಿಮವಾಗಿದೆ.

೨೫. ಹೈದ್ರಾಬಾದ್ ರಾಜ್ಯದಲ್ಲಿ ಕನ್ನಡ, ತೆಲುಗು ಮತ್ತು ಮರಾಠಿ ಈ ಮೂರೂ ಪ್ರಾದೇಶಿಕ ಭಾಷೆಗಳಾಗಿದ್ದವು.

೨೬. ಕನ್ನಡ ಅಭಿವೃದ್ಧಿಯ ಕಾರ್ಯಕ್ಷೇತ್ರ ನನಗೆ ರಾಜ್ಯಾದ್ಯಂತ ಹಾಗೂ ದಕ್ಷಿಣ ರಾಜ್ಯಗಳಲ್ಲಿ ಸ್ನೇಹಿತರನ್ನು ಗಳಿಸಿಕೊಟ್ಟಿತು.

೨೭. ಕನ್ನಡದ ಜೊತೆಗೆ ನನ್ನ ಹೆಸರನ್ನು ಕೆಲವರು ಗುರುತಿಸುತ್ತಾರೆ. ಅದೇ ನನ್ನನ್ನಳೆಯುವ ಮಾನದಂಡವೇನೊ. ಹಾಗಿದ್ದರೆ ನಾನು ಧನ್ಯ.

ಇಂತಹ ಅನೇಕ ಕನ್ನಡಪರ ಹೇಳಿಕೆಗಳನ್ನೂ ಜಯತೀರ್ಥರು ಮಂಡಿಸಿದ್ದಾರೆ. ಅವರಿಗೆ ಇಂಗ್ಲೀಷ್, ಸಂಸ್ಕೃತ ಹಾಗೂ ಕನ್ನಡ ಮೂರೂ ಭಾಷೆಗಳು ಕರಗತವಾಗಿದ್ದರೂ ಅವರ ಪ್ರೀತಿ ಇರುವುದು ಕನ್ನಡದ ಮೇಲೆ. ಅವರ ಕನ್ನಡ ಸೇವೆ ಅನುಪಮವಾದುದಾಗಿದೆ.

### ಈ) ಜಯತೀರ್ಥರ ಕನ್ನಡ ಪ್ರೇಮ ಕುರಿತಂತೆ ವಿದ್ವಾಂಸರ ಅಭಿಪ್ರಾಯಗಳು

ಒಬ್ಬ ಉನ್ನತ ಶ್ರೇಣಿಯ ಅಧಿಕಾರಿಯಾಗಿದ್ದ ಜಯತೀರ್ಥ ಪುರೋಹಿತರು ತಾವೊಬ್ಬ ಕನ್ನಡದ ಕಟ್ಟಾಳು ಎಂದೇ ಗುರುತಿಸಿಕೊಂಡಿದ್ದಾರೆ. ಹೀಗಾಗಿ ಅವರಿಗೆ ಉನ್ನತ ಹುದ್ದೆಗಿಂತ, ತನ್ನ ತಾಯ್ನುಡಿ ದೊಡ್ಡದು. ಅಂತೆಯೇ ಅವರು ನಿರಂತರವಾಗಿ ಕನ್ನಡ ಕಟ್ಟುವ ಕೆಲಸವನ್ನು ಮಾಡಿದ್ದಾರೆ. ವಿವಿಧ ಸಂದರ್ಭಗಳಲ್ಲಿ, ಬೇರೆ-ಬೇರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಆಡಳಿತದಲ್ಲಿ ಕನ್ನಡವನ್ನು ತಂದರು. ಚಿತ್ರದುರ್ಗದಲ್ಲಿ ವಿಶೇಷ ಜಿಲ್ಲಾಧಿಕಾರಿಯಾಗಿದ್ದಾಗ ಮೊದಲ ಬಾರಿಗೆ ಕನ್ನಡದಲ್ಲಿ ತೀರ್ಪು ಪ್ರಕಟಿಸಿದರು. ಇಂತಹ ಅನೇಕ ದಾಖಲೆಗಳನ್ನು ಮಾಡಿರುವ ಜಯತೀರ್ಥರ ಕನ್ನಡ ಪ್ರೇಮವನ್ನು ಕುರಿತು, ಅವರು ಕನ್ನಡ ಕಟ್ಟಿದ ಪ್ರಸಂಗಗಳನ್ನು ಕುರಿತು ವಿವಿಧ ವಿದ್ವಾಂಸರು-ಲೇಖಕರು ಬಹುವಾಗಿ ಕೊಂಡಿದ್ದಾರೆ. ಅವರ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ.

೧. ಮೈಸೂರು ವಿಶ್ವವಿದ್ಯಾಲಯದಲ್ಲಿ ಜಯತೀರ್ಥರು ಪರೀಕ್ಷಾ ನಿಯಂತ್ರಣಾಧಿಕಾರಿಗಳಾದರು. ಮುಂದೆ ಕನ್ನಡ ಸಂಸ್ಕೃತಿ ಇಲಖೆಯ ಮುಖ್ಯಾಧಿಕಾರಿಗಳಾದರು. ಅವರ "ಕನ್ನಡ ತೀರ್ಪುಗಳು" ಎಂಬ ನ್ಯಾಯ ವಿಚಾರಣೆಯ ಪುಸ್ತಕ-ದೇಶೀಯ ಭಾಷೆಗಳಿಗೆ ಒಂದು ಹೊಸ ದಾರಿಯನ್ನು ತೋರಿಸಿತು.

ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅವರು ಅನೇಕ ಹೊಸ ವಿಕ್ರಮಗಳನ್ನು ಸ್ಥಾಪಿಸಿದರು.

– ಡಾ. ವಿ.ಕೃ. ಗೋಕಾಕ
(ಬೆಂಗಳೂರು)

೨. ಅಧಿಕಾರಿಗಳು ಕನ್ನಡವನ್ನು ಪಟ್ಟಾಗಿ ಹಿಡಿದು ಕೂರುವುದು ಅಪರೂಪ. ಇಂತವರನ್ನು ನೀವು ಕನ್ನಡ ಅಭಿವೃದ್ಧಿ ಇಲಾಖೆಗೆ ಹಾಕಿದರೂ ಅವರದನ್ನು ಗ್ರಾಮಾಭಿವೃದ್ಧಿ – ನೀರಾವರಿ ಹಾಗೆ ಏನೋ ಒಂದು ದಸ್ತಾವೇಜಿನ ಕೆಲಸವೆಂದು ತಿಳಿಯುತ್ತಾರೆ. ಆದರೆ ರಾಜಪುರೋಹಿತರಂಥವರಿಗೆ ಕೈಗೊಂಡ ಹುದ್ದೆಗಳೆಲ್ಲವೂ ಕನ್ನಡದ ಅಭಿವೃದ್ಧಿ ಇಲಾಖೆಗೆ ಸೇರಿದವುಗಳೇ ಎನಿಸುತ್ತದೆ. ಕನ್ನಡದಲ್ಲಿ ಒಳ್ಳೆಯ ಕಾದಂಬರಿ ಮಾತ್ರವೇ ಅಲ್ಲ, ಒಳ್ಳೆಯ ತೀರ್ಪುಗಳನ್ನೂ ಬರೆಯಬಹುದೆಂದು ತೋರಿಸಿಕೊಟ್ಟವರು ಅವರು. 'ಎಲ್ಲಾದರು ಇರು, ಎಂತಾದರು ಇರು, ಎಂದೆಂದೂ ನೀ ಕನ್ನಡವಾಗಿರು' ಎಂಬ ಕುವೆಂಪು ಮಂತ್ರಕ್ಕೆ ಸಮನಾಗಿ ಬಾಳುತ್ತಿರುವವರು.

–ಪ್ರೊ. ಕು.ಶಿ. ಹರಿದಾಸ ಭಟ್ಟ
(ಉಡುಪಿ)

೩. ನಮ್ಮ ಜಯತೀರ್ಥರು ಕನ್ನಡ – ಕನ್ನಡವೆಂದೇ ಉಸಿರಾಡುವವರು. ಅವರ ಉಸಿರು ಕನ್ನಡ, ಅವರ ಪ್ರಾಣ ಕನ್ನಡ, ಅವರ ಜೀವ ಕನ್ನಡ. ಸರ್ಕಾರಿ ಆಡಳಿತದಲ್ಲಿ ಕನ್ನಡವನ್ನು ಬಳಕೆಯಲ್ಲಿ ತರುವುದಕ್ಕೆ ನೋಂಪಿಯನ್ನೆ ಹೊತ್ತು ನಿಂತವರು. ನ್ಯಾಯತೀರ್ಪುಗಳನ್ನು ಕನ್ನಡದಲ್ಲೇ ಬರೆಯುವಂತೆ ಅವರು ನ್ಯಾಯಾಧೀಶರನ್ನು ಕೈ ಜೋಡಿಸಿ ಕೇಳಿಕೊಂಡರು. ಮನವೊಲಿಸಿ ಬೇಡಿಕೊಂಡರು. "ಇನ್‌ಸೆಂಟಿವ್" ನೀಡಿದರು "ಕೋರ್ಕ್ಸ್" ಮಾಡಿದರು. ಅವರಿಗೆ ನಿಜವಾಗಿಯೂ ಕನ್ನಡದ ಹುಚ್ಚು. ಇಂಥ ಹುಚ್ಚು ಹಿಡಿದಾಗಲೇ ಸರ್ಕಾರದ ಘೋಷಣೆ ಹೊರ ಬೀಳುತ್ತದೆ – ಕನ್ನಡವು ಆಡಳಿತ ಭಾಷೆಯೆಂದು. ವಿಧಾನಸೌಧದ ಮೇಲಿಂದ ಕನ್ನಡ ಕುಲಕ್ಕೆಲ್ಲ ಕಿವಿಗಡಚಿಕ್ಕುವಂತೆ ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ, ನಡೆ ಕನ್ನಡ ಎಂದು ಘೋಷಿಸಿದರು. ವಿಧಾನಸೌಧದ ಬೆರಳಚ್ಚುಗಳು "ಕನ್ನಡ ಕನ್ನಡ" ಎಂದು ಟಂಕನಾದವನ್ನು ನುಡಿಸುತ್ತಿರುವವರೆಗೂ ಜಯತೀರ್ಥರ ಹೆಸರು ಜಯಜಯಕಾರದೊಂದಿಗೆ ಮೊಳಗುತ್ತಿರುವುದು.

–ಎನ್ಕೆ ಕುಲಕರ್ಣಿ
(ಧಾರವಾಡ)

೪. ನಮ್ಮ ಜನತೆಯ ಇಂಗ್ಲೀಷ್ ವ್ಯಾಮೋಹ ಒಂದು ಸಾಂಕ್ರಾಮಿಕ ಜಾಡ್ಯ. ಇಂಗ್ಲೀಷ್ ಅಭಿಮಾನಿಗಳು ಅದನ್ನು ನ್ಯಾಯವಾದ ಮತ್ತು ಅನ್ಯಾಯವಾದ ಸರ್ವಮಾರ್ಗಗಳಿಂದಲೂ ಸಾಧಿಸಲು ಪ್ರಯತ್ನಿಸುತ್ತಾರೆ. ರಾಜಪುರೋಹಿತರಿಗೆ ಪ್ರಾರಂಭದಲ್ಲಿ ಅನೇಕ-ಕಷ್ಟಗಳು ಒದಗಿದವು. ಆದರೂ ಗೊಂಡಾರಣ್ಯದಲ್ಲಿ ಮುಳ್ಳು ಮರ ಹಳ್ಳಗಳನ್ನು ಸಮಗೊಳಿಸಿ ದಾರಿಮಾಡುವಂತೆ ಅವರು ಕೆಲಸ ಮಾಡಿದರು. ಕನ್ನಡ ಸಮಸ್ಯೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಅದಕ್ಕೆ ಸರ್ವಕಾಲಿಕ-ಪರಿಹಾರವನ್ನು ಸೂಚಿಸಿದರು ; ಕನ್ನಡಕ್ಕೆ ಶಾಶ್ವತವಾದ ಅಸ್ತಿಭಾರವನ್ನು ಹಾಕಿದರು. ಕನ್ನಡ ನಾಡಿನಲ್ಲಿ ಕನ್ನಡ ಸಾರ್ವಭೌಮವಾಗಿ ವಿರಾಜಿಸಲು ಬೇಕಾದ ಸಂಪೂರ್ಣ ನಕಾಶೆಯನ್ನು ರಾಜಪುರೋಹಿತರು ಯೋಜಿಸಿ ಕಾರ್ಯಗತಗೊಳಿಸಿದರು.

-ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್
(ಮೈಸೂರು)

೫. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವನ್ನು ವ್ಯವಸ್ಥೆಗೊಳಿಸಿದ್ದು ರಾಜಪುರೋಹಿತರು ಮಾಡಿದ ಒಂದು ದೊಡ್ಡ ಕೆಲಸವೆಂದು ನಾನು ತಿಳಿದಿದ್ದೇನೆ. ಕನ್ನಡದ ಅಭಿವೃದ್ಧಿ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಅನೇಕ ಯೋಜನೆಗಳ ಕೇಂದ್ರ ಈ ನಿರ್ದೇಶನಾಲಯ. ಯಾವುದೋ ಮೂಲೆಯಲ್ಲಿ ಇಬ್ಬರು ಮೂವರು ಗುಮಾಸ್ತರಿಗಷ್ಟೇ ಸೀಮಿತವಾಗಿದ್ದ ಇಲಾಖೆಗೆ ಹೊಸ ಬಣ್ಣ ಸವರಿ, ಹೊಸ ದನಿ ಕೊಟ್ಟು, ಹೊಸ ಶಕ್ತಿ ತುಂಬಿ ರಾಜ್ಯದ ಉದ್ದಗಲಗಳಲ್ಲಿ ಅದನ್ನು ಹರಡಿದ ಶ್ರೇಯಸ್ಸು ರಾಜಪುರೋಹಿತರಿಗೇ ಸಲ್ಲಬೇಕು. ಮೇಜು ಕುರ್ಚಿಗಳನ್ನು ಜೋಡಿಸುವದರಿಂದ ತೊಡಗಿ ಬಹುಮುಖ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವವರೆಗೂ ಅವರು ಏಕ ಕಾಲದಲ್ಲಿ ದುಡಿಯಬೇಕಾಗಿತ್ತು. ರಾಜಪುರೋಹಿತರ ದಕ್ಷ ನೇತೃತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಜಯಗಂಟೆ ನಾಡಿನಾದ್ಯಂತ ಕೇಳಿಸುವಂತಾಯಿತು.

-ಡಾ. ಹಾ.ಮಾ. ನಾಯಕ
(ಮೈಸೂರು)

೬. ಕನ್ನಡ ಭಾಷಾ ನಿರ್ದೇಶನಾಲಯದ ಕರ್ಣಧಾರತ್ವ ವಹಿಸಿಕೊಂಡ ಮೇಲೆ ಜಯತೀರ್ಥ ರಾಜಪುರೋಹಿತರು, ತಮ್ಮ ಕಾರ್ಯವನ್ನು ಪಾದ್ರಿಯ ಶ್ರದ್ಧೆಯಿಂದ ಕೈಕೊಂಡಿದ್ದಾರೆ. ಅವರಿಗೆ ಕನ್ನಡದ ಬಗೆಗೆ ಅಪಾರ ಆಸಕ್ತಿ. ಆಸಕ್ತಿ ಇರುವ ಇಂಥವರನ್ನು ಕನ್ನಡದ ಕೆಲಸಕ್ಕೆ ಹಚ್ಚಿ ರಾಜ್ಯ ಸರಕಾರವು ಕನ್ನಡಕ್ಕೆ ಒಳ್ಳೆಯದನ್ನೇ ಮಾಡಿದೆ.

ರಾಜಪುರೋಹಿತರಿಗಿಂತ ಹೆಚ್ಚು ಅರ್ಹರಾದ ಜನರು ಸಿಕ್ಕುತ್ತಿರಲಿಲ್ಲ. ಅವರಿಗೆ ಆಡಳಿತದ ಅನುಭವವೂ ಇದೆ. ಕನ್ನಡ ಭಾಷೆಯ ಮೇಲೆ ಪ್ರಭುತ್ವವೂ ಇದೆ. ಮೇಲಾಗಿ ಅವರು ಅನೇಕ ಭಾಷೆಗಳನ್ನು ಬಲ್ಲವರಾಗಿರುವದು ಭಾಷಾ ನಿರ್ದೇಶನಾಲಯಕ್ಕೆ ಬಹುದೊಡ್ಡ ಲಾಭ.

– ಡಾ. ಪಾಟೀಲ ಪುಟ್ಟಪ್ಪ
ಹುಬ್ಬಳ್ಳಿ

೭. ಆಡಳಿತ ಕ್ಷೇತ್ರದ ಮೂಲೆ ಮೊಡಕುಗಳನ್ನು ಗರುಡ ದೃಷ್ಟಿಯಿಂದ ನೋಡಿರುವ ಮತ್ತು ಹಿರಿಯ ಕಿರಿಯ ಅಧಿಕಾರಿಗಳ ಜಾತಕವನ್ನು ಅಮೂಲಾಗ್ರವಾಗಿ ಪರಿಶೀಲಿಸಿರುವ ಜಯತೀರ್ಥ ರಾಜಪುರೋಹಿತರು ಎಲ್ಲ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಯ ವಿಷಯದ ಮೇಲೆ ಮಾತಾಡಲು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಲು ಸರ್ವಾರ್ಹರಾಗಿದ್ದಾರೆ. ಕನ್ನಡದ ಬಳಕೆ ಇಂದು ಭಾವನಾತ್ಮಕ ಪ್ರಶ್ನೆಗಿಂತ ಹೆಚ್ಚಾಗಿ ವ್ಯಾವಹಾರಿಕೆ ಅವಶ್ಯಕತೆಯಾಗಿದೆಯೆನ್ನುವದನ್ನವರು ಸ್ಪಷ್ಟಪಡಿಸಿದ್ದಾರೆ.

– ಡಾ. ದೆ. ಜವರೇಗೌಡು
ಮೈಸೂರು

೮. ಕನ್ನಡ ಅಭಿವೃದ್ಧಿಗಾಗಿ ನೀವು ಅವಿಶ್ರಾಂತವಾಗಿ ದುಡಿದುದು ಅವಿಸ್ಮರಣೀಯ. ಕನ್ನಡದ ಮುನ್ನಡೆಗಾಗಿ ನೀವು ನಿಮ್ಮ ಸಾಮರ್ಥ್ಯವನ್ನೂ, ಪ್ರತಿಷ್ಠೆಯನ್ನೂ, ಸರ್ವಸ್ವವನ್ನೂ ಪಣಕ್ಕೆ ಇಟ್ಟಿದ್ದೀರಿ. ಈ ಧರ್ಮಯುದ್ಧದಲ್ಲಿ ನೀವು ನಿಮ್ಮ ಸ್ವಂತದ ಸುರಕ್ಷತೆಯನ್ನು ಸಹ ಗಮನಿಸದೆ ಮುನ್ನುಗ್ಗಿದ್ದೀರಿ. ಕನ್ನಡದ ಕೆಲಸದಲ್ಲಿ ಒಬ್ಬ ರಸೆಲ್ ಒಬ್ಬ ಡೆಪ್ಯೂಟಿ ಚೆನ್ನಬಸಪ್ಪ, ಒಬ್ಬ ಶಂತಕವಿ, ಗಳಗನಾಥರ ಜತೆ ನಿಮ್ಮ ಹೆಸರು ಸೇರಿ ಹೋಯಿತು.

– ಡಾ. ರಾ.ಯ. ಧಾರವಾಡಕರ
(ಧಾರವಾಡ)

೯. ಕರ್ನಾಟಕದಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನ ದೊರಕಿಸಿಕೊಡುವದಕ್ಕಾಗಿ ಹೋರಾಟ ನಡೆಸಿದರು. ಚಿತ್ರದುರ್ಗದ ಜಿಲ್ಲಾಧಿಕಾರಿಯಾಗಿದ್ದಾಗ ಪ್ರಪ್ರಥಮವಾಗಿ ಕನ್ನಡದಲ್ಲಿ ತೀರ್ಮಗಳನ್ನು ನೀಡಿ ಕನ್ನಡ ಆಡಳಿತ ಭಾಷೆಯಾಗುವದಕ್ಕೆ ನಾಂದಿ ಹಾಡಿದರು. ಕನ್ನಡವು ಆಡಳಿತ ಭಾಷೆಯಾಗುವದಕ್ಕೆ ಎಷ್ಟೋ ಜನ ಸರ್ಕಾರಿ ಅಧಿಕಾರಿಗಳೇ ವಿರೋಧವಾಗಿದ್ದರು. ತಮಗಿಂತಲೂ ಉನ್ನತ ಅಧಿಕಾರಿಗಳಾಗಿದ್ದ ಅವರನ್ನು

ವೇದಿಕೆಯ ಮೇಲೆಯೇ ಖಂಡಿಸುವಂತಹ ಎದೆಗಾರಿಕೆ ರಾಜಪುರೋಹಿತರದು. ಇಂದು ನಮ್ಮ ರಾಜ್ಯದ ಆಡಳಿತ ಭಾಷೆ ಕನ್ನಡ. ಅದಕ್ಕಾಗಿ ರಾಜಪುರೋಹಿತರು ಪಟ್ಟ ಶ್ರಮ ಅಪಾರ. ಅವರೊಬ್ಬ ನಿರಂತರ ಹೋರಾಟಗಾರ.

–ಪ್ರೊ. ಡಿ.ಆರ್. ಬಳೂರಗಿ
ರಾಯಚೂರು

೧೦. ಅವರು ೧೯೬೭ರಲ್ಲಿ ರಾಯಚೂರಿನ ಪುರಸಭೆಗೆ ಕಮೀಷನರ್ ಆಗಿ ಬಂದಾಗ ನಾನು ಪುರಸಭೆಯ ಅಧ್ಯಕ್ಷನಾಗಿದ್ದೆ. ಅವರು ತಮ್ಮ ಆಡಳಿತ ಕ್ರಮ ಮತ್ತು ಶ್ರದ್ಧಾಯುಕ್ತ ದುಡಿಮೆಯಿಂದ ನನ್ನ ಮೇಲೆ ಹಾಗೂ ಇತರರ ಮೇಲೆ ವಿಶೇಷ ಪ್ರಭಾವ ಬೀರಿದರು. ರಾಯಚೂರ 'ತೀನ್ ಕಂದೀಲ್' ಹತ್ತಿರ ನಿಂತಿದ್ದ ಕಲ್ಲಾನೆಗೆ ಬಣ್ಣ ಕೊಡಿಸಿ ಅದಕ್ಕೊಂದು ಆಕರ್ಷಣೆ ತಂದವರು ರಾಜಪುರೋಹಿತರು. ಈ ಐತಿಹಾಸಿಕ ನಗರದ ಗುಡ್ಡಗಳ ಮೇಲ್ತುದಿಯವರೆಗೂ ಬೆಳಕು ಇರುವಂತೆ ಗುಡ್ಡಗಳ ಮೇಲೆ ಕಂಭಗಳನ್ನು ನೆಡಿಸಿ ವಿದ್ಯುದ್ದೀಪಗಳನ್ನು ಒದಗಿಸಿದ ಶ್ರೇಯಸ್ಸು ಅವರಿಗೇ ಸಲ್ಲುತ್ತದೆ. ಗುಡ್ಡದ ತುದಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ವ್ಯವಸ್ಥೆಯನ್ನೂ ಮಾಡಿದರು.

–ಡಾ. ಸಂಗಮೇಶ್ವರ ಸರದಾರ
ರಾಯಚೂರು

೧೧. ಉಚ್ಚ ಕುಲದಲ್ಲಿ ಹುಟ್ಟಿ, ದೊಡ್ಡ ಅಧಿಕಾರಿಯಾಗಿ, ಅವರು ಆಫೀಸಿನಲ್ಲಿ – ಮನೆಯಲ್ಲಿ, ಸಮಾಜದಲ್ಲಿ ಕನ್ನಡದ ಕೆಲಸಗಳಲ್ಲಿ ಅವರು ತೊಡಗಿರುವದನ್ನು ನೋಡಿದರೆ, ಹಸಿದ ಹೊಟ್ಟೆ ತುಂಬಿದಂತಾಗುತ್ತದೆ. ಕನ್ನಡದ ಬಗೆಗೆ ಅವರು ಮಾಡಿರುವ ಕೆಲಸಗಳು ಬಹಳಷ್ಟಿವೆ.

– ಕೆ.ವಿರೂಪಾಕ್ಷಗೌಡ
ಬಳ್ಳಾರಿ

೧೨. ಮೈಸೂರಿನಲ್ಲಿ ಆಡಳಿತ ತರಬೇತಿ ಕಾಲೇಜಿನಲ್ಲಿ ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ತರಬೇತಿಯಲ್ಲಿ ಕನ್ನಡದ ಅಂಶವೇ ಇರದಿದ್ದಾಗ ಅವರ ಸೂಚನೆಯನ್ನಿಟ್ಟವರು ರಾಜಪುರೋಹಿತರು. ಅದಕ್ಕೆ ಅಗತ್ಯವಾದ ಪಠ್ಯಕ್ರಮ ರೂಪಿಸುವ ಹೊಣೆಯೂ ಅವರ ಹೆಗಲಿಗೇರಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಹುಟ್ಟು ಹಾಕಿದಾಗ ಎಲ್ಲ ಹಂತದಲ್ಲೂ ಕನ್ನಡ ಆಡಳಿತ ಭಾಷೆಯಾಗಲು ಅಗತ್ಯವಾದ ಪೂರ್ವಸಿದ್ಧತೆ, ಟಿಪ್ಪಣಿಯ ರಚನೆ, ಪ್ರಾರಂಭಿಕ

ಕಾರ್ಯ, ಮುಟ್ಟಬೇಕಾದ ಮಜಲುಗಳು ಎಲ್ಲವನ್ನೂ ಊಹಿಸಿಕೊಂಡು, ಅವುಗಳಿಗೆ ಆಕಾರ ನೀಡುವ ಕಾರ್ಯವನ್ನು ಆರಂಭಿಸಿದರು. ಅವರ ಸಾಧನೆಯ ಫಲ – ಈಗ ಕನ್ನಡ ಆಡಳಿತ ಭಾಷೆ.

– ರಾಮ ಪ್ರಸಾದ
ಕನ್ನಡ ಪ್ರಭ

೧೩. ಇಂದು ಕನ್ನಡಿಗರ ಬಹುದಿನಗಳ ಕನಸು ನನಸುಗೊಂಡ, ಪ್ರತ್ಯೇಕ ಪ್ರಾಂತ್ಯವಾಗಿ ರೂಪಗೊಂಡ ಕನ್ನಡ ನಾಡಿನಲ್ಲಿ ಆಡಳಿತದ ಎಲ್ಲ ಹಂತಗಳಲ್ಲಿ ಕನ್ನಡದ ಬಳಕೆ ನಡೆಯಬೇಕೆಂಬ ಸರ್ಕಾರದ ಆಡಳಿತ ಭಾಷಾ ನೀತಿಯನ್ನು ಜಾರಿಗೆ ತರುವಲ್ಲಿ ಜಿಲ್ಲಾ ಮಟ್ಟದ ನ್ಯಾಯಾಧೀಶರಾಗಿ, ಪ್ರಪ್ರಥಮವಾಗಿ ಕನ್ನಡದಲ್ಲಿಯೇ ನೂರಕ್ಕೂ ಹೆಚ್ಚು ತೀರ್ಪುಗಳನ್ನು ಕೊಟ್ಟು ಚರಿತ್ರಾರ್ಹವಾದ ದಿಟ್ಟ ಹೆಜ್ಜೆಯನ್ನಿಟ್ಟ ಜಯತೀರ್ಥ ಪುರೋಹಿತರು, ಕನ್ನಡ ನಾಡಿನ ರಾಜಪುರೋಹಿತರೆಂದು ಮಾನ್ಯರಾಗಿದ್ದಾರೆ, ಅಭಿನಂದನೀಯರಾಗಿದ್ದಾರೆ.

–ಪಿ.ಎಂ. ಗಲಗಲಿ
ಕಲಬುರ್ಗಿ

೧೪. ಕನ್ನಡ ಜನ ಜಯಣ್ಣನವರಿಗೆ ಋಣಿಯಾಗಿರಬೇಕಾದುದು ಸಾಹಿತ್ಯ ಸೇವೆಗಿಂತಲೂ ಹೆಚ್ಚಾಗಿ ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಅವರ ಕಾಳಜಿಗಾಗಿ. ಕನ್ನಡ ನಾಡಿನಲ್ಲಿ ಕನ್ನಡ ನುಡಿಯೇ ಪರದೇಶಿಯಾಗಿದೆ. ಸರ್ಕಾರ, ಆಡಳಿತ ಎಲ್ಲದಕ್ಕೂ ಮೂಲ ಶ್ರೀಸಾಮಾನ್ಯ. ಅವನಿಂದ ರಚಿತವಾದ ಆಡಳಿತ ಸಂಸ್ಥೆಗೆ ಅವನಿಗೇ ಅರ್ಥವಾಗದ ರೀತಿಯಲ್ಲಿ ಆಡಳಿತ ನಿರ್ವಹಿಸುವುದು ಎಂಥ ವಿಪರ್ಯಾಸ ! ಕನ್ನಡವೇ ಆಡಳಿತ ಭಾಷೆಯಾಗಬೇಕೆಂದು ಪಟ್ಟು ಹಿಡದವರಲ್ಲಿ ಜಯಣ್ಣನವರೂ ಒಬ್ಬರು.

– ಬಿ. ಮರಿಯಪ್ಪ
ಕನಕಗಿರಿ

೧೫. ಶ್ರೀ ರಾಜಪುರೋಹಿತರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಮಾಡಿದ ಕೆಲಸ ಚಿರಕಾಲ ಉಳಿಯತಕ್ಕದ್ದು ಮತ್ತು ಕನ್ನಡ ಜನ ನೆನಸಬೇಕಾದದ್ದು. ಈ ಕಾರ್ಯದಲ್ಲಿ ಅವರು ಬಾಳಿನ ಒಂದು ಹೊಸ ಸಾರ್ಥಕತೆಯನ್ನು ಬೆಳೆಸಿಕೊಂಡರೆಂದು ನಾನು ಭಾವಿಸಿದ್ದೇನೆ. ಶ್ರೀ ರಾಜಪು ರೋಹಿತರ ಕಾರ್ಯ ನಿರ್ವಹಣೆಯಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಬಹಳ

ಸೊಂಪಾಗಿ, ಚೆನ್ನಾಗಿ ಅಭಿವೃದ್ಧಿಯಾಯಿತು. ಅದರ ಚೈತನ್ಯದಾಯಕವಾದ ಕಾರ್ಯತತ್ಪರತೆಯಿಂದ, ಹುರುಪಿನ ಪ್ರಸ್ಥಾನದಿಂದ ಕನ್ನಡ ನಿಜಕ್ಕೂ ಸಂಪನ್ನವಾಯಿತು.

–ವೈ.ಯಂ.ಸಿ.ಶರ್ಮ
ನ್ಯಾಯಾಧೀಶರು, ಬೆಂಗಳೂರು.

೧೬. ಜಯತೀರ್ಥ ರಾಜಪುರೋಹಿತರು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಇತ್ತೀಚೆಗೆ ಕರ್ನಾಟಕದಲ್ಲಿ ಕನ್ನಡ ಭಾಷಾಭಿವೃದ್ಧಿ ಮತ್ತು ಪ್ರಸಾರ ಕಾರ್ಯದ ಪೌರೋಹಿತ್ಯ ವಹಿಸಿಕೊಂಡು ಇವರು ನಡೆಸಿದ ಆಂದೋಲನ ಕರ್ನಾಟಕದ ಒಳ ಹೊರಗೂ ಪ್ರಭಾವ ಬೀರಿದೆಯೆಂಬುದೂ ಗಮನಾರ್ಹ. ಇವರ ಜೀವನ ಚರಿತ್ರೆಯಲ್ಲಿ ಸ್ವಂತ ಸಾಹಿತ್ಯ ಕೃಷಿಯದೊಂದು ಅಧ್ಯಾಯವಾದರೆ ಕನ್ನಡ ಭಾಷಾಭಿವೃದ್ಧಿಯದೇ ಮತ್ತೊಂದು ಅಧ್ಯಾಯವಾಗುತ್ತದೆ. ಕನ್ನಡದಲ್ಲಿ ನ್ಯಾಯ–ನಿರ್ಣಯಗಳನ್ನು ಬರೆದು, ಪ್ರಕಟಿಸಿ, ಸಮರ್ಥರೆಂದು ಪುರಸ್ಕಾರ ಪಡೆದ ಜಯತೀರ್ಥರು ಕನ್ನಡ ರಾಜ್ಯ ಭಾಷಾ ಪೌರೋಹಿತ್ಯ ವಹಿಸಲು ಸಿದ್ಧಮಾಡಿ ತೋರಿಸಿದ್ದಾರೆ. ಸಾಹಿತ್ಯದ ಆಳವಾದ ಅಧ್ಯಯನ ಮತ್ತು ಆಡಳಿತದ ವಿಶಾಲ ಅನುಭವ – ಇವೆರಡೂ ಸೇರಿ ಜಯತೀರ್ಥರು ಸಹಜ ಜಯಶಾಲಿಯಾಗುವಲ್ಲಿ ಸಹಾಯಕಾರಿಯಾಗಿವೆ.

–ಬಿ.ಎ. ಸನದಿ
ಮುಂಬಯಿ

೧೭. ರಾಜಪುರೋಹಿತರು ತಮ್ಮ ಆಜ್ಞೆ – ತೀರ್ಪುಗಳನ್ನು ಕನ್ನಡದಲ್ಲಿ ಬರೆದು ಎಲ್ಲರ ಗಮನ ಸೆಳೆದರು. ಅದು ಸರ್ಕಾರಕ್ಕೊಂದು ಗ್ಲಾನಿ ಉಂಟಾಗಿದ್ದ ಕಾಲ. ಕನ್ನಡವನ್ನು ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ರೂಢಿಯಲ್ಲಿ ತರಬೇಕೆಂದು ಜನತೆಯ ಅಪೇಕ್ಷೆಯಾಗಿತ್ತು. ಮಂತ್ರಿಗಳು ಮತ್ತು ಶಾಸಕರಿಗೆ ಇದರಲ್ಲಿ ಆಸ್ಥೆಯೂ ಇತ್ತು. ಆದರೆ ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳ ಭದ್ರಗೋಡೆಯೊಂದು ಅಡ್ಡವಾಗಿ ನಿಂತಿತ್ತು. ಸರ್ಕಾರದ ಕಾರ್ಯದರ್ಶಿ, ಜಿಲ್ಲಾಧಿಕಾರಿ ಮೊದಲಾದ ಸ್ಥಾನಗಳಲ್ಲಿದ್ದ ಈ ತಂಡ ಕನ್ನಡದ ಕಡೆಗೆ ಹೊರಳಿ ನೋಡಲೂ ಸಿದ್ಧವಿರಲಿಲ್ಲ. ಆಡಳಿತ ವ್ಯವಹರಣೆಗೆ ತಕ್ಕ ಪ್ರಬುದ್ಧತೆಯೇ ಕನ್ನಡಕ್ಕಿಲ್ಲವೆಂಬುದು ಅವರ ಸಿದ್ಧಾಂತ. ಅದನ್ನೇ ಮಂತ್ರಿಗಳು, ರಾಜಕಾರಣಿಗಳು ಪುನರುಚ್ಚರಿಸುತ್ತ ಹೊರಟಿದ್ದರು. ವಿಧಾನಸೌಧದ ಕಲ್ಲಿನ ಗೋಡೆಯ ಮೇಲೆ ಇದು ಯಾವ ಪರಿಣಾಮವನ್ನೂ ಬೀರಲಿಲ್ಲ. ಹೀಗೆ ಅಭೇದ್ಯವೆನಿಸಿದ್ದ ಈ ಕೋಟೆಗೆ ಮೊದಲ ಗುಂಡು ಹೊಡೆದವರು ರಾಜಪುರೋಹಿತರು. ಅವರ 'ಕನ್ನಡ ತೀರ್ಪುಗಳು' ಪುಸ್ತಕ, ಕನ್ನಡದ ವಿಧಾನ

ಸೌಧ ಪ್ರವೇಶಕ್ಕೆ ಒಂದು ಹೊಸ ದ್ವಾರವನ್ನೇ ನಿರ್ಮಿಸಿತು. ಆಮಲೆ ಸರ್ಕಾರಿ ಮಟ್ಟದಲ್ಲಿ ಕನ್ನಡ ಪ್ರವೇಶಕ್ಕೆ ಅನೇಕ ಮುಖಗಳೊಡೆದವು.

–ಸುರೇಂದ್ರ ದಾನಿ
ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

೧೮. ಅವರು ಕನ್ನಡದ ಹಿರಿಮೆಗಾಗಿ ಮಾಡಿದ ಕೆಲಸ ಮಾತ್ರ ಮರೆಯಬಾರದಂತಹುದು. ಆ ಕೆಲಸದಲ್ಲಿ ಅವರು ತೋರಿದ ಆತ್ಮವಿಶ್ವಾಸ ಮೆಚ್ಚುವಂತಹದು. ವಿಶೇಷ ಜಿಲ್ಲಾಧಿಕಾರಿಯಾಗಿ ಅವರು ತಮ್ಮ ತೀರ್ಪುಗಳನ್ನು ಕನ್ನಡದಲ್ಲಿಯೇ ಕೊಟ್ಟು "ನ್ಯಾಯಾಂಗ ತನ್ನ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ಇಂಗ್ಲೀಷಿಗೆ ಜೋತು ಬೀಳಬೇಕಾಗಿಲ್ಲ. ಕನ್ನಡವನ್ನು ಅವಲಂಬಿಸ ಬಹುದು, ನಮ್ಮ ಕನ್ನಡ ಭಾಷೆಗೂ ನ್ಯಾಯ ನಿರ್ಣಯಕೊಡುವ ಶಕ್ತಿಯಿದೆ" ಎಂದು ತೋರಿಸಿಕೊಟ್ಟರು. ಅವರು ಕೊಟ್ಟ ತೀರ್ಪುಗಳನ್ನು "ಕನ್ನಡದ ತೀರ್ಪುಗಳು" ಎಂದು ಅಭಿಮಾನದಿಂದ ಪ್ರಕಟಿಸಿ ಇಡೀ ಭಾರತಕ್ಕೆ ಒಂದು ದಾಖಲೆಯನ್ನು ಸ್ಥಾಪಿಸಿದರು. ಬೇರಾವ ರಾಜ್ಯ ಭಾಷೆಯೂ ಮಾಡದಿದ್ದುದನ್ನು ಕನ್ನಡ ಭಾಷೆ ಮಾಡಿರುವದನ್ನು ಕೇಂದ್ರ ಮೆಚ್ಚಿತು. ಕರ್ನಾಟಕ ರಾಜ್ಯ ಈ ಗ್ರಂಥಕ್ಕೆ ವಿಶೇಷ ಪ್ರಶಸ್ತಿ ನೀಡಿತು.

**–ಸಿ.ಕೆ. ನಾಗರಾಜರಾವ್**
ಬೆಂಗಳೂರು

೧೯. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಆ ಇಲಾಖೆಯ ವ್ಯವಸ್ಥೆಯನ್ನು ಉತ್ತಮವಾಗಿ ಮಾಡಿದ್ದಾರೆ. ಕನ್ನಡ ಎಲ್ಲಾ ಹಂತದಲ್ಲೂ ಆಡಳಿತ ಭಾಷೆಯಾಗಬೇಕೆಂಬ ಸರ್ಕಾರದ ಆದೇಶ ಕಾರ್ಯರೂಪಕ್ಕೆ ಬರಲು ಬಹಳ ಶ್ರಮಿಸಿದ್ದಾರೆ. ಆ ಉದ್ದೇಶವನ್ನು ಕಾರ್ಯರೂಪಕ್ಕೆ ತರುವ ಮಾರ್ಗದಲ್ಲಿ ಅಡ್ಡಿ ಬಂದವರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಸಭೆಗಳಲ್ಲಿ ಅವರ ನಿಲುವು ಯಾರೂ ಮೆಚ್ಚತಕ್ಕದ್ದೇ. ಇದರಿಂದಾಗಿ ಕನ್ನಡದ ಅಂದಾಭಿಮಾನಿಯೆಂಬ ಅಪವಾದಕ್ಕೂ ಗುರಿಯಾಗಿದ್ದಾರೆ. ಕೆಲವರು ಭಾಷಾ ಸಮಸ್ಯೆಯ ಸಾಮಾನ್ಯ ಜ್ಞಾನವೂ ಇಲ್ಲದೆ ವಾದ ಮಾಡುತ್ತಾರೆ. ಆಂಗ್ಲ ಭಾಷೆಯನ್ನು ಬಿಟ್ಟರೆ ನಮಗೆ ಮುಕ್ತಿಯೇ ಇಲ್ಲವೆಂದು ಭಾವಿಸುತ್ತಾರೆ. ಇವೆಲ್ಲವೂ ಅವರ ಮೌಢ್ಯದ ಕುರುಹು. ಕನ್ನಡ ಆಡಳಿತ ಭಾಷೆ ಆಗಬೇಕೆನ್ನುವವರು ಅನ್ಯಭಾಷೆಗಳ ವಿರೋಧಿಗಳಲ್ಲ. ಆದರೆ ಆಡಳಿತ ಯಂತ್ರ ಇರುವುದು ಶ್ರೀ ಸಾಮಾನ್ಯರ ಯೋಗ ಕ್ಷೇಮಕ್ಕಾಗಿ. ಸಾಮಾನ್ಯರಿಗೆ ತಿಳಿಯುವ

ಭಾಷೆಯಲ್ಲಿ ವ್ಯವಹರಿಸಿದರೆ ಆಡಳಿತ ವ್ಯವಸ್ಥೆ ಮತ್ತು ಜನತೆಯ ನಡುವೆ ಮಧುರ ಬಾಂಧವ್ಯ ಸಾಧ್ಯವಾಗುತ್ತದೆ. ಇದು ಜಯತೀರ್ಥರ ಅಚಲ ನಂಬಿಕೆಯಾಗಿತ್ತು.

– ಸಾ. ಮಂಚಯ್ಯ
ವಿದ್ಯಾ ಇಲಾಖೆ, ಬೆಂಗಳೂರು.

೨೦. ಸರಕಾರೀ ನೌಕರರಲ್ಲಿ ಎಷ್ಟೋ ಜನ ಕಥೆ, ಕವನ, ಕಾದಂಬರಿ ಬರೆಯಬಹುದು. ಆದರೆ ಅವರಿಗೆಲ್ಲ ಕನ್ನಡದ ಬಗ್ಗೆ ನಿಜವಾದ ಕಳಕಳಿ ಇದೆಯೆಂದು ಹೇಳುವದಕ್ಕಾಗುವದಿಲ್ಲ. ರಾಜಪುರೋಹಿತರಂತೆ ಎಲ್ಲರಿಗೂ ನಿಜವಾದ ಕಳಕಳಿ ಇದ್ದಿದ್ದರೆ ಎಲ್ಲ ಹಂತಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಿ ಬಳಕೆಯಾಗಲು ಹೆಚ್ಚು ಕಾಲ ಹಿಡಿಯುತ್ತಿರಲಿಲ್ಲ. ರಾಜಪುರೋಹಿತರ ಕನ್ನಡ ಪ್ರೇಮ ಅನುಕರಣೀಯ, ಇತರರಿಗೆ ಮೇಲ್ಪಂಕ್ತಿ.

– ಜಿ. ನಾರಾಯಣ
ಬೆಂಗಳೂರು.

■

## ೫ ಸಾಹಿತ್ಯಕ ಸಾಧನೆ

ಜಯತೀರ್ಥ ರಾಜಪುರೋಹಿತರು ಒಬ್ಬ ಐ.ಎ.ಎಸ್ ಶ್ರೇಣಿಯ ಅಧಿಕಾರಿಯಾಗಿದ್ದರೂ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಅಪಾರವಾದುದಾಗಿದೆ. ತಮ್ಮ ಕೆಲಸದ ಒತ್ತಡದ ನಡುವೆಯೂ ಅವರು ಅನೇಕ ಮೌಲಿಕ ಕೃತಿಗಳನ್ನು ಕೊಟ್ಟಿದ್ದಾರೆ. ಅವರ ಸಾಹಿತ್ಯ ಸೇವೆಗಾಗಿ ೧೯೭೮ರಲ್ಲಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಲಭಿಸಿದೆ. ಕನ್ನಡದಲ್ಲಿ ಮೊಟ್ಟಮೊದಲು ಅವರು ರಚಿಸಿದ "ಕನ್ನಡ ತೀರ್ಪುಗಳು" ಗ್ರಂಥಕ್ಕೆ ಕರ್ನಾಟಕ ಸರಕಾರದಿಂದ ೧೯೭೭ರಲ್ಲಿ ವಿಶೇಷ ಪ್ರಶಸ್ತಿ ಲಭಿಸಿದೆ.

ಸಾಹಿತ್ಯ ಕ್ಷೇತ್ರದ ವಿವಿಧ ಪ್ರಾಕಾರಗಲ್ಲಿ ಅವರು ಕೃತಿ ರಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಕಾದಂಬರಿ, ಸಣ್ಣ ಕಥೆ, ನಾಟಕ, ಜೀವನ ಚರಿತ್ರೆ ಈ ಮೊದಲಾದ ಪ್ರಾಕಾರಗಳಲ್ಲಿ ಜಯತೀರ್ಥರು ಸುಮಾರು ಹದಿನಾರು ಕೃತಿಗಳನ್ನು ರಚಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ "ಕನ್ನಡ ತೀರ್ಪುಗಳು" ಕೃತಿ ಪ್ರಕಟವಾದರೆ, ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಿಂದ "ಆಡಳಿತದಲ್ಲಿ ಕನ್ನಡ" ಕೃತಿ ಪ್ರಕಟವಾಗಿದೆ. ಇದಲ್ಲದೆ ಏಳು ಸಂಪಾದಿತ ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಇವರ ನಲವತ್ತುಮೂರು ಲೇಖನಗಳು ೧೯೪೫ರಿಂದ ೧೯೭೭ರ ಅವಧಿಯಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಒಂದು ಕಾದಮಬರಿಯ ಅನುವಾದವನ್ನು ಮಾಡಿದ್ದಾರೆ.

ಇವರ ಕೃತಿಗಳು ಮೂರು – ನಾಲ್ಕು ಆವೃತ್ತಿಗಳನ್ನು ಕಾಣುವುದರ ಮೂಲಕ ಪಠ್ಯಪುಸ್ತಕಗಳಾಗಿಯೂ ಪ್ರಸಿದ್ಧಿ ಪಡೆದಿವೆ. ಮೂರನೇ ಆವೃತ್ತಿಯಲ್ಲಿ ಪ್ರಕಟವಾದ "ಜೇನು ಸುಳಿ" ಕಾದಂಬರಿ ಮೈಸೂರು ವಿಶ್ವವಿದ್ಯಾಲಯದ ಬಿ.ಎ. / ಬಿ.ಎಸ್ಸಿ ತರಗತಿಗೆ ಪಠ್ಯವಾಗಿದ್ದರೆ, "ಸುಳಿಗಾಳಿ" ಕಾದಂಬರಿ ರಾಜ್ಯ ಮಟ್ಟದ ಸುಧಾ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ. /ಬಿ.ಎಸ್ಸಿ ತರಗತಿಗೆ ಪಠ್ಯಪುಸ್ತಕವಾಗಿದೆ.

**೧) ಕಾದಂಬರಿಗಳು :**

ಜಯತೀರ್ಥರು ಮೂರು ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದಾರೆ

"ಹಾಲುಜೇನು" ಮೊದಲ ಕಾದಂಬರಿ, ಕಲಬುರ್ಗಿ ಕನ್ನಡ ಸಾಹಿತ್ಯ ಸಂಘದಿಂದ ಪ್ರಕಟವಾಗಿದೆ. ನಂತರದಲ್ಲಿ "ಸುಳಿಗಾಳಿ" ಕಾದಂಬರಿ ಪ್ರಕಟವಾಯಿತು. ಮೂರನೆಯ ಕಾದಂಬರಿಯೇ "ಜೋಹರಾ". ಇದು ಗುಲಬರ್ಗಾ ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿತ್ತು. ಈ ಮೂರೂ ಕಾದಂಬರಿಗಳು ಹೈದ್ರಾಬಾದ ಕರ್ನಾಟಕ ಪ್ರದೇಶದ ಅಂದಿನ ಜನಜೀವನಕ್ಕೆ ಹಿಡಿದ ಕನ್ನಡಿಗಳಂತಿವೆ. "ಹಾಲುಜೇನು" ಮತ್ತು "ಸುಳಿಗಾಳಿ" ಇವೆರಡೂ ಕಾದಂಬರಿಗಳನ್ನು ಕೂಡಿಸಿ ಮುಂದೆ "ಜೇನುಸುಳಿ" ಹೆಸರಿನಲ್ಲಿ ಪ್ರಕಟಿಸಲಾಯಿತು. ಇವು ಮೂರೂ ಕಾದಂಬರಿಗಳು ಪ್ರಾದೇಶಿಕ ಕಾದಂಬರಿಗಳೇ ಆಗಿವೆ.

"ಹಾಲುಜೇನು" ಕಾದರಂಬರಿಯಲ್ಲಿ ನಿಜಾಮ್ ರಾಜ್ಯದ ಸ್ಥಿತ್ಯಂತರವನ್ನು ಕಾಣಬಹುದಾಗಿದೆ. ನಿಜಾಮ್ ರಾಜ್ಯದಲ್ಲಿದ್ದ ರಾಜಕೀಯ – ಸಾಮಾಜಿಕ ಜೀವನದ ಚಿತ್ರಣವನ್ನು ಇಲ್ಲಿ ಚಿತ್ರಿಸಲಾಗಿದೆ. ಜಯತೀರ್ಥರು ಇಲ್ಲಿಯ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸಿದ್ದರಿಂದ ಅಂದಿನ ಕಾಲಘಟ್ಟದ ಪ್ರಸಂಗಗಳನ್ನು ವಸ್ತುನಿಷ್ಠವಾಗಿ ನೋಡಲು ಸಾಧ್ಯವಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಭಾಷೆ ಇಲ್ಲಿ ಯಥಾವತ್ತಾಗಿ ಬಂದಿದೆ. ಹೀಗಾಗಿ ಕಾದಂಬರಿಯ ವಸ್ತುವಿಗೂ – ಭಾಷೆಗೂ ಸಮನ್ವಯತೆ ಇರುವುದನ್ನು ಕಾಣಬಹುದಾಗಿದೆ. ಹಳ್ಳಿಯ ಜೀವನದಲ್ಲಿ ಎರಡು ಧರ್ಮ–ಪಂಗಡಗಳ ನಡುವೆ ಉಂಟಾಗುವ ಮಧುರ ಸಂಬಂಧಗಳನ್ನು ಕಾದಂಬರಿಕಾರರು ಇಲ್ಲಿ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ಪೀರ–ಹಂಪಿ–ಫಾತಿಮಾ ಇವರ ಪ್ರೇಮ ಪ್ರಸಂಗಗಳು ಇಲ್ಲಿ ಕುತೂಹಲವನ್ನುಂಟು ಮಾಡಿವೆ. ಧರ್ಮವನ್ನು ರಾಜಕೀಯಕ್ಕೆ ಬಳಸಿಕೊಂಡರೆ, ಅದು ಹೇಗೆ ಅಪಾಯಕಾರಿಯಾಗುತ್ತದೆಂಬುದನ್ನು ಕಾದಂಬರಿ ಹೇಳುತ್ತದೆ. ಆದರೆ ಎಷ್ಟೇ ಹುಳಿ ಹಿಂಡಿದರೂ ಕೆಡದ ಹಾಲಿನಂತೆ ಪೀರನ ಪಾತ್ರವಿದೆ; ಹಂಪಿ ಆತನ ಆತ್ಮಸಾಕ್ಷಿಯಾಗಿ ಕಾಣಿಸಿಕೊಂಡಿದ್ದಾಳೆ.

ಹೇಮಗಿರಿಯ ಹೇಮಾಚಲ ದೇವಾಲಯದಿಂದ ಪ್ರಾರಂಭವಾದ ಕಥೆ, ಹೇಮಗಿರಿಯಲ್ಲಿ ಪೀರ–ಫಾತಿಮಾ ಮಿಲನದಲ್ಲಿ ಮುಕ್ತಾಯಗೊಳ್ಳುತ್ತದೆ. ನಿಜಾಮ್‌ರ ರಾಯಚೂರ ಸಂದರ್ಶನದ ಚಿತ್ರಣವು, ಅವರ ದರ್ಬಾರ–ವೈಭವಗಳಿಗೆ ಹಿಡಿದ ಕನ್ನಡಿಯಂತಿದೆ. ಅಮರವ್ವನ ಖಾನಾವಳಿ, ಪೀರನ ಎತ್ತು ಕಾರುಹುಣ್ಣಿಮೆ ಕರಿ ಹರಿದದ್ದು, ಶೀನಪ್ಪಾಚಾರ್ಯರು ಹಂಪಿಗೆ ಬಸವದೀಕ್ಷೆ ನೀಡಿದ್ದು, ಜಲಾಲ್ ವಕೀಲಿ ವೃತ್ತಿಗೆ ಪ್ರವೇಶ ಪಡೆದದ್ದು ಈ ಮುಂತಾದ ಸನ್ನಿವೇಶಗಳನ್ನು ಇಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಹೆಸರೇ ಸೂಚಿಸುವಂತೆ ಈ ಕಾದಂಬರಿ, ಓದುಗರಿಗೆ ಹಾಲು–ಜೇನಿನ ಸವಿಯನ್ನುಣಬಡಿಸುತ್ತದೆ. ಆದರೆ ಕಾದಂಬರಿಯ ಬಂಧ ಸಡಿಲಾದಂತೆ ಕಾಣಿಸುತ್ತದೆ. ಒಂದೆರಡು ಅಧ್ಯಾಯಗಳು ಮುಖ್ಯ ಕಥಾ ಪ್ರವಾಹದಿಂದ

ದೂರ ತಳ್ಳಲ್ಪಟ್ಟಂತೆ ಕಾಣುತ್ತವೆ. ಮೊದಲ ಕಾದಂಬರಿಯಲ್ಲಿರಬಹುದಾದ ಇಂತಹ ಕೆಲವು ಮಿತಿಗಳನ್ನು ಈ ಕಾದಂಬರಿಯಲ್ಲಿ ಗುರುತಿಸಲು ಸಾಧ್ಯವಿದೆ. ಆದರೂ ಕಾದಂಬರಿ ರಜಾಕಾರರ ಹಾವಳಿಯ ಪ್ರಸಂಗಗಳನ್ನು ಹೇಳುವಲ್ಲಿ ಯಶಸ್ವಿಯಾಗಿದೆ. ಪೀರ-ಹಂಪಿಯರ ಪಾತ್ರಗಳಲ್ಲಿ ಕಾದಂಬರಿಯ ಸಾಧ್ಯತೆಯನ್ನು ಕಾಣಬಹುದಾಗಿದೆ.

ನಿಜಾಮ್ ರಾಜ್ಯದ ಸಾಮಾಜಿಕ-ಧಾರ್ಮಿಕ-ರಾಜಕೀಯ ಸನ್ನಿವೇಶಗಳನ್ನೆಲ್ಲ ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಈ ಕಾದಂಬರಿಯಲ್ಲಿ ಮೂರು ಮುಖ್ಯ ಸಂಗತಿಗಳಿವೆ. ದ್ವಿರಾಷ್ಟ್ರವಾದಿಗಳ ಕುತಂತ್ರ ಒಂದು ಕಡೆ ಕಾಣಿಸಿಕೊಂಡರೆ, ಜಾತಿಯಿಂದ ಮುಸ್ಲಿಮರಾದರೂ ವೃತ್ತಿಯಿಂದ ರೈತರಾಗಿ ನೆರೆಯುವರೊಂದಿಗೆ ಕೂಡಿಬಾಳುತ್ತಿರುವ ಶೇಕಣ್ಣಾ-ಪೀರ-ಹಸೀನವ್ವ-ಹಂಪಿಯರು ಗಮನ ಸೆಳೆಯುತ್ತಾರೆ. ಹಿಂದೂ-ಮುಸ್ಲಿಂ ಧರ್ಮಗಳ ತಿರುಳು ಒಂದೇ ಎಂದು ತಿಳಿಸುವ ಜೋಯಿಸರು ಇಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಉತ್ತಮ ಕಲಾಕೃತಿಯಾಗಿರುವ ಹಾಲು-ಜೇನು ಮಹತ್ವದ ಆಶಯವನ್ನು ಹೊಂದಿರುವ ಕಾದಂಬರಿಯಾಗಿದೆ.

"ಸುಧಾ" ಸ್ಪರ್ಧೆಗಾಗಿ ಬಂದ ೧೪೦ ಕಾದಂಬರಿಗಳಲ್ಲಿ "ಸುಳಿಗಾಳಿ" ಕಾದಂಬರಿಗೆ ಪ್ರಥಮ ಬಹುಮಾನ ಬಂದಿರುವುದನ್ನು ಗಮನಿಸಿದರೆ, ಈ ಕಾದಂಬರಿಯ ಪ್ರಾಮುಖ್ಯತೆ ಗೊತ್ತಾಗುತ್ತದೆ. "ಸುಳಿಗಾಳಿ" ಒಂದು ದೃಷ್ಟಿಯಿಂದ ಐತಿಹಾಸಿಕ ಕಾದಂಬರಿಯಾದರೂ, ಇಲ್ಲಿ ಪರಿವರ್ತನಶೀಲ ಸಮಾಜದ ಏರು-ಪೇರುಗಳನ್ನು ಕಾಣಬಹುದಾಗಿದೆ. ಹೈದ್ರಾಬಾದದ, ಕನ್ನಡ ಪ್ರದೇಶ, ಪರಿವರ್ತನೆಯ ಹಂತದಲ್ಲಿರುವ ಅಲ್ಲಿಯ ಶ್ರೀಮಂತ ಸಮಾಜ ಇಲ್ಲಿಯ ಮುಖ್ಯ ವಸ್ತುವಾಗಿದೆ. ಒಂದು ಸಮಾಜದ ಕಟ್ಟು ಸಡಿಲಿ, ಅದು ಇನ್ನೊಂದು ಸಾಮಾಜಿಕ ವ್ಯವಸ್ಥೆಯ ರೂಪ ತಾಳಲು ಹವಣಿಸುವ ಸಂಕ್ರಮಣ ಸ್ಥಿತಿಯನ್ನು ಇಲ್ಲಿ ಕಾಬಹುದುದಾಗಿದೆ. ಜಮರುದ್ ಬೇಗಮ್‌ಳ ವಿಲಾಸೀ ಜೀವನ, ಅಲ್ಲಲ್ಲಿ ಬರುವ ಪ್ರಣಯ ಪ್ರಸಂಗಗಳು ಗಮನ ಸೆಳೆಯುತ್ತವೆ. ಇಡೀ ಕಥೆಗೆ ಗುಲಾಬಿ ಬೇಗಮ್‌ಳ ವರ್ಣಚಿತ್ರ ಸಾಂಕೇತಿಕವಾಗಿ ಮೂಡಿಬಂದಿದೆ.

ಹೈದ್ರಾಬಾದ ನಿಜಾಮನ ಅವನತಿಯೊಂದಿಗೆ, ಇಲ್ಲಿಯ ಜನಜೀವನದ ಸೂಕ್ಷ್ಮ ಎಳೆಗಳನ್ನು ಕಾದಂಬರಿ ಕಟ್ಟಿಕೊಡುತ್ತದೆ. ಜಯತೀರ್ಥರು ಈ ಎಲ್ಲ ಪ್ರಸಂಗಗಳನ್ನು ತಮ್ಮ ಕಲಾತ್ಮಕ ನೆಯ್ಗೆಯಲ್ಲಿ ಸಿದ್ಧಪಡಿಸಿದ್ದಾರೆ. ಸ್ವಾತಂತ್ರ್ಯದ ನಂತರ ಜೀವನ ಮೌಲ್ಯಗಳಲ್ಲಾದ ಬದಲಾವಣೆ, ಅಧಿಕಾರದ ಲಾಲಸೆ, ಸ್ವಾರ್ಥ, ಲಂಚಗುಳಿತನ, ಹಿಂದೂ-ಮುಸ್ಲಿಮ್‌ರಲ್ಲಿ ಬೆಳೆದ ವೈಷಮ್ಯ, ಧಾರ್ಮಿಕ ದಬ್ಬಾಳಿಕೆ – ಇವೆಲ್ಲವನ್ನು ಕಾದಂಬರಿ ಹೇಳುತ್ತ ಹೋಗುತ್ತದೆ. ಕಾದಂಬರಿಯ ವಸ್ತುವಿಗೆ ತಕ್ಕಂತೆ ಭಾಷೆ ಝಳಪಿಸುವ ಖಡ್ಗದಂತಿದೆ. ಮಹಾತ್ಮಾ ಗಾಂಧಿಯವರ ಸತ್ಯಾಗ್ರಹದಂತಹ

ಪವಿತ್ರ ಅಸ್ತ್ರಗಳು ಇಂದು ಹೇಗೆ ದುರ್ಬಳಕೆಯಾಗುತ್ತಿವೆಯೆಂಬುದನ್ನು, ಲೇಖಕರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಸತ್ಯಾಗ್ರಹವು ಶ್ರಾದ್ಧದಂತೆ ಬಳಕೆಯಾಗುತ್ತದೆಂದು ಲೇಖಕರು ವಿಡಂಬಿಸಿದ್ದಾರೆ.

ಈ ಕಾದಂಬರಿಯಲ್ಲಿ ನವಾಬ ಬೇಗಮ್‌ಳ ತೈಲಚಿತ್ರ, ಮಹತ್ವದ ಪಾತ್ರ ವಹಿಸುತ್ತದೆ. ನವಾಬಶಾಹಿಯ ಏಳು–ಬೀಳುಗಳು ಈ ತೈಲ ಚಿತ್ರದ ಸಂಕೇತದ ಮೂಲಕ ವ್ಯಕ್ತವಾಗುತ್ತ ಹೋಗುತ್ತವೆ. "ಕರಾಮತ್ ಮಂಜಿಲ್" – "ದಿಲ್ ಸುಖಿ ಹೋಟೆಲ್" ಆಗುವ ಮುನ್ನ, ನವಾಬ ಬೇಗಮಳ ತೈಲ ಚಿತ್ರ ದಿಲಾವರನ ಕೈಯಿಂದ ಕೆಳಗುರುಳಿ, ನವಾಬರ ಭೋಗ ವಿಲಾಸದ ಜೀವನದ ಕೊನೆಯನ್ನು ಸಾಂಕೇತಿಕವಾಗಿ ಹೇಳುತ್ತದೆ. ಛೋಟಾ ನವಾಬ್, ಜಮರದ್ ಬೇಗಮ್ ಹಾಗೂ ಷಿರೀನಳ ಅಧಃಪತನದ ಕಾರಣವನ್ನು ಲೇಖಕರು ತಮೀಜಖಾನನಿಂದ ಹೇಳಿಸಿದ್ದಾರೆ.

ಇಲ್ಲಿ ರಾಜ–ಮಹಾರಾಜರು, ನವಾಬ್ ಬೇಗಮ್‌ರ ಕಥೆಯೊಂದಿಗೆ, ಆ ಕಾಲದ ರಾಜಕೀಯ ಚಳುವಳಿ, ಹಿಂದೂ–ಮುಸ್ಲೀಮ್ ವೈಷಮ್ಯ ಈ ಎಲ್ಲ ಪರಿವರ್ತನೆಗಳ ಬಗೆಗೂ ವಿವರಣೆ ಇದೆ. ಸ್ವಾತಂತ್ರ್ಯಾನಂತರದ ಪರಿಸ್ಥಿತಿಯನ್ನು ಕಾದಂಬರಿ ಯಶಸ್ವಿಯಾಗಿ ಹಿಡಿದಿಡುತ್ತದೆ. ಹಿಂದು–ಮುಸ್ಲೀಮ್ ಏಕತೆಯ ಬಗೆಗೆ ಕಾಣುವ ಪೀರನ ಕನಸು ಮನಮುಟ್ಟುತ್ತದೆ. ಪುಢಾರಿಗಳಿಂದ ದೇಶ ದುರವಸ್ಥೆಯತ್ತ ಸಾಗುತ್ತಿರುವುದನ್ನು ಕಾದಂಬರಿ ವ್ಯಂಗ್ಯವಾಗಿ ಹೇಳುತ್ತದೆ. ಪೋಲಿಸ್ ಕಾರ್ಯಾಚರಣೆಯ ಸಂದರ್ಭವನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಅನೇಕರಿಗೆ ಕೊಳ್ಳೆಹೊಡೆದು ಧನಿಕರಾಗಲು ರಜಾಕಾರ ಹಾವಳಿ ಸುವರ್ಣ ಅವಕಾಶವನ್ನೇ ಕಲ್ಪಿಸಿತ್ತು. ಆಧುನಿಕತೆಯ ಸೋಗುಗಳಿಗೆ ಮಾರುಹೋಗಿ, ಪವಿತ್ರವಾಗಿದ್ದ ವೈವಾಹಿಕ ಸಂಬಂಧಗಳು ಹೇಗೆ ಛಿದ್ರಗೊಳ್ಳುತ್ತವೆಯೆಂಬುದನ್ನು ಕಾದಂಬರಿ ತುಂಬ ಪರಿಣಾಮಕಾರಿಯಾಗಿ ಹೇಳುತ್ತದೆ.

ಷಿರೀನ್ ಅಖಲಾಕ್ ಇವರ ವಿವಹಾ ವಿಚ್ಛೇದನದ ಪ್ರಸಂಗದ ಮೂಲಕ ಲೇಖಕರು ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ. ಷಿರೀನ್‌ಳ ಬಗ್ಗೆ ಅಖಲೆಕ್ ಹುಸೇನರು ಹೀಗೆ ಹೇಳುತ್ತಾರೆ.

"ಇರಬೇಕು! ನಾನೇ ಮೂರ್ಖನಿರಬೇಕು! ಮೂರ್ಖ! ಶ್ರೀಮಂತ ವಂಶದಲ್ಲಿ ಕೇವಲ ರತ್ನಗಳೇ ಇರುವವೆಂದುಕೊಂಡು ವ್ಯವಹಾರ ಮಾಡಿದ ಮೂರ್ಖ. ಆದರೆ ಇದು ಮಾತ್ರ ಕೇವಲ ಗ್ಲಾಸ್. ಸುಂದರವಾದ ಕಟ್‌ಗ್ಲಾಸ್. ಇದನ್ನು ಒಡೆದರೂ ಅಷ್ಟೇ ಎಸೆದರೂ ಅಷ್ಟೇ"

ಇಂತಹ ಸಂಭಾಷಣೆಗಳು ಕಾದಂಬರಿಯ ಯಶಸ್ವಿಗೆ ಕಾರಣವಾಗಿವೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದ ಉರ್ದು ಮಿಶ್ರಿತ ಕನ್ನಡ ಈ ಪ್ರದೇಶದ ಓದುಗರಿಗೆ ಖುಷಿ ಕೊಡುತ್ತದೆ. ಅಲ್ಲಲ್ಲಿ ಬರುವ ಉರ್ದು ಶಾಯರಿಗಳು ಗಮನ ಸೆಳೆಯುತ್ತವೆ.

"ಕುಛತೊ ಮಿಲ್‌ಜಾಯೆ ಲಬೆ ಷೀರಿನ್‌ಸೆ
ಜಹರ ಖಾನೇಕೀ ಇಜಾಜತ್ ಹಿ ಸಹಿ"

ಇಂತಹ ಗಜಲ್‌ಗಳ ಮೂಲಕ ಈ ಕಾದಂಬರಿ ಓದುಗರ ಗಮನ ಸೆಳೆಯುತ್ತದೆ. ರಾಜಕೀಯದಲ್ಲಿ ಎಂತಹ ಸುಳಿಗಾಳಿ ಇದೆಯೆಂಬುದನ್ನು ಲೇಖಕರು ಹೀಗೆ ಹೇಳಿದ್ದಾರೆ.

"ಇದೇ ಒಂದು ತರಹ ಅವನತಿಯ ಕಾಲ ಸ್ವಾಮಿ, ಹಳೆಯ ವತನದಾರಿ ಮನೆತನಗಳ ಬೇರು, ಕೊಳೆತಿದ್ದವೆಂದು ಕತ್ತರಿಸಿ ಒಗೆದೆವು. ಈ ಹೊಸ ಬೆಳೆಗೆ ಇನ್ನ ಬೇರು ಬಲಿತಿಲ್ಲ. ಹೂವೆಂಥದೊ, ಹಣ್ಣೆಂಥದೊ ಗೊತ್ತಿಲ್ಲ. ಗೊತ್ತು ಗುರಿಯಿಲ್ಲದೆ ಸಾಗಿದೀ ಜೀವನ, ಸುಳಿಗಾಳಿ ಒಯ್ದಂತೆ. ಕಾಯಿದೆಗೆ, ನ್ಯಾಯಕ್ಕೆ, ಸತ್ಯಕ್ಕೆ ಪುರಸ್ಕಾರ ಸಿಕ್ಕೇ ಸಿಕ್ಕೀತು......" ಎನ್ನುವಂತಹ ನುಡಿಗಳು ತೀವ್ರ ಜಿಜ್ಞಾಸೆಗೆ ಹಚ್ಚುತ್ತವೆ.

"ಜೊಹರಾ" – ಜಯತೀರ್ಥರ ಮೂರನೇ ಕಾದಂಬರಿ. ಇದೂ ಕೂಡ ನಿಜಾಮ್ ಪ್ರಾಂತ್ಯದ ಕಥೆಯನ್ನೇ ಹೇಳುತ್ತದೆ. ದರವೇಷನ ಮೊಮ್ಮಗಳು ಈ ಕಾದಂಬರಿಯ ನಾಯಕಿ. ಹೆಸರು ಜೊಹರಾ. ಅವಳ ಹೆಸರನ್ನೇ ಕಾದಂಬರಿಯ ಶಿರೋನಾಮೆ ಮಾಡಲಾಗಿದೆ. ಇಲ್ಲಿ ಮುಸ್ಲೀಮ್, ಕ್ರಿಶ್ಚಿಯನ್ ಹಾಗೂ ಹಿಂದುಗಳ ಜನಜೀವನದ ವಿವರಗಳು ಹೆಣೆದುಕೊಂಡಿವೆ. ದರವೇಷ ಮತ್ತು ಆತನ ಮೊಮ್ಮಗಳು ಜೊಹರಾ ಜಲದುರ್ಗದಲ್ಲಿ ವಾಸಿಸುತ್ತಿದ್ದಾರೆ ; ಅಲ್ಲಿಂದ ಕಥೆ ಪ್ರಾರಂಭವಾಗುತ್ತದೆ. ಮುದಗಲ್ ಚರ್ಚ್‌ಗೆ ಪಾದ್ರಿಯಾಗಿ ಬಂದ ಫ್ರಾನ್ಸಿಸ್–ಡಿ–ಅಲ್ಮೇಡಾ ಹಾಗೂ ಆತನ ವಿಧವೆ ತಂಗಿ ಡೊನಾ ಮೇರಿಯಾ, ಇದು ಕ್ರಿಶ್ಚಿಯನ್ ಕುಟುಂಬ. ಅಂದು ಜಲದುರ್ಗ ಮತ್ತು ಮುದಗಲ್ ಕೋಟೆಗಳು ಬಿಜಾಪುರದ ಸುಲ್ತಾನರಾದ ಇಬ್ರಾಹೀಂ ಆದಿಲ್‌ಶಾನ ವಶದಲ್ಲಿದ್ದವು. ಪತಿ ನಿಧನ ಹೊಂದಿದ ನಂತರ ಚಾಂದಬೀಬಿ ರಾಜ್ಯಾಡಳಿತದ ಸೂತ್ರಗಳನ್ನು ತನ್ನ ಕೈಯೊಳಗೆ ತೆಗೆದುಕೊಂಡಿದ್ದಳು. ಬಿಜಾಪುರದ ಸರದಾರನಾದ ಅಬ್ಬಾಸಖಾನ್‌ನನ್ನು ಚಾಂದಬೀಬಿ ಮಮತೆ ವಾತ್ಸಲ್ಯದಿಂದ ನೋಡುತ್ತಿದ್ದಳು. ಚಾಂದಬೀಬಿಯ ಸೊಸೆ ತಾಜುನ್ನಿಸಾ ಕಾಯಿಲೆಯಿಂದ ಬಳಲುತ್ತಿದ್ದಳು. ಇನ್ನೊಬ್ಬ ಸರದಾರನೆಂದರೆ ಅಬ್ಬಾಸಖಾನನ ಚಿಕ್ಕಪ್ಪ ಹಿಮಾಯತ್‌ಖಾನ್. ಆತನ ಹೆಂಡತಿ ಫಾತಿಮಾ. ದೇಶದ್ರೋಹಿ ಎಲಿಯಾಸ್‌ಖಾನನ ಮೇಲೆ ಎರಗಿ ಯುದ್ಧಮಾಡಿ ಅಬ್ಬಾಸಖಾನ್ ಸ್ವಾಮಿನಿಷ್ಠೆ ಮೆರೆಯುತ್ತಾನೆ.

ಕೊಡೇಕಲ್ಲ ರಂಗನಾಯಕ, ಕಕ್ಕೇರಿಯ ಭರಮನಾಯಕ ಹಾಗೂ ವಾಗನಕೇರಿಯ ಪಾಮನಾಯಕ ಇವರು ಬೇಡ ಜನಾಂಗದ ಶೂರರು. ಬಿಜಾಪುರದ ಅರಸೊತ್ತಿಗೆಯ ಅಡಿಯಲ್ಲಿ ಬರುವ ಈ ಮೇಲಿನ ಗ್ರಾಮಗಳಿಗೆ ಪಾಳೇಗಾರರು. ಇವು ಈ ಕಾದಂಬರಿಯಲ್ಲಿ ಬರುವ ಪ್ರಮುಖ ಪಾತ್ರಗಳಾಗಿವೆ.

ಈ ಕಾದಂಬರಿಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಛಾಯಾಭಗವತಿ, ಎರಡನೆಯದು ಯಾತ್ರಿಕ ದರವೇಷ, ಮೂರನೆಯದು ಜಲದುರ್ಗದ ಜೊಹರಾ. ಈ ಮೂರು ಭಾಗಗಳಲ್ಲಿ ಇಲ್ಲಿಯ ಕಥೆ ಪ್ರಕಟವಾಗಿದೆ. ಅಬ್ಬಾಸಖಾನ್ ಮತ್ತು ಜೊಹರಾ ಈ ಕಾದಂಬರಿಯ ನಾಯಕ–ನಾಯಕಿಯರು. ಜೊಹರಾಳನ್ನು ಕಾಡುವ ಜಲದುರ್ಗದ ಕಿಲ್ಲೇದಾರ ಉಸ್ಮಾನ್‌ಬೇಗ್ ಹಾಗೂ ಮೇರಿಯಾಳ ಮೇಲೆ ಕಣ್ಣಿಟ್ಟ ಹೊಸ ಪಾದ್ರಿ ಡಾಮ್‌ಡಿಯಾಗೋ ಈ ಕಾದಂಬರಿಯಲ್ಲಿ ಬರುವ ಖಳನಾಯಕರು.

ಮುದಗಲ್ಲ – ಜಲದುರ್ಗ, ಕೊಡೇಕಲ್ಲ, ಕಕ್ಕೇರಿ, ವಾಗನಕೇರಿ ಇವೆಲ್ಲಾ ಊರುಗಳು ಬಿಜಾಪುರ ಅರಸೊತ್ತಿಗೆಗೆ ಒಳಪಟ್ಟದ್ದರಿಂದ ಈ ಕಾದಂಬರಿಯಲ್ಲಿ ಈ ಎಲ್ಲ ಊರುಗಳ ಚಿತ್ರಣವೂ ಬಂದು ಹೋಗುತ್ತದೆ. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಮೆಡೋಸ್ ಟೇಲರ್ ಎಂಬಾತ ಸುರಪುರದಲ್ಲಿ ಆಡಳಿತಾಧಿಕಾರಿಯಾಗಿದ್ದ. ಆತ ಬರೆದಿಟ್ಟಿದ್ದ ಸ್ಮೃತಿಗಳು–ಪತ್ರಗಳು–ಬರಹಗಳು ಅಕಸ್ಮಾತ್ತಾಗಿ ಲೇಖಕ ಜಯತೀರ್ಥರಿಗೆ ದೊರೆತದ್ದರಿಂದ ಆ ಆಧಾರಗಳನ್ನಾಧರಿಸಿ ಈ ಕಾದಂಬರಿ ಬರೆದೆನೆಂದು ಅವರು ಹೇಳಿಕೊಂಡಿದ್ದಾರೆ. ಈ ಕಾದಂಬರಿಯ ಕಥಾವಸ್ತು ಮುನ್ನೂರು ವರ್ಷಗಳಷ್ಟು ಹಿಂದಿನದಾಗಿದೆ. ಇತಿಹಾಸದ ಅಂಶಗಳಿಗೆ ಅಪಚಾರವಾಗದ ಹಾಗೆ ಇಲ್ಲಿಯ ಕಥಾವಸ್ತುವಿದೆ.

ಮೊದಲು ಇದು ಒಂದು ಕಥೆಯಾಗಿ ಪ್ರಕಟವಾಯಿತು. ಆಮೇಲೆ ಕಾದಂಬರಿಯಾಗಿ ಬೆಳೆದದ್ದನ್ನು ಲೇಖಕರು ಪ್ರಾರಂಭ ನಿವೇದನೆಯಲ್ಲಿ ಹೇಳಿದ್ದಾರೆ. ಕಾದಂಬರಿಯಾಗಿ ರಚನೆಯಾದ ನಂತರ "ಕನ್ನಡ ಪ್ರಭ" ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಈ ಕಾದಂಬರಿಗೆ ಡಾ. ಎಸ್.ಎಲ್. ಭೈರಪ್ಪ ಅವರು ಮುನ್ನುಡಿ ಬರೆದಿದ್ದಾರೆ. ಆ ಮುನ್ನುಡಿಯಲ್ಲಿ ಅವರು ಹೀಗೆ ಹೇಳಿದ್ದಾರೆ – "ತಾವು ಸಂಪಾದಿಸಿರುವ ಮೂಲ ಸಾಮಗ್ರಿಯನ್ನೇ ಬಳಸಿಕೊಂಡು ಇನ್ನಷ್ಟು ವಿಶದವಾಗಿ ಅವರು ಬರೆಯಬಹುದಾಗಿತ್ತು".

ಭೈರಪ್ಪನವರ ಈ ಮಾತಿನಲ್ಲಿ ಅರ್ಥವಿದೆಯೆನಿಸುತ್ತದೆ. ಕಾದಂಬರಿ ಐತಿಹಾಸಿಕ ಸಂಗತಿಗಳನ್ನು ಬಿಚ್ಚಿಡುತ್ತ ಹೋಗುತ್ತದೆ. ಆದರೆ ಅದು ವರ್ತಮಾನದ ತುರ್ತನ್ನು ಜಾಗೃತಗೊಳಿಸುವುದಿಲ್ಲ. ಬಹಳಷ್ಟು ಪ್ರಸಂಗಗಳು ನೀರಸವಾಗಿವೆ. ಕಾದಂಬರಿಯ

ನಾಯಕಿಯ ಬೆಳವಣಿಗೆಗೆ ಅವಕಾಶವಿದೆಯಾದರೂ ನಾಯಕ ಅಬ್ಬಾಸಖಾನನ ಬೆಳವಣಿಗೆಯಾಗಿಲ್ಲ. ಇಲ್ಲಿ ಅನೇಕ ಪಾತ್ರಗಳು ಬಂದು ಹೋಗುತ್ತವೆ. ಆದರೆ ಜೊಹರಾಳನ್ನು ಬಿಟ್ಟರೆ ಯಾವುದೇ ಪಾತ್ರವೂ ಹಸಿರಾಗಿ ಉಳಿಯುವುದಿಲ್ಲ.

ಜಲದುರ್ಗದ ಕಿಲ್ಲೇದಾರ ಉಸ್ಮಾನಬೇಗ ತನ್ನ ಜಾತಿಯ ಹುಡುಗಿ ಜೊಹರಾಳನ್ನು ಬಯಸುವುದು, ಹೊಸ ಪಾದ್ರಿ ಡಾಮ್‌ಡಿಯಾಗೋ ತನ್ನ ಜಾತಿಯ ಹುಡುಗಿ ಮೇರಿಯಾಳನ್ನು ಕಾಮುಕ ದೃಷ್ಟಿಯಿಂದ ನೋಡುವುದು. ಅತ್ತ ಅಬ್ಬಾಸಖಾನ್ ನಿರ್ಲಿಪ್ತನಂತಿರುವುದು, ಬೆಂಕಿಯಂತಹ ಬೇಡನಾಯಕರು ಹೆಸರಿಗೆ ಮಾತ್ರ ಬಂದು ಹೋಗುವುದು, ಕಾದಂಬರಿಯ ತೀವ್ರತೆಯನ್ನು ಕಟ್ಟಿಕೊಡುವಲ್ಲಿ, ಅದರ ಧ್ವನಿತತ್ವವನ್ನು ಹೇಳುವಲ್ಲಿ ನೆರವಾಗುವುದಿಲ್ಲ. ಕೆಲವು ಪಾತ್ರಗಳನ್ನಾದರೂ ಪರಿಪೂರ್ಣವಾಗಿ ಬೆಳೆಸಿ, ಸಂಘರ್ಷದ ಮೂಲಕ ಹೊಸ ಸಾಧ್ಯತೆಗಳನ್ನು ಕಾಣಿಸಿದಾಗ ಒಂದು ಕೃತಿಗೆ ಮಹತ್ವ ಬರುತ್ತದೆ. ಎಲ್ಲಿ ಸಂಘರ್ಷ ನಡೆಯಬೇಕಿತ್ತೋ ಅಲ್ಲಿ ಸಂಘರ್ಷ ನಡೆಯುವದಿಲ್ಲ. ಅಮುಖ್ಯವಾದ ಘಟನೆಗಳು ಪುಟ ತುಂಬಿಕೊಂಡು ಬಿಟ್ಟಿವೆ. ಹೀಗಾಗಿ ಕಾದಂಬರಿ ಮಹತ್ತರವಾದುದನ್ನು ಹೇಳದಂತಾಗುತ್ತದೆ. ಆದರೆ ದರವೇಷನ ಪಾತ್ರ ಓದುಗರಲ್ಲಿ ಉಳಿದು ಬಿಡುತ್ತದೆ.

ಜಯತರ್ಥ ಪುರೋಹಿತರು ನೇರ ನುಡಿಯ ಲೇಖಕರು. ಅವರಿಗೆ ಈ ಪ್ರದೇಶದಲ್ಲಿ, ಹಿಂದೆ ನಡೆದ ಘಟನೆಗಳನ್ನು ಕಥಾ ರೂಪದಲ್ಲಿ ಹೇಳಬೇಕಾಗಿದೆ. ಅದನ್ನು ಹೇಳಿದ್ದಾರೆ, ಯಶಸ್ವಿಯೂ ಆಗಿದ್ದಾರೆ.

ಧರ್ಮ ಗುರು ಚಿಷ್ತಿ ಎಂತಹ ಮತಾಂಧನಾಗಿದ್ದ ಮತ್ತು ನಿಂದಕನಾಗಿದ್ದನೆಂಬುದಕ್ಕೆ 'ಜೊಹರಾ' ಕಾದಂಬರಿಯಲ್ಲಿ ಬರುವ ಈ ಸಾಲುಗಳನ್ನು ಗಮನಿಸಬೇಕು.

"ಕಾಲ ಬದಲಾಗಿ ಹೋಯಿತು. ಒಬ್ಬ ನಾಸ್ತಿಕ ಪರದೇಶಿ, ಇನ್ನೊಬ್ಬ ಹಂದಿ ತಿನ್ನುವ ಬೇಡರವ. ಅರಮನೆಯಲ್ಲಿ ಮಹಾರಾಣಿ ಎದುರಿಗೆ. ಇನ್ನೇನು ಬೇಕು, ಇದಕ್ಕೂ ಆಶ್ಚರ್ಯಕರ?"

(ಜೊಹರಾ, ದ್ವಿಮು: ೧೯೮೧, ಪು : ೧೨೩)

ಇಂತಹ ಮತಾಂಧ ಧರ್ಮಗುರು ಹೇಳಿದ ಮಾತುಗಳನ್ನು ಕೇಳಿಸಿಕೊಂಡ ರಾಣಿ ಚಾಂದಬೀಬಿ ಹೇಳುವ ಮಾತುಗಳು ಪರಿಣಾಮಕಾರಿಯಾಗಿವೆ.

"ಧಾರ್ಮಿಕವಾಗಿ ಮಾನ್ಯರೆಂದು ನಿನ್ನನ್ನು ಕ್ಷಮಿಸಿರುವೆ. ಆದರೆ ನಿನ್ನ ನಾಲಗೆ ಹಿಡಿತದಲ್ಲಿರಲಿ. ನಿಮ್ಮಂಥ ಮತಾಂಧರಿಂದ ಈ ದೇಶದ ಜನರಲ್ಲಿ ಶಾಶ್ವತವಾದ ಅಶಾಂತಿ, ಅಸಹನೆ ನೆಲೆಸಿ ಸರ್ವನಾಶವದೀತು, ಎಚ್ಚರಿಕೆ ! ನಿನ್ನ ಧರ್ಮನಿಷ್ಠೆ

ಇಸ್ಲಾಮಿಗೆ ಕಲಂಕವನ್ನು ತರುವಷ್ಟು ಕುರುಡಾಗದಿರಲಿ; ಈ ದೇಶದಲ್ಲಿ ಇಸ್ಲಾಂ ಉಳಿಯುವದಾದರೆ ಇತರ ಧರ್ಮಗಳೊಡನೆಯೇ ಉಳಿದೀತು".

(ಜೊಹರಾ, ದ್ವಿಮು : ೧೯೯೧, ಪುಟ : ೧೨೯)

ಇಂತಹ ಕೆಲವು ನುಡಿಗಳು ಪರಿಣಾಮಕಾರಿಯಾಗಿ ಮೂಡಿಬಂದಿವೆ. ಉರ್ದು ಮಿಶ್ರಿತ ಅಂದಿನ ಕನ್ನಡ ಭಾಷೆ ಸಹಜವಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಇವರ ಕಾದಂಬರಿಗಳು ಒಂದು ಮುಖ್ಯ ಮಾಧ್ಯಮಗಳಾಗಿವೆ.

ಜಯತೀರ್ಥರ ಮೂರೂ ಕಾದಂಬರಿಗಳು ಐತಿಹಾಸಿಕ ವಸ್ತುವನ್ನೊಳಗೊಂಡಿವೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಅಂದಿನ ಜನಜೀವನವನ್ನು ಯಥಾವತ್ತಾಗಿ ಕಟ್ಟಿಕೊಟ್ಟಿವೆ. ಸರಳ–ಸ್ಪಷ್ಟ–ನೇರ ನುಡಿಗಳಿಂದ ಇವರ ಬರಹ ಆಕರ್ಷಿಸುತ್ತದೆ. ನಿಜಾಮ್ ಆಡಳಿತವನ್ನು ಇವರು ಸಮೀಪದಿಂದ ನೋಡಿದ್ದರಿಂದ ಇಂತಹ ಕಾದಂಬರಿಗಳನ್ನು ಬರೆಯಲು ಸಾಧ್ಯವಾಗಿದೆ. ಹೀಗೆ ಇವರ ಸಾಹಿತ್ಯಕ ಸಾಧನೆಯನ್ನು ಅಲ್ಲಗಳೆಯುವಂತಿಲ್ಲ.

### ೨. ಸಣ್ಣ ಕತೆ

ಜಯತೀರ್ಥರು ನಾಲ್ಕು ಕಥಾ ಸಂಕಲನಗಳನ್ನು ಕೊಟ್ಟಿದ್ದಾರೆ. "ಪಾರವ್ವನ ಪಂಚಯಿತಿ", "ರೋಹಿಣಿ", "ಮೌಲ್ಯಗಳು" ಹಾಗೂ "ಶಿಥಿಲ ಶಿಲೆ" ಇವು ಇವರ ಕಥಾ ಸಂಕಲನಗಳ ಶಿರೋನಾಮೆಗಳಾಗಿವೆ. "ಶಿಥಿಲ ಶಿಲೆ" ಕಥಾ ಸಂಕಲನ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ ತರಗತಿಗೆ ಪಠ್ಯಪುಸ್ತಕವಾಗಿದ್ದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

"ಪಾರವ್ವನ ಪಂಚಾಯಿತಿ" ಇವರ ಮೊದಲ ಕಥಾ ಸಂಕಲನವಾಗಿದೆ. ಈ ಸಂಕಲನದಲ್ಲಿ ಹತ್ತು ಕತೆಗಳಿವೆ. ಈ ಕತೆಗಳ ಮುಖ್ಯ ವಸ್ತು ಸಾಮಾಜಿಕವಾದುದಾಗಿದೆ. ರಾಜಕೀಯ ಏರು–ಪೇರುಗಳಿಂದ ಬದಲಾಗುತ್ತಿರುವ ಸಮಾಜದ ಚಿತ್ರಣವನ್ನು ಇವರು ತಟಸ್ಥ ನಿಲುವಿನಲ್ಲಿದ್ದುಕೊಂಡು ಚಿತ್ರಿಸಿದ್ದಾರೆ.

ವಾಸ್ತವಿಕತೆಯ ನೆಲೆಯಲ್ಲಿ ಇವರು ಕತೆಗಳನ್ನು ಕಟ್ಟುತ್ತಾರೆ. ಆ ಸಂದರ್ಭದ ರಾಜಕೀಯ ಚರಿತ್ರೆಯ ಎಲ್ಲ ವಿವರಗಳು ಇವರ ಕತೆಗಳಲ್ಲಿ ಕಾಣಿಸಿಕೊಂಡಿವೆ. ಇವರ ಅನೇಕ ಕತೆಗಳಲ್ಲಿ ಇವರೇ ಕಥಾ ನಾಯಕರಾಗಿದ್ದಾರೆ. ಇಲ್ಲಿಯೂ ಕೂಡ ನಿಜಾಮಶಾಹಿಯ ನಿರಂಕುಶ ಸತ್ತೆಯ ವಿರುದ್ಧ ನಡೆದ ಚಳುವಳಿಯ ವಿವರಗಳಿವೆ. "ಯಾರು ನಮ್ಮವರು?" ಕತೆಯಲ್ಲಿ ವಿಮೋಚನಾ ಚಳುವಳಿಯ ಚಿತ್ರಣವನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. "ಸಯೀದಾ ಸುಮತಿಯಾದಳು"

ಕತೆ, ಒಬ್ಬ ಮಹಿಳೆಯ ದಾರುಣ ಜೀವನದ ವ್ಯಥೆಯನ್ನು ಹೇಳುತ್ತಲೇ ಅವಳ ಜಾಣ್ಮೆ-ಸಾಹಸಗಳನ್ನು ವಿವರಿಸುತ್ತದೆ. ರಾಷ್ಟ್ರದ್ರೋಹವೊಂದನ್ನು ತಪ್ಪಿಸುವಲ್ಲಿ ಈ ಮಹಿಳೆ ಯಶಸ್ವಿಯಾಗುತ್ತಾಳೆ. ಅಂತೆಯೇ ಈಕೆ ಸುಮತಿಯಾಗಿ ಕಾಣಿಸುತ್ತಾಳೆ.

"ದೇವಿಯೋ ಹುಚ್ಚಿಯೋ" ಕತೆಗೆ ಎರಡು ನೆಲೆಗಳಿವೆ. ಮೌಢ್ಯತೆ – ಅಂಧ ಸಂಪ್ರದಾಯದ ಒಂದು ಮುಖ; ಬೀದಿ ಪಾಲಾದ ಅಬಲೆಯ ಮತ್ತೊಂದು ಮುಖ ಇಲ್ಲಿ ಕಾಣಿಸುತ್ತವೆ. ಈ ವ್ಯವಸ್ಥೆಯ ಕುರುಡುನಂಬಿಕೆಗೆ ಬಲಿಯಾಗಿ, ದೇವಿಯಾಗಿಯೋ ಹುಚ್ಚಿಯಾಗಿಯೋ ಬೀದಿ ಪಾಲಾದ ಹೆಣ್ಣಿನ ನೋವಿನ ಕತೆ ಇಲ್ಲಿ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ.

ಆಶ್ಚರ್ಯ-ಆಕಸ್ಮಿಕಗಳನ್ನೊಳಗೊಂಡಿರುವ ಮತ್ತೊಂದು ಕತೆಯೆಂದರೆ "ಡಾಕ್ಟರ ಶಾಲಿನೀ". ಇಲ್ಲಿಯ ಪಾತ್ರಗಳು ಸಹಜವಾಗಿ ಕಾಣಿಸುವದಿಲ್ಲ. ಪಾತ್ರ ಸೃಷ್ಟಿಯಲ್ಲಿ ಕೃತಕತೆ ಕಾಣಿಸುತ್ತದೆ. ಆದರೂ ಕತೆ ರೋಚಕವಸ್ತುವನ್ನೊಳಗೊಂಡಿದೆ.

"ಮುಂದೇನು?" ಕತೆ, ಈ ಸಂಕಲನದ ಉತ್ತಮ ಕತೆಯಾಗಿದೆ. ವಸ್ತು-ಶೈಲಿ-ಭಾಷೆಯ ದೃಷ್ಟಿಯಿಂದ ಕತೆ, ಗಮನ ಸೆಳೆಯುತ್ತದೆ. ಭಾರತ ದೇಶ ವಿಭಜನೆಯಾದಾಗ, ನಿರಾಶ್ರಿತರ ಆಗಮನ, ಆಹಾರ ಸಮಸ್ಯೆ ಇವೆಲ್ಲಾ ಇಲ್ಲಿಯ ಕಥಾವಸ್ತುವಾಗಿವೆ. "ಗೌರಮ್ಮನ ಹಾಲು" ಮತ್ತೊಂದು ಒಳ್ಳೆಯ ಕತೆ. ಹಳ್ಳಿಯ ದಂಪತಿಗಳ ರಸಿಕತೆಯನ್ನು ಇಲ್ಲಿ ಬಹು ಸಹಜವಾಗಿ ಚಿತ್ರಿಸಲಾಗಿದೆ. ದೆವ್ವದ ಬಂಗಾರ, ರಕ್ತ ಋಣ ಮುಂದಿನ ಕತೆಗಳಾಗಿವೆ.

"ಪಾರವ್ವನ ಪಂಚಾಯಿತಿ " – ಈ ಹತ್ತು ಕತೆಗಳಲ್ಲಿಯೇ ಹೆಚ್ಚು ಗಮನ ಸೆಳೆಯುತ್ತದೆ. ಯಾರೋ ತಮ್ಮ ಸೇಡು ತೀರಿಸಿಕೊಳ್ಳಲು ಈಕೆಯನ್ನು ಚುನಾವಣೆಗೆ ನಿಲ್ಲಲು ಪ್ರೇರೇಪಿಸುತ್ತಾರೆ. ಆದರೆ ಪಾರವ್ವ ಚುನಾಯಿತಳಾಗಿ ಬಂದು ಪಂಚಾಯಿತಿಯಲ್ಲಿ ಒಳ್ಳೆಯ ಕೆಲಸ ಮಾಡಿ ಎಲ್ಲರ ಮೆಚ್ಚುಗೆಗೆ ಕಾರಣಳಾಗುತ್ತಾಳೆ. ಊರಿನ ರಾಜಕಾರಣ ಸರಿಯಾಗಿ ಮೂಡಿಬಂದಿದೆ. ಪಂಚಾಯಿತಿಯಲ್ಲಿ ಎಲ್ಲರೂ ಪಾರವ್ವನಂತಾದರೆ...... ಎಂಬ ಆಶಯದೊಂದಿಗೆ ಕತೆ ಮುಕ್ತಾಯಗೊಳ್ಳುತ್ತದೆ.

ಮೊದಲ ಕಥಾ ಸಂಕಲನದಲ್ಲಿಯೇ ಜಯತೀರ್ಥರು ಸಮರ್ಥ ಕತೆಗಾರರೆಂದು ತೋರಿಸಿಕೊಟ್ಟಿದ್ದಾರೆ. ಇವರು ಆಯ್ದುಕೊಂಡ ವಿಷಯವನ್ನು ಹಿಗ್ಗಿಸುತ್ತ ಹೋಗುತ್ತಾರೆ. ಆದರೆ ಅದಕ್ಕೆ ಹೊಸ ಸ್ಪರ್ಷವನ್ನು ನೀಡುವದಿಲ್ಲ. ಆದರೂ ಕಥನಕಲೆ ಇವರ ಕೆಲವು ಕತೆಗಳಲ್ಲಿ ಗಮನ ಸೆಳೆಯುತ್ತದೆ.

"ಪಾರವ್ವನ ಪಂಚಾಯಿತಿ" ಕಥಾ ಸಂಕಲನದಲ್ಲಿ ಅನೇಕ ಮೌಲ್ಯಗಳಿರುವುದ್ನು ಕಾಣಬಹುದಾಗಿದೆ. "ನಮ್ಮವರು ಯಾರು?" ಕತೆಯಲ್ಲಿ ರಕ್ತ ಸಂಬಂಧಕ್ಕಿಂತ,

ಭಾವ ಸಂಬಂಧ ಮುಖ್ಯವೆಂಬ ಮೌಲ್ಯವಿದೆ. ದುರ್ಬಲರನ್ನು ಸಮಾಜ ಹೇಗೆ ಕಾಣುತ್ತದೆಯೆಂಬುದನ್ನು "ದೇವಿಯೋ ಹುಚ್ಚಿಯೋ" ಕತೆ ಸ್ಪಷ್ಟಪಡಿಸುತ್ತದೆ. ನಮಗಾಗಿ ಸಾಯುವವರು ದುರ್ಬಲರಾದಾಗ, ನಾವೇ ಅವರಿಗಾಗಿ, ಅವರ ಏಳ್ಗೆಗಾಗಿ ಪ್ರಯತ್ನಿಸಬೇಕೆಂಬ ಸಂದೇಶವನ್ನು "ಡಾ. ಶಾಲಿನಿ ವಾರಿಖ" ಕತೆ ಹೇಳುತ್ತದೆ. ಕಾಯಿದೆ ಇರುವುದು ಜಗಳವಾಡಲಿಕ್ಕಲ್ಲ, ಜಗಳವನ್ನು ನಿಲ್ಲಿಸುವುದಕ್ಕೆಂಬ ಮಹತ್ವದ ನೀತಿಯನ್ನು "ಗೌರಮ್ಮನ ಹಾಲು" ಕತೆ ಕಟ್ಟಿಕೊಡುತ್ತದೆ. ಜಾತಿ-ವರ್ಣಗಳನ್ನು ಮನುಷ್ಯ ಮಾತ್ರ ನಿರ್ಮಿಸಿಕೊಂಡಿದ್ದಾನೆ. ಎಲ್ಲರ ನಾಳಗಳಲ್ಲಿ ಹರಿಯುವ ರಕ್ತ ಒಂದೇಯಾಗಿದೆಯೆಂದು "ರಕ್ತ ಋಣ" ಕತೆ ವಿವರಿಸುತ್ತದೆ. ಕೊನೆಯ ಕತೆಯ ಪಾರವ್ವ, ಸಿಂಗಾರ ಹಳ್ಳಿಯ ಪಾರಾಸಾನಿ, ಪಂಚಾಯಿತಿ ಅಧ್ಯಕ್ಷಳಾಗಿ ಎಲ್ಲರೂ ಹೌದೆನ್ನುವ ಹಾಗೆ ಕೆಲಸ ಮಾಡಿದ್ದು ಮೆಚ್ಚತಕ್ಕ ಸಂಗತಿಯಾಗಿದೆ. ಈ ಕತೆಗಳಲ್ಲಿ ಅಲ್ಲಲ್ಲಿ ರೂಪಕಗಳು ಕಾಣಿಸಿಕೊಳ್ಳುತ್ತವೆ. ಗಾಯಗೊಂಡ ನಾಯಿಯನ್ನು ರಣಹದ್ದುಗಳು ಕುಕ್ಕಿ-ಕುಕ್ಕಿ ತಿನ್ನುವದು ಪರಿಣಾಮಕಾರಿಯಾದ ರೂಪಕವಾಗಿದೆ. "ದೇವಿಯೋ ಹುಚ್ಚಿಯೊ?" ಕತೆಯಲ್ಲಿ ಈ ರೂಪಕವನ್ನು ಕಾಣಬಹುದಾಗಿದೆ.

ಈ ಕಥಾ ಸಂಕಲನದ ಹೆಸರು ಅತ್ಯಂತ ಆಪ್ತವೆನಿಸುತ್ತದೆ. ಪಾರವ್ವ - ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳಿಗೆ ಇಡುವ ಹೆಸರು. ಗ್ರಾಮೀಣ ಬದುಕಿನ ಜೀವನಾನುಭವ ಹೊಂದಿರುವ ಜಯತೀರ್ಥರು ಇಂತಹ ಕತೆಗಳಲ್ಲಿ ಯಶಸ್ಸು ಕಂಡಿದ್ದಾರೆ. ಗ್ರಾಮೀಣ ಸೊಗಡಿನಿಂದ ಇಂತಹ ಕತೆಗಳು ನಳನಳಿಸುತ್ತವೆ.

"ರೋಹಿಣಿ" ಕಥಾ ಸಂಕಲನದಲ್ಲಿ ಸಮಕಾಲೀನತೆಯ ವಸ್ತುವಿದೆ. ಈ ಸಂಕಲನದಲ್ಲಿ ಎಂಟು ಕತೆಗಳಿವೆ. ಇಲ್ಲಿ ವಾಸ್ತವ ಪ್ರಜ್ಞೆಗೆ, ವರ್ತಮಾನದ ತುರ್ತುಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಈ ವಿಷಯವನ್ನು "ರೋಹಿಣಿ" ಕತೆ ವಿವರಿಸುತ್ತದೆ. "ಕೊನೆಯ ಇಂಟರವ್ಯೂ" ಕತೆ, ನಿರುದ್ಯೋಗ ಸಮಸ್ಯೆಯ ಮೇಲೆ ಬೆಳಕು ಚೆಲ್ಲುತ್ತದೆ. ಸಮಾಜ ವ್ಯವಸ್ಥೆಯಿಂದ ವ್ಯಕ್ತಿಗೆ ಎಷ್ಟೇ ತೊಂದರೆಯಾದರೂ, ದೇಶದ ಮೇಲೆ ಸೇಡಿನ ಮನೋಭಾವ ಹೊಂದಬಾರದೆಂಬ ನೀತಿಯನ್ನು ಈ ಕತೆಯಲ್ಲಿ ಹೇಳಲಾಗಿದೆ. ಪ್ರೀತಿ-ಪ್ರೇಮಗಳಿಗಿಂತ ರಾಷ್ಟ್ರ ದೊಡ್ಡದೆಂದು "ಜಾನ್ ಷಣ್ಮುಗನ್" ಕತೆ ತಿಳಿಸುತ್ತದೆ. ಪ್ರಶ್ನೆಗರ್ಭ, ಕಂಡಕ್ಟ್ ಸರ್ಟಿಫಿಕೇಟ್, ಗಂಧವತೀ ಪೃಥವಿ, ಯಾರು ಸಂತ್ರಸ್ತ?, ಬಹದ್ದೂರ ನನಗಂಡ ಇವೆಲ್ಲಾ ಇತರ ಕತೆಗಳಾಗಿವೆ.

ಮೂರನೇ ಕಥಾ ಸಂಕಲನ "ಮೌಲ್ಯಗಳು" ಕೃತಿಯಲ್ಲಿ ಒಂಬತ್ತು ಕತೆಗಳಿವೆ. ಶೀಲ-ಅಶ್ಲೀಲಕ್ಕೆ ಸಂಬಂಧಿಸಿದಂತೆ ಇಲ್ಲಿ ಮುಖ್ಯ ವಿಚಾರಗಳನ್ನು ಹೇಳಲಾಗಿದೆ. ಅವು ಹೊರಗಿನ ಆಚರಣೆಗಳಿಗಿಂತ, ಒಳಗಿನ ಮನಸ್ಸಿನಲ್ಲಿ ಪರಿವರ್ತನೆ ಯಾಗಬೇಕೆಂದು ತಿಳಿಸಲಾಗಿದೆ. ಆಚರಣೆಗಳನ್ನು ಮೌಢ್ಯತೆಯಿಂದ ಆಚರಿಸಬಾರದು,

ಅವುಗಳ ಮಹತ್ವವನ್ನು ತಿಳಿದುಕೊಂಡು ಆಚರಿಸಬೇಕೆಂದು ಲೇಖಕರು ತಿಳಿಸಿದ್ದಾರೆ. ಅಧಿಕಾರಿಗಳು ತಮಗಿಂತ ಕೆಳಗಿನವರನ್ನು ಸುಲಿದು, ಮೇಲಿನವರನ್ನು ಸಂತೋಷಪಡಿಸುತ್ತಾರೆ. "ಕೆಳಗಿನ ಸುಲಿಗೆ ಅಪರಾಧವಾಗಿ ಕಂಡರೆ, ಮೇಲಿನದು ಆದರಣೀಯವೇ?" ಎಂದು ಪ್ರಶ್ನಿಸುತ್ತಾರೆ. ಇಂತಹ ತಾಕಲಾಟಗಳಲ್ಲಿ ಕೊಲ್ಲುವವರು ಯಾರೋ, ಸಾಯುವವರು ಯಾರೋ ಎಂಬ ಪ್ರಶ್ನೆಗಳು ವಿಚಾರಕ್ಕೆ ಹಚ್ಚುತ್ತವೆ. ಸತ್ತ ಕೂಸಿನ ಪ್ರತಿಮೆ "ಧೂಳು" ಕತೆಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. "ಮಹಿಮರ ಅಥವಾ ಹುರ್ರ್", "ಇಲ್ಲಿ ರಾಮಸತ್ತಿಲ್ಲ" "ಗೋಮಯ ವಿವೇಕ ಹೇಳುತ್ತದೆ" "ನಾನೆ ಕೊಂದೆನೆ?" ಈ ಮೊದಲಾದ ಕತೆಗಳು ಈ ಸಂಕಲನದಲ್ಲಿ ಪ್ರಕಟವಾಗಿವೆ.

"ಶಿಥಿಲ ಶಿಲೆ" – ಜಯತೀರ್ಥರ ನಾಲ್ಕನೇ ಕಥಾ ಸಂಕಲನವಾಗಿದೆ. ಇದರಲ್ಲಿ ಹನ್ನೊಂದು ಕತೆಗಳಿವೆ. ಚಾರಿತ್ರಿಕ ಘಟನೆಗಳನ್ನಾಯ್ದುಕೊಂಡು ಅದರಲ್ಲಿರುವ ನಾಟಕೀಯ ಅಂಶಗಳನ್ನು ಹೇಳಲಾಗಿದೆ. ಹೀಗಾಗಿ ಇಲ್ಲಿಯ ಎಲ್ಲ ಕತೆಗಳಿಗೂ ಐತಿಹಾಸಿಕ ಹಿನ್ನೆಲೆಯಿದೆ. ಕೆಲವು ಐತಿಹಾಸಿಕ ಘಟನೆಗಳೇ ಇಲ್ಲಿಯ ಕಥಾ ರಚನೆಗೆ ಮೂಲ ಕಾರಣಗಳಾಗಿವೆ.

"ಬಾಣ ಸಂದರ್ಶನ" ಕತೆಯಲ್ಲಿ ಬಾಣ ಹಾಗೂ ಹರ್ಷವರ್ಧನರ ಕತೆಯಿದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆನ್ನುವ ನೀತಿಯ ಆಧಾರದ ಮೇಲೆ "ಕುಣಿತ ನಿಂತಿತು" ಕತೆಯಿದೆ. ಸ್ವಾಭಿಮಾನವಿರಬೇಕು, ಆದರೆ ದುರಭಿಮಾನವಾಗಬಾರದೆಂಬ ಸಂದೇಶ "ನಾರಿಯೋ ಧಾರುಣಿಯೋ" ಕತೆಯಲ್ಲಿ ವ್ಯಕ್ತವಾಗಿದೆ. "ಶ್ವೇತ ಸನ್ಯಾಸಿ" ಕತೆಯಲ್ಲಿ ಕ್ರಿಶ್ಚಿಯನ್ ಪಾದ್ರಿಗಳ ಮತಾಂತರದ ಪ್ರಚಾರವಿದೆ. ಇದೇ ವಿಷಯವು "ಮುದಗಲ್ಲಿನಲ್ಲಿ ಮೇರಿಯಾ" ಕತೆಯಲ್ಲಿ ಮುಂದುವರಿದಿದೆ. ಈ ಕತೆ ಮುಂದೆ "ಜೊಹರಾ" ಕಾದಂಬರಿಯಲ್ಲಿ ಸೇರಿಕೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳ ಬಹುದಾಗಿದೆ.

ಮೊದಲನೇ ಕತೆ ಚೆನ್ನಾಗಿ ಮೂಡಿ ಬಂದಿದೆ. ಈ ಕತೆಯ ಹೆಸರು "ಕುಣಿತ ನಿಂತಿತು". ಒಬ್ಬ ಆದುನಿಕ ಮನುಷ್ಯ ಚಾರಿತ್ರಿಕ ಘಟನೆಯನ್ನು ಕಲ್ಪಿಸಿಕೊಳ್ಳುವ ಕ್ರಮವನ್ನು ಕುರಿತು ಇಲ್ಲಿ ಚಿಂತಿಸಲಾಗಿದೆ. ಈ ಕತೆಯ ಶೈಲಿ ಹೃದ್ಯವೆನಿಸುತ್ತದೆ. "ಕೊರಳು ಕತ್ತರಿಸಿದ ಬಿರುದು" ಮತ್ತೊಂದು ಮಹತ್ವದ ಕತೆಯಾಗಿದೆ.

ಜಯತೀರ್ಥರ ಕತೆಗಳಲ್ಲಿ ಮಾಸ್ತಿಯವರ ಪ್ರಭಾವವಿದೆಯೆಂದು ಕೆಲವು ವಿಮರ್ಶಕರು ಹೇಳಿದ್ದಾರೆ. ಆದರೆ ಈ ಸಂಗತಿಯನ್ನು ಸಂಪೂರ್ಣವಾಗಿ ಒಪ್ಪಲಿಕ್ಕಾಗುವುದಿಲ್ಲ. ಜಯತೀರ್ಥರಿಗೆ ಸಣ್ಣಕತೆಯ ಸಾಧ್ಯತೆಗಳು ದಕ್ಕಿಲ್ಲವೆಂದೇ ಹೇಳಬೇಕಾಗುತ್ತದೆ. ಅನೇಕ ಕತೆಗಳು ಘಟನೆ–ವರದಿಯ ರೂಪದಲ್ಲಿಯೇ ನಿಂತು

ಬಿಡುತ್ತವೆ. ಆದರೂ ಕೆಲವು ಕತೆಗಳು ಗಮನ ಸೆಳೆಯುತ್ತವೆ. ನಾಲ್ಕು ಸಂಕಲನಗಳು ಬಂದಿರುವದರಿಂದ ಸಣ್ಣಕತೆಗೆ ಇವರು ಸಲ್ಲಿಸಿದ ಕೊಡುಗೆಯನ್ನು ಗಮನಿಸ ಬೇಕಾಗುತ್ತದೆ.

**೩. ನಾಟಕ (ರೂಪಕ)**

ಜಯತೀರ್ಥರು ಮಹತ್ವದ ನಾಟಕ ಕೃತಿಗಳನ್ನು ರಚಿಸಿಲ್ಲ. ಅವರು ರಚಿಸಿರುವ ರಂಗ ಕೃತಿಗಳೆಲ್ಲ ರೂಪಕಗಳಾಗಿವೆ. "ತುಂಗೆಯಂಗಳದಲ್ಲಿ" ಗೀತರೂಪಕವಾದರೆ, "ಕುಮಾರವ್ಯಾಸ" ಹಾಗೂ "ಜಯಬಂಗ್ಲಾ" ಇತರ ರೂಪಕಗಳಾಗಿವೆ. ಹೀಗಾಗಿ ಅವರನ್ನು ಮಹತ್ವದ ನಾಟಕಕಾರರೆಂದು ಗುರುತಿಸಲಾಗುವುದಿಲ್ಲ.

ಎಂ.ಆರ್. ಶ್ರೀ ಯವರ "ನಾಗರಿಕ" ಹಾಗೂ "ಧರ್ಮದುರಂತ" ರೂಪಕಗಳ ಪ್ರಭಾವ ಜಯತೀರ್ಥರ "ತುಂಗೆಯಂಗಳದಲ್ಲಿ" ಮತ್ತು "ಕುಮಾರವ್ಯಾಸ" ರೂಪಕಗಳ ಮೇಲೆ ನೇರವಾಗಿ ಆಗಿರುವುದನ್ನು ಕಾಣಬಹುದಾಗಿದೆ. ಜಯತೀರ್ಥರು ಈ ರೂಪಕಗಳನ್ನು ರಚಿಸುವ ಎರಡು ದಶಕಗಳ ಮೊದಲೇ ಎಂ.ಆರ್. ಶ್ರೀ. ಯವರ ರೂಪಕಗಳು ಪ್ರಕಟವಾಗಿದ್ದವು. ಎಂ.ಆರ್. ಶ್ರೀಯವರ ರಚನೆಗಳ ಶಕ್ತಿ-ಸಾಮರ್ಥ್ಯಗಳು ಜಯತೀರ್ಥರಲ್ಲಿ ಕಾಣಿಸುವದಿಲ್ಲ.

ಎಂ.ಆರ್. ಶ್ರೀಯವರ ನಾಗರೀಕನೇ, ತುಂಗೆಯಂಗಳದ ಯುಗಪುರುಷನಾಗಿ ಕಾಣಿಸುತ್ತಾನೆ. ಹೊಸಪೇಟೆಯ ಬಳಿ ತುಂಗಭದ್ರೆಗೆ ಕಟ್ಟಿದ ಆಣೆಕಟ್ಟನ್ನು ಕಂಡ ಜಯತೀರ್ಥರು "ತುಂಗೆಯಂಗಳದಲ್ಲಿ" ರೂಪಕ ರಚಿಸಿದ್ದಾರೆ.

"ಕುಮಾರವ್ಯಾಸ" ಕನ್ನಡ ಭಾರತ ಅಥವಾ ಗದುಗಿನ ಭಾರತದ ಕರ್ತೃವಾದ ನಾರಾಣಪ್ಪನಿಗೆ ಸಂಬಂಧಿಸಿದ ಕಥೆ. ಸರಳವಾಗಿರುವ ಈ ದೃಶ್ಯಕಾವ್ಯದಲ್ಲಿ ನಿರೂಪಣೆಯಲ್ಲಿ ಬಿಗಿ ಇಲ್ಲದಂತಾಗಿದೆ. ಬಹುಶಃ ಈ ರೂಪಕ ಬಹಳ ಹಿಂದೆಯೇ ಬರೆದದ್ದಾಗಿದೆ. ಈ ರೂಪಕವನ್ನು ಓದಿ ಜಯತೀರ್ಥರ ಮಾವನವರಾಗಿದ್ದ ಪ್ರೊ. ರಾಮಚಂದ್ರ ಪಟ್ವಾರಿಯವರು ಉತ್ತಮ ಸಲಹೆ ನೀಡಿ ಇವರಿಗೆ ಪತ್ರ ಬರೆದಿದ್ದಾರೆ. ಆದರೂ ಜಯತೀರ್ಥರ ಪ್ರಯೋಗಶೀಲತೆಯನ್ನು ಸ್ವಾಗತಿಸಬೇಕಾಗುತ್ತದೆ.

**೪ ಇತರ ಕೃತಿಗಳು**

ಜೀವನ ಚರಿತ್ರೆಗೆ ಸಂಬಂಧಿಸಿದಂತೆ, ಜಯತೀರ್ಥರ ಐದು ಕೃತಿಗಳು ಪ್ರಕಟವಾಗಿವೆ. ಚರಿತ್ರೆಗೆ ಸಂಬಂಧಿಸಿದಂತೆ ಒಂದು ಕೃತಿ ಪ್ರಕಟವಾಗಿದೆ. ಇದಲ್ಲದೆ "ಕಡಲ ತೋಳ" ಎಂಬ ಇಂಗ್ಲೀಷ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ವ್ಯಾಸರಾಯರು, ಜಗನ್ನಾಥ ದಾಸರು, ಸುರಪುರದ ಶೂರನಾಯಕರು, ಸ್ವಾಮಿ

ರಾಮತೀರ್ಥ, ಕೃಷ್ಣದೇವರಾಯ ಇವೆಲ್ಲಾ ಚಿಕ್ಕ–ಚಿಕ್ಕ ಕೃತಿಗಳು ಜೀವನ ಚರಿತ್ರೆಗೆ ಸಂಬಂಧಿಸಿವೆ. "ವ್ಯಾಸರಾಯರು" ಚಿಕ್ಕಪುಸ್ತಿಕೆ, ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾಗಿದೆ. "ಜಗನ್ನಾಥ ದಾಸರು" ಹಾಗೂ "ಸುರಪುರದ ಶೂರನಾಯಕರು" ಈ ಚಿಕ್ಕ–ಚಿಕ್ಕ ಕೃತಿಗಳನ್ನು ಐ.ಬಿ.ಎಚ್ ಪ್ರಕಾಶನದವರು ಪ್ರಕಟಿಸಿದ್ದಾರೆ. "ಸ್ವಾಮಿ ರಾಮತೀರ್ಥ" ಹಾಗೂ "ಕೃಷ್ಣದೇವರಾಯ" ಕೃತಿಗಳು ಭಾರತ–ಭಾರತಿ ಪುಸ್ತಕ ಸಂಪದದಿಂದ ಪ್ರಕಟವಾಗಿವೆ. "ಕನಕಗಿರಿ" ಕೂಡ ಚಿಕ್ಕಕೃತಿಯಾಗಿ ಐ.ಬಿ.ಎಚ್ ಪ್ರಕಾಶನದಿಂದ ಪ್ರಕಟವಾಗಿದೆ.

ಜಯತೀರ್ಥರು ಬರೆದಿರುವ ಐದು ಜೀವನ ಚರಿತ್ರೆಗಳಲ್ಲಿ ಯಾವುದೇ ಹೊಸ ಸಂಶೋಧನೆಯಿಲ್ಲ. ಸಾಮಾನ್ಯ ಓದುಗರಿಗೆ ಪರಿಚಯವಾಗಲೆಂದು ಈ ಕೃತಿಗಳನ್ನು ಪ್ರಕಟಿಸಲಾಗಿದೆ. ಇವುಗಳನ್ನು ಪರಿಚಯಾತ್ಮಕವಾದ ಲೇಖನಗಳೆಂದು ಕರೆಯುವುದು ಸೂಕ್ತವೆನಿಸುತ್ತದೆ.

"ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕೆಂಬ" ಜನಜನಿತವಾದ ನುಡಿಗಟ್ಟಿದೆ. ಜಯತೀರ್ಥರು ಕನಕಗಿರಿಯವರು. ಹೀಗಾಗಿ ತಮ್ಮ ಊರಿನ ಸಹಜ ಅಭಿಮಾನವೇ "ಕನಕಗಿರಿ" ಕಿರುಕೃತಿ ರಚನೆಗೆ ಪ್ರೇರಣೆಯಾಗಿದೆ. ಕನಕಗಿರಿಯ ಅರಸ, ವಿಜಯನಗರದ ಮಾಂಡಲೀಕನಾಗಿದ್ದ. ತನ್ನ ಆಸ್ಥಾನದಲ್ಲಿ ಕವಿಗಳಿಗೆ–ಪಂಡಿತರಿಗೆ ಆಶ್ರಯ ನೀಡಿದ್ದ. ಈ ಎಲ್ಲ ಸಂಗತಿಗಳನ್ನು ಆ ಪುಟ್ಟ ಕೃತಿಯಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ.

ಸಾಹಿತ್ಯೇತರ ಕೃತಿಗಳಲ್ಲಿ ಜಯತೀರ್ಥರು ರಚಿಸಿರುವ "ಕನ್ನಡ ತೀರ್ಪುಗಳು" ಹಾಗೂ "ಆಡಳಿತದಲ್ಲಿ ಕನ್ನಡ" ಈ ಕೃತಿಗಳು ತುಂಬ ಮಹತ್ವದವುಗಳಾಗಿವೆ. ಜಯತೀರ್ಥರು ಚಿತ್ರದುರ್ಗದ ವಿಶೇಷ ಜಿಲ್ಲಾಧಿಕಾರಿಗಳಾಗಿದ್ದರು. ಆ ಸಂದರ್ಭದಲ್ಲಿ ಇವರು ತೀರ್ಪು ನೀಡಿದಾಗ, ಅವುಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದರು ; ಅವೇ–ಕನ್ನಡದ ತೀರ್ಪುಗಳು. ಈ ಕೃತಿಗೆ ಕರ್ನಾಟಕ ಸರ್ಕಾರದ ವಿಶೇಷ ಪ್ರಶಸ್ತಿ ಲಭಿಸಿದೆ. ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದೆ.

ಮೈಸೂರು ಆಡಳಿತ ತರಬೇತಿ ಸಂಸ್ಥೆ ಪ್ರಕಟಿಸಿದ ಅವರ ಇನ್ನೊಂದು ಮಹತ್ವದ ಕೃತಿ–"ಆಡಳಿತದಲ್ಲಿ ಕನ್ನಡ". ಈ ಕೃತಿಯಲ್ಲಿ ಕನ್ನಡವನ್ನು ಹೇಗೆ ಆಡಳಿತದಲ್ಲಿ ತರಬೇಕೆಂದು ಲೇಖಕರು ವಿವರಿಸಿದ್ದಾರೆ.

೧೯೮೧ರಲ್ಲಿ ಕಲಬುರಗಿ ಕನ್ನಡ ಸಾಹಿತ್ಯ ಸಂಘದಿಂದ ಜಯತೀರ್ಥರ "ಅಧ್ಯಯನದ ಹಾದಿಯಲ್ಲಿ" ಎಂಬ ಪ್ರಬಂಧಗಳ ಸಂಕಲನ ಪ್ರಕಟವಾಗಿದೆ. ಈ ಕೃತಿಯಲ್ಲಿ ಒಟ್ಟು ಹತ್ತು ಪ್ರಬಂಧಗಳಿವೆ. ಈ ಲೇಖನಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದವುಗಳಾಗಿವೆ.

ಮೊದಲನೇ ಪ್ರಬಂಧ -"ನಾಸ್ತಿಕ ಮತ". ಈ ಪ್ರಬಂಧದಲ್ಲಿ ಲೇಖಕರು ಚಾರ್ವಾಕ ಮತದ ಗುಣಾಂಶವನ್ನು ವಿವರಿಸಿದ್ದಾರೆ. ಪ್ರಪಂಚವನ್ನು ಸುಖವಾಗಿಟ್ಟು ಕೊಂಡು ತಾವೂ ಸುಖವಾಗಿರಬೇಕೆಂದು ಚಾರ್ವಾಕಧರ್ಮ ಹೇಳುತ್ತದೆ. ಪ್ರಪಂಚಾನುಗ್ರಹದ ದೃಷ್ಟಿಯೇ ಚಾರ್ವಾಕ ಮತದ ಮುಖ್ಯ ಧ್ಯೇಯವಾಗಿತ್ತೆಂಬುದನ್ನು ಲೇಖಕರು ಈ ಲೇಖನದಲ್ಲಿ ತಿಳಿಸಿದ್ದಾರೆ.

ಎರಡನೇ ಲೇಖನ "ಕರಿನಾಡಿನಲ್ಲಿ ಬಿಳಿಯರು" ಪ್ರಮುಖವಾಗಿದೆ. ಬ್ರಿಟಿಷ್ ಸರಕಾರದ ಅಂದಿನ ಅಧಿಕಾರಿಗಳಲ್ಲಿ ಕೆಲವರು ಕರ್ನಾಟಕ ಸಂಸ್ಕೃತಿಗೆ, ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರುಗಳಲ್ಲಿ ಕಾಲ್ಡ್‌ವೆಲ್, ಎಲ್ಲಿಸ್, ಮೆಕಂಝಿ, ಬಿ.ಎಲ್. ರೈಸ್ ಹಾಗೂ ಫ್ಲೀಟ್ ಈ ಅಧಿಕಾರಿಗಳು ಕನ್ನಡಕ್ಕಾಗಿ ಹೇಗೆ ದುಡಿದರೆಂಬುದನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

"ರೈಸ್‌ನ ಕನ್ನಡದ ಪ್ರೀತಿ ಅಪ್ರತಿಮವಾದುದು. ಅವನ ಮರಣಕ್ಕೆ ಮೂರು ವರ್ಷ ಮೊದಲು ಎಸ್.ಜಿ. ಶಾಸ್ತ್ರಿಗಳು ಅವನನ್ನು ಇಂಗ್ಲೆಂಡಿನಲ್ಲಿ ಸಂಧಿಸಿದಾಗ - 'ಆಹಾ ಕನ್ನಡ ಎಷ್ಟು ಚಂದ, ಎಷ್ಟು ಮಧುರ, ಕನ್ನಡದಲ್ಲಿಯೇ ಮಾತನಾಡುವಾ' ಎಂದನಂತೆ. ಕನ್ನಡಿಗರೇ ಆದ ನಮ್ಮಲ್ಲಿ ಎಷ್ಟು ಜನರಿಗೆ ತಾಯ್ನುಡಿಯ ಬಗ್ಗೆ ಇಂಥ ಆತ್ಮೀಯ ಭಾವನೆ ಇದೆ?"-(ಅಧ್ಯಯನದ ಹಾದಿಯಲ್ಲಿ, ಪುಟ. ೧೯, ಕ.ಸಾ.ಸಂಘ ಕಲಬುರಗಿ, ೧೯೮೧) ಎಂದು ಪ್ರಶ್ನಿಸುವ ಜಯತೀರ್ಥರ ಕನ್ನಡಾಭಿಮಾನ ಅಪ್ರತಿಮವಾದುದು. ರೈಸ್ ಹಾಗೂ ಫ್ಲೀಟ್‌ರು ಕನ್ನಡ ನಾಡಿನ ಇತಿಹಾಸ ಸಂಶೋಧನೆಯಲ್ಲಿ ಅಶ್ವಿನೀ ದೇವತೆಗಳಾಗಿದ್ದಾರೆಂದು ಹೇಳುತ್ತಾರೆ. ಜೆ.ಎಫ್. ಫ್ಲೀಟ್, ಐ.ಸಿ.ಎಸ್ ಅಧಿಕಾರಿ, ಆದರೆ ಆತನ ಕನ್ನಡದ ಸೇವೆ ಅತ್ಯಮೂಲ್ಯವಾದುದೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

"ಕರ್ನಾಟಕದ ಆಡಳಿತ ವ್ಯವಸ್ಥೆ" ಎಂಬ ಲೇಖನದಲ್ಲಿ ಮೌರ್ಯರು, ಸಾತವಾಹನರು, ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು ಈ ಮೊದಲಾದ ಅರಸರ ಆಡಳಿತ ವ್ಯವಸ್ಥೆಯನ್ನು ಅವರ ಕನ್ನಡ ಪ್ರೇಮವನ್ನು ಕುರಿತು ವಿವರವಾಗಿ ಹೇಳಲಾಗಿದೆ. ಸರಕಾರದ ಮುಖಾಂತರ ಸಾಮಾನ್ಯರ ಸೇವೆಯನ್ನು ಹೇಗೆ ಮಾಡಬೇಕೆಂಬುದನ್ನು ಈ ಕೃತಿಯ ಒಂದು ಲೇಖನದಲ್ಲಿ ವಿವರಿಸಿದ್ದಾರೆ. ಭಾರತದ ಭಾಷೆಗಳನ್ನು ಕುರಿತಂತೆ ಮತ್ತೊಂದು ದೀರ್ಘ ಲೇಖನವಿದೆ.

ನಾಟಕ-ಪ್ರೇಕ್ಷಕ, ವಿಮರ್ಶೆಯ ಪೂರ್ವ-ಪಶ್ಚಿಮ, ಕಾವ್ಯ ಸಮಾಲೋಚನೆ, ಶಾಸ್ತ್ರೀಯ ಸಂಗೀತ ಅಂದು-ಇಂದು, ಅಶಾಂತ ಪೀಳಿಗೆ - ಇವು ಈ ಸಂಕಲನದ

ಇತರ ಪ್ರಬಂಧಗಳಾಗಿವೆ. ಜಯತೀರ್ಥರು ಈ ಕೃತಿಯಲ್ಲಿ ಹನ್ನೊಂದು ಪ್ರಬಂಧ ಪ್ರಕಟಿಸುವದರ ಜತೆಗೆ ನಲವತ್ತು ಮೂರು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಆ ಎಲ್ಲ ಲೇಖನಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಆಳರಸರ ಚರಿತ್ರೆಯನ್ನು ಕುರಿತು, ನಾಡು-ನುಡಿಯ ಮಹತ್ವವನ್ನು ಕುರಿತು, ಕೆಲವು ಗ್ರಾಮಚರಿತ್ರೆಗಳನ್ನು ಕುರಿತು ಈ ಲೇಖನಗಳಲ್ಲಿ ಚರ್ಚಿಸಲಾಗಿದೆ.

ಜಯತೀರ್ಥರ ಕತೆ-ಕಾದಂಬರಿಗಳಿಗಿಂತ ಅವರ ಈ ಸಂಶೋಧನಾ ಲೇಖನಗಳು-ಕನ್ನಡ ತೀರ್ಪುಗಳು ಇಂದು ತೀರ ಪ್ರಸ್ತುತವಾಗುತ್ತವೆ ಮತ್ತು ಉಪಯುಕ್ತವಾಗುತ್ತವೆ. ಕನ್ನಡದ ಬಗೆಗೆ ಅವರ ತಲಸ್ಪರ್ಷಿ ಅಧ್ಯಯನ ಮೆಚ್ಚುವಂತದ್ದಾಗಿದೆ, ಯುವಕರಿಗೆ ಮಾದರಿಯೂ ಆಗಿದೆ." ಕೊಪ್ಪಳ ನಾಡಿನ ಸ್ವಾತಂತ್ರ್ಯ ಹೋರಾಟ" – ಮಹತ್ವದ ಪ್ರಬಂಧವಾಗಿದೆ. ಅದೇ ರೀತಿ – "ಹೈದ್ರಾಬಾದ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮ" ಲೇಖನ, ಅನೇಕ ವಿಷಯಗಳನ್ನು ತಿಳಿಸಿ ಕೊಡುತ್ತದೆ. ಗಣೇಕಲ್ ಸಂಗವಿಭುವನ್ನು ಕುರಿತು, ವಿಜಯನಗರದ ಹಜಾಮರನ್ನು ಕುರಿತು ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ.

ಗ್ರಂಥ ಸಂಪಾದನೆ ಕ್ಷೇತ್ರದಲ್ಲೂ ಜಯತೀರ್ಥರು ಕೈಯಾಡಿಸಿದ್ದಾರೆ. ಅವರ ಏಳು ಸಂಪಾದಿತ ಕೃತಿಗಳು ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಕೃತಿಗಳನ್ನು ಇತರರೊಡನೆ ಕೂಡಿ ಸಂಪಾದಿಸಿದ್ದಾರೆ. ಕೆಲವು ಕೃತಿಗಳು ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ ಪ್ರಕಟನೆಗಳಾಗಿವೆ. ಇವು ಜಿಲ್ಲಾ ಸಮ್ಮೇಳನಗಳ ಸ್ಮರಣ ಸಂಚಿಕೆಗಳಾಗಿವೆ. ಕಚೇರಿ ಕೈಪಿಡಿ ಮಹತ್ವದ ಗ್ರಂಥವಾಗಿದೆ. ಮೈಸೂರು ವಿಶ್ವವಿದ್ಯಾಲಯದಿಂದ ಈ ಕೃತಿ ಪ್ರಕಟವಾಗಿದೆ. ಇನ್ನೊಂದು ಕೃತಿ "ಆಡಳಿತ ಭಾಷಾ ಸಮಸ್ಯೆಯ ವಿಶ್ಲೇಷಣೆ" – ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾಗಿದೆ. ಆಡಳಿತದಲ್ಲಿ ಎಂದಿಗೂ ಕನ್ನಡ ಭಾಷೆ ಸಮಸ್ಯೆಯಾಗುವದಿಲ್ಲ ವೆಂಬುದನ್ನು ಲೇಖಕರು ಸಂಪಾದಕೀಯದಲ್ಲಿ ಹೇಳಿದ್ದಾರೆ. "ಬಹುಮಾನಿತ ಕನ್ನಡ ತೀರ್ಪುಗಳು" ಕೂಡಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟವಾಗಿದೆ.

ಜಯತೀರ್ಥರ ಇಷ್ಟೊಂದು ಕೃತಿಗಳಲ್ಲಿ ಇಂದು ಮುಖ್ಯವಾಗುವ ಅವರ ಸೃಜನೇತರ ಕೃತಿಗಳು, ಅದರಲ್ಲೂ ಆಡಳಿತ ಕನ್ನಡಕ್ಕೆ ಸಂಬಂಧಿಸಿದ ಕೃತಿಗಳು ಗಮನ ಸೆಳೆಯುತ್ತವೆ. ಅವರ ಕಥನ ಸಾಹಿತ್ಯದ ಕೃತಿಗಳು ಹೈದ್ರಾಬಾದ ವಿಮೋಚನಾ ಹೋರಾಟಗಳ ಚಿತ್ರಣವನ್ನು ಕಟ್ಟಿನಿಲ್ಲಿಸುತ್ತವೆ. ಹೀಗಾಗಿ ಅವರ ಸಾಹಿತ್ಯದ ಸಾಧನೆ ಅಪಾರವಾದುದಾಗಿದೆ.

■

## ೬. ಸಾಂಸ್ಕೃತಿಕ ಕೊಡುಗೆ

ಜಯತೀರ್ಥ ಪುರೋಹಿತರು ಕನ್ನಡ ಭಾಷೆ-ಸಾಹಿತ್ಯವನ್ನು ಬೆಳೆಸಿದಂತೆ, ಕರ್ನಾಟಕ ಸಂಸ್ಕೃತಿಯ ಉಳಿವಿಗೂ ಪ್ರಯತ್ನಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಜಾಗೃತಿಯನ್ನುಂಟು ಮಾಡಿದರು. ನಾಡಹಬ್ಬದ ಆಚರಣೆಗೆ ಪ್ರಾಮುಖ್ಯತೆ ನೀಡಿದರು. ಆಡಳಿತ ಭಾಷೆಯಗಿ ಕನ್ನಡವನ್ನು ಜಾರಿಗೆ ತಂದಂತೆ, ನಾಡಹಬ್ಬಗಳ ಮೂಲಕ ಸಾಂಸ್ಕೃತಿಕ ಮಹತ್ವವನ್ನು ತಿಳಿಸಿಕೊಟ್ಟರು.

ಹೈದ್ರಾಬಾದದಲ್ಲಿ ಇದ್ದಾಗ ಅಲ್ಲಿಯ ಕರ್ನಾಟಕ ಸಾಹಿತ್ಯ ಮಂದಿರಕ್ಕೆ ಹೋಗುತ್ತಿದ್ದರು. ಅಲ್ಲಿ ಏರ್ಪಡಿಸುತ್ತಿದ್ದ ನಾಡಹಬ್ಬಗಳಲ್ಲಿ ಮಾಸ್ತಿ, ಬಿ.ಎಂ.ಶ್ರೀ, ರಾಜರತ್ನಂ ಅವರ ಭಾಷಣಗಳನ್ನು ಕೇಳುತ್ತಿದ್ದರು. ಕರ್ನಾಟಕ ಸಾಹಿತ್ಯ ಮಂದಿರದ ಸದಸ್ಯರೂ ಆಗಿದ್ದರು. ಜಯತೀರ್ಥರಿಗೆ ಈ ಸಂಘ-ಸಂಸ್ಥೆಗಳಲ್ಲಿ ಪಾಲ್ಗೊಂಡು ಕೆಲಸ ಮಾಡುವದೆಂದರೆ ಬಹಳ ಸಂತೋಷ. ಅಂತೆಯೇ ಅವರು ಆಗ "ನಿಜಾಂ ಕರ್ನಾಟಕ ವಿದ್ಯಾರ್ಥಿ ಸೇವಾ ಸಂಘದ" ಸದಸ್ಯರಾಗಿದ್ದರು.

ಪ್ರತಿ ವರ್ಷ ನಡೆಯುತ್ತಿದ್ದ ನಾಡಹಬ್ಬ, ಗಣೇಶೋತ್ಸವಗಳಲ್ಲಿ ಇವರು ಭಾಗವಹಿಸುತ್ತಿದ್ದರು. ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆಯುತ್ತಿದ್ದರು. ಇವರು ಸೇವೆ ಸಲ್ಲಿಸಿದ್ದ ಹುಮನಾಬಾದ, ಯಾದಗಿರಿ, ಚಿಂಚೋಳಿ, ಗುಲ್ಬರ್ಗಾ, ಬಳ್ಳಾರಿ, ಲಿಂಗಸೂರು ಈ ಮುಂತಾದ ಕಡೆಗಳಲ್ಲಿ ಕನ್ನಡ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲಿಯೇ ಇರಲಿ ಅಲ್ಲಿ ಜಯತೀರ್ಥ ಅವರು ಇದ್ದೇ ಇರುತ್ತಿದ್ದರು.

ಮಹಾರಾಷ್ಟ್ರೀಯರು ಗಜಾನನೋತ್ಸವದ ಮೂಲಕ ತಮ್ಮ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಿರುವಂತೆ, ಕನ್ನಡಿಗರಾದ ನಾವು ನಾಡಹಬ್ಬವನ್ನಾಚರಿಸಬೇಕೆಂದು ಜಯತೀರ್ಥರು ತಮ್ಮ ಗೆಳೆಯರಿಗೆಲ್ಲ ಹೇಳುತ್ತಿದ್ದರು. ಹೈದ್ರಾಬಾದ ವಿಮೋಚನೆ ಯಾದರೂ ಅಲ್ಲಿರುವ ಕನ್ನಡಗಿರಿಗೆ ಕನ್ನಡ ಸಂಸ್ಕೃತಿಯನ್ನು ಕಟ್ಟಿಕೊಡಬೇಕಾದದ್ದು ಅಂದಿನ ಅನಿವಾರ್ಯತೆಯಾಗಿತ್ತು. ಅದನ್ನು ರಾಜಪು ರೋಹಿತರು ನಿಷ್ಠೆಯಿಂದ ಮಾಡಿದರು. ಹೈದ್ರಾಬಾದದಲ್ಲಿ ಕನ್ನಡಿಗರಿದ್ದಾರೆಂದು ಎಲ್ಲ ಭಾಷೆಗಳವರಿಗೂ ತಿಳಿಯುವಂತಾಗಲೆಂದು ಅವರು ನಾಡಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದರು.

ನಾಡಹಬ್ಬವನ್ನು ಹತ್ತುದಿನಗಳವರೆಗೆ ಆಚರಿಸುತ್ತಿದ್ದರು. ಹೈದ್ರಾಬಾದದಲ್ಲಿ ಮೊದಲ ಬಾರಿಗೆ ಅದ್ದೂರಿಯಾಗಿ ನಾಡಹಬ್ಬ ಆಚರಿಸಿದಾಗ ಜಯತೀರ್ಥರೇ ಕಾರ್ಯದರ್ಶಿಯಾಗಿ ಹುರುಪಿನಿಂದ ಓಡಾಡಿ ಕಾರ್ಯಕ್ರಮ ವ್ಯವಸ್ಥೆ ಮಾಡಿದ್ದರು. ಅಲ್ಲಿಯ ಅಧಿಕಾರಿಗಳಿಂದ, ಶ್ರೀಮಂತರಿಂದ ಹಣ ಸಂಗ್ರಹಿಸಿ ಅರ್ಥಪೂರ್ಣ ಕಾರ್ಯಕ್ರಮವನ್ನು ಕೊಟ್ಟಿದ್ದರು. ೧೯೪೯ರ ನಾಡಹಬ್ಬದ ಉದ್ಘಾಟನೆಗಾಗಿ ಕೇಂದ್ರದ ಬಾನುಲಿ ಮತ್ತು ಪ್ರಸಾರ ಇಲಾಖೆಯ ಮಂತ್ರಿಗಳಾಗಿದ್ದ ಆರ್.ಆರ್. ದಿವಾಕರ್ ಅವರು ಬಂದಿದ್ದರು. ಕನ್ನಡದ ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಅತಿಥಿಗಳಾಗಿ ಬಂದಿದ್ದರು. ಹೀಗೆ ಪ್ರತಿವರ್ಷ ಹೈದ್ರಾಬಾದದಲ್ಲಿ ನಾಡಹಬ್ಬ ಸಾಂಸ್ಕೃತಿಕ ಕಾರ್ಯಕ್ರಮವಾಗಿ ನಡೆಯುತ್ತಿತ್ತು. ಅಂದಿನ ಕನ್ನಡ ನಾಯಕರಾಗಿದ್ದ ಶ್ರೀ ಗುಡಗುಂಟಿ ರಾಮಾಚಾರ್ಯರು ನೃಪತುಂಗ ಶಾಲೆಗಾಗಿ ಒಂದು ಸ್ವಂತ ಕಟ್ಟಡ ಖರೀದಿ ಮಾಡಲು ನೆರವಾದರು. ಹೀಗಾಗಿ ೧೯೫೦ ರಿಂದ ನಾಡಹಬ್ಬ ಕಾರ್ಯಕ್ರಮಗಳು ಅಲ್ಲಿಯೇ ನಡೆಯುತ್ತಿದ್ದವು.

ಆಶ್ವಯುಜ ಮಾಸದ ಪ್ರತಿಪದೆಯಂದು ಭುವನೇಶ್ವರಿಯ ಸ್ಥಾಪನೆಯಾಗುತಿತ್ತು. ದೇವಿಗಾಗಿ ಸುಂದರವಾದ ಮಂಟಪವನ್ನು ಖ್ಯಾತ ಕಲಾವಿದರಾದ ಶ್ರೀ ಕೆ.ಜಿ. ನಾಯಕ ಮತ್ತು ಶ್ರೀ ಧೀರಾಚಾರ್ಯ ವಾಡಪ್ಪಿಯವರು ನಿರ್ವಹಿಸುತ್ತಿದ್ದರು. ನೃಪತುಂಗ ಮಹಾವಿದ್ಯಾಲಯ, ಶಾರದಾ ಕನ್ಯಾಶಾಲೆ ಮತ್ತು ಇತರ ಕನ್ನಡ ವಿದ್ಯಾರ್ಥಿಗಳಿಂದ ಧ್ವಜವಂದನೆ ಕಾರ್ಯಕ್ರಮ ನಡೆಯುತ್ತಿತ್ತು. ಅತ್ಯಂತ ಹೆಚ್ಚು ಪ್ರಸಾರದಲ್ಲಿದ್ದ ಸ್ಥಳೀಯ ದಿನಪತ್ರಿಕೆಗಳಾದ ಡೆಕ್ಕನ್ ಕ್ರಾನಿಕಲ್, ಡೇಲಿನ್ಯೂಸ್ ಪತ್ರಿಕೆಗಳು ಮೊದಲ ಪುಟದಲ್ಲಿ ನಾಡಹಬ್ಬದ ಕಾರ್ಯಕ್ರಮಗಳನ್ನು ವಿವರವಾಗಿ ಪ್ರಕಟಿಸುತ್ತಿದ್ದವು. ಹೀಗಾಗಿ ನಾಡಹಬ್ಬ ಕಾರ್ಯಕ್ರಮವು ಹೈದ್ರಾಬಾದ್– ಸಿಕಂದ್ರಾಬಾದ್ ನಗರಗಳ ಸರ್ವಭಾಷೆಗಳ ನಾಗರಿಕರ ಮನೆ ಮಾತಾಯಿತು. ಸಭಿಕರ ಸಂಖ್ಯೆ ಆ ಕಾಲದಲ್ಲಿ ಏಳೆಂಟು ಸಾವಿರದವರೆಗೆ ಇರುತ್ತಿತ್ತು. ರಾಜ ಪುರೋಹಿತರು ಪ್ರವಚನಗಳನ್ನೇರ್ಪಡಿಸುವಲ್ಲಿ, ಕಾರ್ಯಕ್ರಮಗಳನ್ನು ನಿರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಆ ನಾಡಹಬ್ಬದಲ್ಲಿ ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಕನ್ನಡ ಸಾಹಿತ್ಯದ ಸೊಬಗನ್ನು ಕುರಿತು ಮಾತನಾಡಿದ್ದರು. ಪಂಡಿತರಿಗೆ, ಸಾಹಿತ್ಯಾಭ್ಯಾಸಿಗಳಿಗೆ, ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮಗಳು ಆಕರ್ಷಕವಾಗಿದ್ದವು. ಕನ್ನಡದ ಜತೆಗೆ ಹಿಂದಿ, ಮರಾಠಿ, ತಮಿಳು ಭಾಷೆಗಳಲ್ಲಿಯೂ ಭಾಷಣಗಳಿರುತ್ತಿದ್ದವು.

ಜಯತೀರ್ಥರು ಸಾಂಸ್ಕೃತಿಕ ಕಾರ್ಯಕ್ರಮದ ಜತೆಗೆ ರಾಜಕೀಯ ಜಾಗೃತಿಯ ಕಾರ್ಯಕ್ರಮವನ್ನೂ ಏರ್ಪಡಿಸಿದ್ದರು. ಎಲ್ಲ ರಾಜಕೀಯ ಪಕ್ಷಗಳ ನಾಯಕರನ್ನು ಒಂದೇ ವೇದಿಕೆಯ ಮೇಲೆ ಸೇರಿಸಿದ್ದರು. "ವಿಮೋಚನೆಯಾಗಿರುವ ಹೈದ್ರಾಬಾದ್‌ಗೆ

ಎಂತಹ ಸರ್ಕಾರ ಬೇಕು?" ಇದು ಭಾಷಣದ ವಿಷಯವಾಗಿತ್ತು. ಹೈದರಾಬಾದಿನ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬುರಗುಲ ರಾಮಕೃಷ್ಣ ರಾಯರು ಕಾಂಗ್ರೆಸ್ಸಿನ ಪರವಾಗಿ, ಶ್ರೀಮತಿ ಸರೋಜಿನಿ ನಾಯಿಡು ಅವರ ಪುತ್ರ ಡಾ. ಎನ್.ಎಂ. ಜಯಸೂರ್ಯ ಅವರು ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ, ಶ್ರೀ ಬದರಿ ವಿಶಾಲಾ ಪಿಟ್ಟಿ ಮತ್ತು ಶ್ರೀ. ವಾಯ್, ಶಿವರಾಮಶಾಸ್ತ್ರಿ ಸೋಸಿಯಲಿಸ್ಟ್ ಪಾರ್ಟಿ ಪರವಾಗಿ, ಶ್ರೀ ರಶೀದ್ ತರಾ ತುರಾಬ್ ಅವರು ಮುಸ್ಲಿಂ ಲೀಗ್ ಪರವಾಗಿ, ಪಂಡಿತ ನರೇಂದ್ರಜಿ ಅವರು ಹಿಂದು ಮಹಾಸಭಾ ಪರವಾಗಿ ಮಾತನಾಡಿದರು. ಹೈದ್ರಾಬಾದ – ಸಿಕಂದ್ರಾಬಾದ ಜನತೆ ಇಂತಹ ಕಾರ್ಯಕ್ರಮವನ್ನು ಬಹುವಾಗಿ ಮೆಚ್ಚಿಕೊಂಡರು. ಮರುದಿನ ಹಿಂದೂ ಪತ್ರಿಕೆ ಹಾಗೂ ಇತರ ಪತ್ರಿಕೆಗಳಲ್ಲಿ ವರದಿ ವಿವರವಾಗಿ ಪ್ರಕಟವಾಗಿತ್ತು. ಈ ಮೂಲಕ ಕನ್ನಡಿಗರ ನಾಡಹಬ್ಬವು ನಿಜವಾದ ರಾಷ್ಟ್ರೀಯ ಹಬ್ಬವಾಗಿ ಕಂಡುಬಂತು.

ಕನ್ನಡ ಸಂಸ್ಕೃತಿಯ ಪರಿಚಯ ಅನ್ಯಭಾಷಿಗರಿಗೂ ಆಗಬೇಕೆಂಬುದು ಜಯತೀರ್ಥರ ಆಸೆಯಾಗಿತ್ತು. ಅಂತೆಯೇ ಅವರು, ಅ.ನ.ಕೃ, ವಿ.ಕೆ. ಗೋಕಾಕ್, ಬೇಂದ್ರೆ ಇವರಿಂದ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಇಂಗ್ಲೀಷಿನಲ್ಲಿ ಭಾಷಣಗಳನ್ನು ಏರ್ಪಡಿಸುತ್ತಿದ್ದರು. ಇದರ ಜತೆಗೆ ಕನ್ನಡಿಗರಿಗಾಗಿ ಸುಪ್ರಸಿದ್ಧ ಸಾಹಿತಿಗಳಾಗಿದ್ದ ವಿ. ಸೀತಾರಾಮಯ್ಯ, ಬೀಚಿ. ಬೆಟಗೇರಿ ಕೃಷ್ಣಶರ್ಮ, ನಿರಂಜನ, ತ.ರಾ.ಸು, ಜಿ.ಪಿ. ರಾಜರತ್ನಂ ಈ ಮೊದಲಾದವರನ್ನು ಕರೆಯಿಸಿ ಕನ್ನಡದಲ್ಲಿ ಭಾಷಣ ಮಾಡಿಸುತ್ತಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸುವದೆಂದರೆ ಜಯತೀರ್ಥರಿಗೆ ಎಲ್ಲಿಲ್ಲದ ಆಸಕ್ತಿ. ಪ್ರತಿಯೊಂದು ಕಾರ್ಯಕ್ರಮವೂ ಉತ್ಕೃಷ್ಟವಾಗಿರಬೇಕೆಂದವರು ಬಯಸುತ್ತಿದ್ದರು. ನಮ್ಮ ಸಾಂಸ್ಕೃತಿಕ ಪರಂಪರೆ, ಅನ್ಯಭಾಷೆಯವರಿಗೆ ಮನನವಾಗುವಂತಿರಬೇಕೆಂದವರು ಹೇಳುತ್ತಿದ್ದರು. ಇದಕ್ಕಾಗಿ ಒಂದು ಪರಶೀಲನಾ ಸಮಿತಿಯನ್ನೇರ್ಪಡಿಸುತ್ತಿದ್ದರು. ನೃಪತುಂಗ ಶಾಲೆ, ಶಾರದಾ ಕನ್ಯಾಶಾಲೆ, ನಿಜಾಮ್ ಕಾಲೇಜ್, ಚಾದರ ಘಾಟ್ ಕಾಲೇಜ, ಸಿಟಿ ಕಾಲೇಜ, ಯುನಿವರ್ಸಿಟಿ ಕಾಲೇಜ ಇವುಗಳ ಕನ್ನಡ ಸಂಘಗಳು ಹಾಗೂ ಕೊಪ್ಪಳದ ಗೆಳೆಯರು, ಇನ್ನೂ ಮುಂತಾದ ವಿಲಾಸಿ ನಾಟಕ ತಂಡಗಳು ಭಾಗವಹಿಸುತ್ತಿದ್ದವು. ಅನೇಕ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ನೃತ್ಯ–ಲಘು ಸಂಗೀತ– ಕಾವ್ಯವಾಚನ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಜಯತೀರ್ಥ ಪುರೋಹಿತರು ಹಾಗೂ ಅವರ ಮಿತ್ರರು ೧೯೪೯ ರಲ್ಲಿ

ಸಂಘಟಿಸಿದ ಬೃಹತ್ ಪ್ರಮಾಣದ ನಾಡಹಬ್ಬ ಉತ್ಸವ ಅನಂತರದ ವರ್ಷಗಳಲ್ಲಿ ಜರುಗಿದ ನಾಡಹಬ್ಬಗಳಿಗೆ ಮಾದರಿಯಾಗಿದ್ದನ್ನು ಮರೆಯುವಂತಿಲ್ಲ.

ಜಯತೀರ್ಥರು ಬಳ್ಳಾರಿಯಲ್ಲಿದ್ದಾಗ, ಬಳ್ಳಾರಿ ರಾಘವಾಚಾರ್ಯರ ಸ್ಮಾರಕಭವನದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಹಾಯ ಮಾಡುತ್ತಿದ್ದರು. ಬಳ್ಳಾರಿಯಲ್ಲಿ ನಡೆದ ರಾಘವ ಸ್ಮಾರಕ ನಾಟಕೋತ್ಸವ ಗಮನಾರ್ಹವಾದುದು. ಈ ನಾಟಕೋತ್ಸವದ ಯಶಸ್ಸಿಗೆ ಜಯತೀರ್ಥರೇ ಮುಖ್ಯ ಕಾರಣರಾಗಿದ್ದರು. ಕಲೆ–ಸಂಸ್ಕೃತಿಗಳ ಬಗೆಗೆ ಇರುವ ಆಸಕ್ತಿಯನ್ನು ಕಂಡು ಅವರ ಗೆಳೆಯರು ಜಯತೀರ್ಥರನ್ನು ತುಂಬ ಪ್ರೀತಿಯಿಂದ ಕಾಣುತ್ತಿದ್ದರು.

ಬಳ್ಳಾರಿಯಿಂದ ಮೈಸೂರಿಗೆ ವರ್ಗವಾಗಿ ಹೋದ ಜಯತೀರ್ಥರು ಮುಂದೆ ಚಿತ್ರದುರ್ಗಕ್ಕೆ ವಿಶೇಷ ಜಿಲ್ಲಾಧಿಕಾರಿಯಾಗಿ ನೇಮಕಗೊಂಡರು. ಅದೇ ಸಂದರ್ಭದಲ್ಲಿ ಪರಿಷತ್ತಿನ ಚಿತ್ರದುರ್ಗ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಚಿತ್ರದುರ್ಗದಲ್ಲಿ ಜನಪದ ಕಲಾಮೇಳ ನಡೆಸಬೇಕಾಗಿತ್ತು. ಅದರ ಸಂಪೂರ್ಣ ವ್ಯವಸ್ಥೆಯನ್ನು ಮಾಡಿದ ಜಯತೀರ್ಥರು ಕಲಾಮೇಳವನ್ನು ಯಶಸ್ವಿಯಾಗಿ ನಡೆಸಿದರು. ಈ ಕಲಾಮೇಳ ಮೂರು ದಿನ ನಡೆಯಿತು. ಕಡೆಯ ದಿನ ಸಮಾರೋಪ ಕಾರ್ಯಕ್ರಮ. ಪರಸ್ಥಳಗಳಿಂದ ಬಂದಿದ್ದ ಸಾಹಿತಿಗಳಿಗೆಲ್ಲ ಜಯತೀರ್ಥರ ಮನೆಯಲ್ಲಿಯೇ ಆದರಾತಿಥ್ಯ. ಕಲಾ ಮೇಳಗಳನ್ನು ಸಂಘಟಿಸುವಾಗ ಸ್ಥಳೀಯ ಕಲಾವಿದರಿಗೆ, ಅಲ್ಲಿಯ ಪ್ರಸಿದ್ಧ ಕಲಾ ಮೇಳಗಳಿಗೆ ಅವಕಾಶ ಕೊಡಬೇಕೆಂಬುದು ಜಯತೀರ್ಥರ ಆಶೆಯಾಗಿತ್ತು. ಜನಪದ ಕಲಾಮೇಳ ಯಶಸ್ವಿಯಾದಾಗ ಚಿತ್ರದುರ್ಗದ ಜನ ಜಯತೀರ್ಥರನ್ನು ಕೊಂಡಾಡಿದರು.

ಹೀಗೆ ಜಯತೀರ್ಥರು ಎಲ್ಲೆಲ್ಲಿ ಸರ್ಕಾರದ ಕೆಲಸದ ಮೇಲೆ ವರ್ಗವಾಗಿ ಹೋಗುತ್ತಾರೊ, ಅಲ್ಲಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಅವರು ಒಬ್ಬ ಹಿರಿಯ ಶ್ರೇಣಿಯ ಅಧಿಕಾರಿಯಾಗಿದ್ದುದರಿಂದ ಆ ಕಾಲದಲ್ಲಿ ಜನರೂ ಕೂಡ ಅವರ ಮಾತನ್ನು ಕೇಳುತ್ತಿದ್ದರು. ಕಾರ್ಯಕ್ರಮಗಳ ಯಶಸ್ಸಿಗೆ ಹಗಲಿರುಳೂ ದುಡಿಯುತ್ತಿದ್ದರು.

ಜಯತೀರ್ಥ ಪುರೋಹಿತರ ಸಾಹಿತ್ಯಕ ಸಾಧನೆಯಷ್ಟೇ ದೊಡ್ಡದು ಅವರ ಕನ್ನಡದ ಅನುಷ್ಠಾನ ಕಾರ್ಯಕ್ರಮ, ಆಡಳಿತದಲ್ಲಿ ಕನ್ನಡ ತರುವ ಪ್ರಯತ್ನ. ಈ ಎರಡೂ ಕಾರ್ಯಕ್ರಮಗಳಿಗೆ ಪೂರಕವಾಗಿರುವಂತಹದ್ದು ಸಾಂಸ್ಕೃತಿಕ ಕಾರ್ಯಕ್ರಮ.

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಯಾವಾಗಲೂ ಜನ ಸರುತ್ತಾರೆ. ಅಂತೆಯೇ ಜಯತೀರ್ಥರು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದರು.

ಹೀಗೆ ಜನ ಸಾವಿರಾರು ಸಂಖ್ಯೆಯಲ್ಲಿ ಸೇರಿದಾಗ, ಜಯತೀರ್ಥರು ಹಿರಿಯ ಸಾಹಿತಿಗಳಿಂದ ಕನ್ನಡದ ಮಹತ್ವವನ್ನು, ಕರ್ನಾಟಕ ಸಂಸ್ಕೃತಿಯ ಹಿರಿಮೆಯನ್ನು ಹೇಳಿಸುತ್ತಿದ್ದರು. ಇದು ಜನಮನದಲ್ಲಿ ಪರಿಣಾಮವನ್ನುಂಟು ಮಾಡಿತು. ಅಧಿಕಾರವೂ ಇವರಲ್ಲಿದ್ದುದರಿಂದ ಅದನ್ನು ಸದುಪಯೋಗ ಪಡಿಸಿಕೊಂಡು ಜನಸಮುದಾಯದಲ್ಲಿ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸಲು ಇವರು ಪ್ರಮುಖ ಕಾರಣರಾಗಿದ್ದರು.

ಗಣೇಶೋತ್ಸವಕ್ಕೆ ಪರ್ಯಾಯವಾಗಿ ನಾಡಹಬ್ಬವನ್ನು, ತೆಲುಗು-ಮರಾಠಿ ಭಾಷೆಗಳಿಗೆ ಪರ್ಯಾಯವಾಗಿ ಕನ್ನಡವನ್ನು ತಂದ ಜಯತೀರ್ಥರು ಗಡಿನಾಡಿನಲ್ಲಿದ್ದ ಕನ್ನಡಿಗರಿಗೆ ಭರವಸೆಯ ಅಧಿಕಾರಿಯಾಗಿದ್ದರು. ಇವರು ವರ್ಗವಾಗಿ ಹೋದಲ್ಲೆಲ್ಲ ಕನ್ನಡದ ಜಾಗೃತಿ-ಸಂಸ್ಕೃತಿಯ ಬೆಳವಣಿಗೆ ಸಹಜವೆಂಬಂತೆ ನಡೆಯುತ್ತಿತ್ತು. ಅಂತೆಯೇ ಇವರಲ್ಲಿದ್ದ ಕನ್ನಡ ಭಾಷೆಯ ಮೇಲಿನ ಶ್ರದ್ಧೆ, ಕಳಕಳಿಯನ್ನು ಗಮನಿಸಿ ಸರಕಾರ ಇವರನ್ನು ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನಾಗಿ ನೇಮಿಸಿತು.

■

# ೭ ಸಮಾರೋಪ

ಜಯತೀರ್ಥ ಪುರೋಹಿತರ ಸಾಧನೆಯನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗಿದೆ. ಕನ್ನಡ ಕಟ್ಟಿದ ಪ್ರಸಂಗಗಳು, ಅವರ ಬಹುಮುಖ್ಯ ಸಾಧನೆ. ಸಾಹಿತ್ಯಕ ಕೃಷಿ ಎರಡನೆಯ ಸಾಧನೆ, ಸಾಂಸ್ಕೃತಿಕ ಕೊಡುಗೆ ಮೂರನೇ ಸಾಧನೆ. ಎರಡು ಮತ್ತು ಮೂರನೇ ಸಾಧನೆಗಳನ್ನು ಬಹಳಷ್ಟು ಜನ ಮಾಡುತ್ತಾರೆ. ಆದರೆ ಕನ್ನಡವನ್ನು ಆಡಳಿತದಲ್ಲಿ ತರುವ ಪ್ರಯತ್ನ, ಅದು ಜಾರಿಯಲ್ಲಿ ಬರುತ್ತದೆಯೋ ಇಲ್ಲವೋ ಎಂಬುದನ್ನು ಕಾವಲು ಕಾಯುವ ಪ್ರಯತ್ನ ಬಹಳ ದೊಡ್ಡದು. ಕನ್ನಡದ ಬಗೆಗೆ ವೀರ ಘೋಷಣೆ ಮಾಡಿ ಕುಳಿತು ಬಿಡುವುದು ಸುಲಭ, ಆದರೆ ಕನ್ನಡದಲ್ಲಿ ಬದುಕುವುದು, ಕನ್ನಡಕ್ಕಾಗಿ ನಿರಂತರ ಚಿಂತನೆ ನಡೆಸುವುದು ಕಠಿಣ.

ಜಯತೀರ್ಥರು ಒಬ್ಬ ಐ.ಎ.ಎಸ್ ಶ್ರೇಣಿಯ ಅಧಿಕಾರಿಯಾಗಿ ಇಂದಿನ ಎಲ್ಲ ಅಧಿಕಾರಿಗಳಿಗೆ ಮಾದರಿಯಾಗಿದ್ದಾರೆ. ಶಾಸನಾಂಗ ನಿಂತಿರುವುದೇ ಆಡಳಿತಾಂಗದ ಮೇಲೆ. ಎಷ್ಟೋ ಜನ ಸಚಿವರು ಬರುತ್ತಾರೆ, ಹೋಗುತ್ತಾರೆ. ಎಷ್ಟೋ ಸರಕಾರಗಳು ಬರುತ್ತವೆ, ಹೋಗುತ್ತವೆ. ಆದರೆ ನಿವೃತ್ತಿಯಾಗುವವರೆಗೂ ಕಾರ್ಯ ಮಾಡುವಂತವರು ಸರಕಾರಿ ಅಧಿಕಾರಿಗಳು. ಈ ಅಧಿಕಾರಿಗಳಿಗೇ ಕನ್ನಡ ಬಾರದಿದ್ದಾಗ, ಕೆಲವರಲ್ಲಿ ಕನ್ನಡದ ಬಗೆಗೆ ಅಸಡ್ಡೆಯಿದ್ದಾಗ, ಶಾಸನ ಸಭೆಗಳಲ್ಲಿ ಎಷ್ಟೇ ನಿರ್ಣಯಗಳನ್ನು ಕೈಕೊಂಡರೂ ಉಪಯೋಗವಾಗುವದಿಲ್ಲ. ಒಬ್ಬ ಸಾಮಾನ್ಯನಲ್ಲಿರುವ ಕನ್ನಡ ಪ್ರೇಮದ ಜತೆಗೆ ಒಬ್ಬ ಅಧಿಕಾರಿಯಲ್ಲಿರುವ ಕನ್ನಡ ಪ್ರೇಮ ಹೆಚ್ಚು ವ್ಯಾಪಕವಾದುದು. ಆ ಅಧಿಕಾರಿ ಕನ್ನಡ ಪ್ರೇಮಿಯಾಗಿದ್ದರೆ, ತನ್ನ ಸೇವಾ ಅವಧಿಯ ಮೂವತ್ತು-ಮೂವತ್ತೈದು ವರ್ಷಗಳಲ್ಲಿ ಕನ್ನಡವನ್ನು ಬಿತ್ತುತ್ತಾ ಹೋಗುತ್ತಾನೆ. ಆಗ ಎಲ್ಲ ಕಚೇರಿಗಳಲ್ಲೂ ಕನ್ನಡ ಬೆಳೆದುನಿಲ್ಲಲು ಸಾಧ್ಯವಾಗುತ್ತದೆ. ಜಯತೀರ್ಥ ಪುರೋಹಿತರು ಮುಖ್ಯವಾಗುವದು ಈ ಕಾರಣಕ್ಕಾಗಿ. ತಮ್ಮ ಕೆಳಗಿನ ಅಧಿಕಾರಿಗಳಿಗೆ ಕನ್ನಡ ಬಳಸಲು ಅವರು ನಿಷ್ಠುರವಾಗಿ ಹೇಳುತ್ತಿದ್ದರು ಮತ್ತು ಅವರಲ್ಲಿ ಆತ್ಮವಿಶ್ವಾಸ ತುಂಬುತ್ತಿದ್ದರು. ಬೆನ್ನ ಹಿಂದೆ ಬಿದ್ದು ಕನ್ನಡದ ಕಾವಲು ಕಾಯುತ್ತಿದ್ದರು. ಇಂತಹ ಕನ್ನಡದ ಕಟ್ಟಾಳು ೨೬.೦೪.೧೯೮೬ರಲ್ಲಿ

ನಿಧನರಾದರು. ಅವರಿಂದು ಇರದಿದ್ದರೂ ಅವರ ಕೃತಿಗಳು–ಅವರು ಕಟ್ಟಿದ ಕನ್ನಡ ಆಡಳಿತದ ತೇರು ಇಂದಿಗೂ ಜೀವಂತವಾಗಿದೆ.

ಸಿದ್ಧಯ್ಯ ಪುರಾಣಿಕ, ಜಯತೀರ್ಥ ಪುರೋಹಿತ್ ಇಬ್ಬರೂ ಇಂತಹ ಕನ್ನಡ ನಿಷ್ಠೆಯ ಅಧಿಕಾರಿಗಳಾಗಿದ್ದರು. ಇಬ್ಬರೂ ಐ.ಎ.ಎಸ್ ಶ್ರೇಣಿಯ ಅಧಿಕಾರಿಗಳು, ಇಬ್ಬರೂ ಅಂದಿನ ಅಖಂಡ ರಾಯಚೂರ ಜಿಲ್ಲೆಯವರಾಗಿದ್ದರು. ಹೆಮ್ಮೆ ಪಡುವಂತಹ ಕಾರ್ಯಕ್ರಮಗಳನ್ನಿವರು ಹಾಕಿಕೊಂಡಿದ್ದರು. ಕನ್ನಡ ಬಾರದ, ಬಂದರೂ ಉದ್ದೇಶಪೂರ್ವಕವಾಗಿ ಬಳಸದ ಇಂದಿನ ಬಹಳಷ್ಟು ಅಧಿಕಾರಿಗಳೇ ಕನ್ನಡದ ಹಿನ್ನೆಡೆಗೆ ಮುಖ್ಯ ಕಾರಣರೆಂದು ಹೇಳಬೇಕಾಗುತ್ತದೆ.

ಜಾಗತೀಕರಣದ ಈ ಸಂದರ್ಭದಲ್ಲಿ ಎಲ್ಲಿ ನೋಡಿದರೂ ಇಂಗ್ಲಿಷ್ ಪ್ರಭಾವ ಹೆಚ್ಚುತ್ತಲಿದೆ. ಹಳ್ಳಿಯ ಮಕ್ಕಳಿಗೂ ಡ್ಯಾಡಿ–ಮಮ್ಮಿ ಸಂಸ್ಕೃತಿ ಆಕರ್ಷಕವಾಗಿ ಕಾಣುತ್ತಲಿದೆ. ಕಾನ್ವೆಂಟ್ ಶಾಲೆಗಳಲ್ಲಿ ಓದಿದರೇನೇ ಉದ್ಧಾರವಾಗುವದೆಂದು ಬಹಳಷ್ಟು ಜನ ತಿಳಿದುಕೊಂಡಿದ್ದಾರೆ. ಕನ್ನಡ ಓದದ – ಬರೆಯದ, ಕನ್ನಡವನ್ನು ಅಸಡ್ಡೆಯಿಂದ ಕಾಣುವ ಜನರ ಸಂಖ್ಯೆ ಹೆಚ್ಚಾಗತೊಡಗಿದೆ. ಸರಕಾರಿ ಅಧಿಕಾರಿಗಳಿಗಂತೂ ಕನ್ನಡದ ಬಗೆಗೆ – ಕರ್ನಾಟಕದ ಬಗೆಗೆ ಗೌರವ ಇಲ್ಲದಂತಾಗಿದೆ. ಹೀಗಾಗಿ ಪ್ರತಿಯೊಂದು ಗಡಿಪ್ರದೇಶದಲ್ಲಿ ಕನ್ನಡ ಮಾತನಾಡುವವರ, ಕನ್ನಡದಲ್ಲಿ ಆಡಳಿತ ನಡೆಸುವವರ ಸಂಖ್ಯೆ ಕಡಿಮೆಯಾಗುತ್ತಲಿದೆ. ಬೆಂಗಳೂರಲ್ಲಂತೂ ಕನ್ನಡವನ್ನು ಸಂಶೋಧನೆ ಮಾಡಬೇಕಾದ ಕಾಲ ಬಂದಿದೆ. ಇಂತಹ ಸಂದರ್ಭದಲ್ಲಿ ಜಯತೀರ್ಥ ಪುರೋಹಿತರಂತಹ ಕನ್ನಡದ ಕಟ್ಟಾಳುಗಳು ತುಂಬ ಪ್ರಸ್ತುತರಾಗುತ್ತಾರೆ. ಸ್ವಯಂ ಪ್ರೀತಿಯಿಂದ ಕನ್ನಡವನ್ನು ಕಟ್ಟಿ ಬೆಳೆಸಿದವರಿವರು. ಐ.ಎ.ಎಸ್ ಅಧಿಕಾರಿಗಳಾಗಿದ್ದ ಇವರು ಉಳಿದ ಅಧಿಕಾರಿಗಳಂತೆ ಸರ್ಕಾರದ ಸವಲತ್ತನ್ನು ಅನುಭವಿಸಿ ಹೋಗಬಹುದಿತ್ತು. ಆದರೆ ಇವರು ಹಾಗೆ ಮಾಡಲಿಲ್ಲ. ಕನ್ನಡಕ್ಕಾಗಿ ಕೊನೆಯುಸಿರಿರುವವರೆಗೂ ದುಡಿದರು. ಇಂತವರ ಕನ್ನಡ ಕಟ್ಟಿದ ಈ ಕಾರ್ಯ ಶ್ಲಾಘನೀಯವಾದುದು.

ಜಯತೀರ್ಥರು ಕನ್ನಡ ಕಟ್ಟಿದ ಪ್ರಸಂಗಗಳನ್ನೇ ಈ ಕೃತಿಯಲ್ಲಿ ನಾಲ್ಕು ಉಪ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಮೊದಲನೆಯದು ಆಡಳಿತದಲ್ಲಿ ಕನ್ನಡ ತಂದಿದ್ದು, ಇದು ಬಹು ಮುಖ್ಯವಾದುದು. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗ ಬೇಕೆಂದು ನೂರಾರು ಆದೇಶಗಳು ಶಾಸನ ಸಭೆಗಳಿಂದ ಪಾಸಾಗಿ ಬಂದಿವೆ. ಇಂತಹ ಎಷ್ಟೇ ಆದೇಶಗಳು ಬಂದರೂ ದಪ್ಪ ಚರ್ಮದ ಅಧಿಕಾರಿಗಳಿಂದ ಕನ್ನಡ ಅನುಷ್ಠಾನ ಸರಿಯಾಗಿ ನಡೆಯುತ್ತಿಲ್ಲ. ಆದರೆ ತಮಿಳುನಾಡಿನಲ್ಲಿ ಒಂದೇ ಒಂದು ಸರಕಾರಿ ಆದೇಶವಿಲ್ಲ, ಆದರೂ ಅಲ್ಲಿ ಎಲ್ಲವೂ ತಮಿಳುಮಯ. ತಮಿಳರ ಈ

ಭಾಷಾಭಿಮಾನ ಎಲ್ಲರಿಗೂ ಆದರ್ಶವಾಗಬೇಕು. ತಮಿಳು ಬಳಸದ ಅಧಿಕಾರಿಗಳನ್ನು ಅಲ್ಲಿ ಗಿಡಕ್ಕೆ ಕಟ್ಟಿ ಹೊಡೆಯುತ್ತಾರೆ. ಕನ್ನಡಿಗರು, ಕನ್ನಡ ಬಳಸದ ಅಧಿಕಾರಗಳ ಗುಲಾಮರಂತೆ ವರ್ತಿಸುತ್ತಾರೆ. ಅಂತೆಯೇ ಅಲ್ಲಿ ತಮಿಳು ತಲೆ ಎತ್ತಿ ನಿಂತಿದ್ದರೆ, ಇಲ್ಲಿ ಕನ್ನಡ ತಲೆ ತಗ್ಗಿಸುವಂತಾಗಿದೆ

ಇದುವರೆಗೆ ಬಂದ ಸರಕಾರಗಳು ಕನ್ನಡ ಜಾರಿಗಾಗಿ ಆದೇಶ ಹೊರಡಿಸಿ ಸುಮ್ಮನಾಗಿ ಬಿಟ್ಟಿವೆ. ಆದರೆ ಕನ್ನಡ ಬಳಸದ ಅಧಿಕಾರಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವದಿಲ್ಲ, ಕನ್ನಡಿಗರೂ ಕೂಡ ಆ ಬಗೆಗೆ ತಲೆ ಕೆಡಿಸಿಕೊಳ್ಳುವದಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಜನಪ್ರತಿನಿಧಿಗಳಾದ ಶಾಸಕರಿಗಿಂತ, ಅಧಿಕಾರಿಗಳೇ ದೊಡ್ಡವರಾಗಿ ವಿಜ್ರಂಭಿಸುತ್ತಾರೆ. ಕನ್ನಡದಲ್ಲಿ ಬರೆದುಕೊಟ್ಟ ರೈತನ ಅರ್ಜಿಯನ್ನು ಕಸದ ಬುಟ್ಟಿಗೆ ಒಗೆಯುವ ಇಂತಹ ಅಧಿಕಾರಿಗಳ ವಿರುದ್ಧ ಕನ್ನಡಿಗರು ಸಂಘಟಿತ ಹೋರಾಟವನ್ನೇ ಮಾಡಬೇಕಾದ ಕಾಲ ಬಂದಿದೆ. ಇಂಗ್ಲೀಷ ಅಧಿಕಾರಿಗಳು ಇಂಗ್ಲಂಡ್‌ದಿಂದ ಬಂದು ಇಲ್ಲಿ ಕನ್ನಡವನ್ನು ಕಲಿತು ಕನ್ನಡ ಕಟ್ಟಿದ್ದಾರೆ. ಈ ವಿಷಯವನ್ನು ಜಯತೀರ್ಥರು ಬಹಳ ವಿವರವಾಗಿ ಹೇಳಿದ್ದಾರೆ. ಆದರೆ ಕರ್ನಾಟಕದವರೇ ಆದ ಈ ಅಧಿಕಾರಿಗಳು ಕನ್ನಡ ಬಳಸಲು ಹಿಂದೇಟು ಹಾಕುತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲೂ ಕೂಡ ಕನ್ನಡಕ್ಕೆ ಅಗ್ರಸ್ಥಾನವಿಲ್ಲ. ಇಂದಿಗೂ ಕೂಡ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಈ ಸಂದರ್ಭಧಲ್ಲಿ ಜಯತೀರ್ಥರ ಕನ್ನಡ ಪ್ರೇಮ, ಮತ್ತೆ ಮತ್ತೆ ನೆನಪಾಗುತ್ತದೆ.

ವೃತ್ತಿಯಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಜಯತೀರ್ಥರು ಹವ್ಯಾಸಕ್ಕಾಗಿ ಸಾಹಿತ್ಯರಚನೆಗೆ ತೊಡಗಿದವರು. ಸಾಹಿತ್ಯಕ್ಷೇತ್ರದಲ್ಲಿ ಅವರು ಕಾದಂಬರಿ, ಸಣ್ಣಕತೆ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಗ್ರಂಥ ಸಂಪಾದನೆಯಂತಹ ಅನೇಕ ಕ್ಷೇತ್ರಗಳಲ್ಲಿ ಕೃತಿ ರಚಿಸಿದ್ದರೂ ಕನ್ನಡದ ವಿಮರ್ಶೆ ಅವರನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅವರ ಉಳಿದೆಲ್ಲ ಕೃತಿಗಳಿಗಿಂತ ಅವರು ರಚಿಸಿರುವ "ಕನ್ನಡದ ತೀರ್ಪುಗಳು" ಇಂದು ಬಹಳ ಮುಖ್ಯವಾಗುತ್ತದೆ. ಅದು ಸಾಹಿತ್ಯ ಕೃತಿಯಲ್ಲ, ಆದರೂ ಅವರ ಹೆಸರನ್ನು ಹಸಿರಾಗಿಸುತ್ತದೆ. ಇಂತಹ ಮಾದರಿಗಳನ್ನಿಟ್ಟುಕೊಂಡು ಆತ್ಮ ವಿಮರ್ಶೆ ಮಾಡಿಕೊಳ್ಳುವ ಸಂದರ್ಭ ಇದಾಗಿದೆ.

ಬಹಳಷ್ಟು ಜನರಲ್ಲಿರುವ ಭ್ರಮೆಯೆಂದರೆ ತಾವೂ ಕೃತಿ ರಚಿಸಬೇಕು, ಸಾಹಿತಿಗಳಾಗಬೇಕೆಂಬುದು. ಕವಿ – ಸಾಹಿತಿಗಳಿಗೆ ಮೊದಲಿನಿಂದಲೂ ಗ್ಲ್ಯಾಮರ್ ಇದೆ. ಹೀಗಾಗಿ ಎಲ್ಲರೂ ಆ ಕ್ಷೇತ್ರದತ್ತ ಆಕರ್ಷಿತರಾಗುತ್ತಾರೆ. ಹೀಗೆ ಆಕರ್ಷಿತವಾಗುವದು ತಪ್ಪಲ್ಲ. ಸಾಹಿತ್ಯಕ್ಷೇತ್ರ ಪ್ರವೇಶಿಸಿದ ನಂತರ ಕೆಲವಾದರೂ ಮಹತ್ವದ ಕೃತಿಗಳನ್ನು ಕೊಡುವದಾಗದಿದ್ದರೆ, ಅದರಲ್ಲಿಯೇ ಮುಂದುವರೆಯುವದನ್ನು

ಬಿಟ್ಟು ಕನ್ನಡ ಕಟ್ಟುವ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡುವಂತಾಗಬೇಕು. ಸಾಹಿತ್ಯ ರಚನೆಯೊಂದೇ ದೊಡ್ಡದಲ್ಲ. ಭಾಷೆ ಇಲ್ಲದ ಮೇಲೆ ಸಾಹಿತ್ಯವನ್ನಾರು ಕೇಳುತ್ತಾರೆ. ಕನ್ನಡವೇ ಮಾಯವಾದ ಮೇಲೆ ಕನ್ನಡ ಕೃತಿಗಳನ್ನು ಓದುವವರಾರು? ಈ ಸತ್ಯವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷ ಸ್ಥಾನಕ್ಕೆ ಕೇವಲ ಸಾಹಿತಿಗಳಾದವರನ್ನು ಮಾತ್ರ ಆಯ್ಕೆ ಮಾಡುವದಿಲ್ಲ, ಕನ್ನಡ ಕಟ್ಟಿದ ಮಹನೀಯರನ್ನೂ ಅಧ್ಯಕ್ಷರನ್ನಾಗಿ ಮಾಡಿದ ಅನೇಕ ಉದಾಹರಣೆಗಳಿವೆ. ಇದು ಅತ್ಯಂತ ಸುತ್ಯಾರ್ಹ ಕಾರ್ಯ. ಕನ್ನಡವೆಂದರೆ ಬರೀ ಸಾಹಿತ್ಯವಲ್ಲ, ಅದೊಂದು ಜೀವನ ವಿಧಾನ, ಅದೊಂದು ಸಂಸ್ಕೃತಿ, ಅದು ನೆಲ-ಜಗಳಿಗಾಗಿ, ನಾಡು-ನುಡಿಗಳಿಗಾಗಿ ನಿತ್ಯ ನಿರಂತರವಾಗಿ ನಡೆಸುವ ಹೋರಾಟ. ಅಂತಹ ಹೋರಾಟಗಳಲ್ಲಿ ಪಾಲ್ಗೊಂಡು ಸಾದನೆ ಮಾಡಿದವರಲ್ಲಿ ಪುರೋಹಿತರು ಅಗ್ರಸ್ಥಾನದಲ್ಲಿದ್ದಾರೆ.

ಹೀಗಾಗಿ ಇಲ್ಲಿ ಜಯತೀರ್ಥರ ಸಾಧನೆ ನಿಂತಿರುವುದು ಅವರ ಸಾಹಿತ್ಯ ಕೃತಿಗಳಿಗಿಂತ ಅವರ ಕನ್ನಡ ಕಟ್ಟಿದ ಪ್ರಸಂಗಗಳಲ್ಲಿ; ಅವರ ನಿರಂತರ ಕನ್ನಡ ಹೋರಾಟದಲ್ಲಿ. ಹೈದ್ರಾಬಾದ ಕರ್ನಾಟಕದಲ್ಲಿ ಕುವೆಂಪು - ಬೇಂದ್ರೆಯಂತಹ ಮಹತ್ವದ ಕವಿಗಳು ಬಂದಿರಲಿಕ್ಕಿಲ್ಲ, ಆದರೆ ಇಡೀ ಕರ್ನಾಟಕಕ್ಕೇ ಮಾದರಿಯಾಗಬಲ್ಲ ಕನ್ನಡದ ಕಟ್ಟಾಳುಗಳು ಈ ಪ್ರದೇಶದಲ್ಲಿ ಅನೇಕ ಜನರಿದ್ದಾರೆ. ಇಂತಹವರಿಗೆಲ್ಲ ಸಿದ್ಧಯ್ಯ ಪುರಾಣಿಕ-ಜಯತೀರ್ಥ ರಾಜಪುರೋಹಿತರಂತವರು ಮಾದರಿಯಾಗಿ ದ್ದಾರೆ. ನಿಜಾಮನ ಆಳ್ವಿಕೆಯಲ್ಲಿದ್ದು, ಉರ್ದುವಿನಲ್ಲಿ ಅಭ್ಯಾಸ ಮಾಡಿ, ಕನ್ನಡಕ್ಕಾಗಿ ಜೀವ ಸವೆಸಿದ ಜಯತೀರ್ಥರಂತಹ ಅಧಿಕಾರಿಗಳು ಇಡೀ ಕನ್ನಡಿಗರಿಗೇ ಆದರ್ಶವಾಗಿದ್ದಾರೆ. ನಿಜಾಮನ ಆಳ್ವಿಕೆಯಲ್ಲಿ ಹೊರಗೆ ಉರ್ದು ಶಾಲೆಯ ಬೋರ್ಡ್ ಹಾಕಿ ಒಳಗೆ ಮಕ್ಕಳಿಗೆ ಕನ್ನಡ ಕಲಿಸಿದ ಮಹನೀಯರು ಅನೇಕರಿದ್ದಾರೆ. ಹೀಗಾಗಿ ಜಯತೀರ್ಥರ ಸಾಹಿತ್ಯಕ - ಸಾಂಸ್ಕೃತಿಕ ಸಾಧನೆಗಿಂತ ಅವರು ಕನ್ನಡವನ್ನು ಆಡಳಿತದಲ್ಲಿ ತಂದ ಪರಿಶ್ರಮ ಮುಖ್ಯವೆನಿಸುತ್ತದೆ. ಆ ಕಾರಣಕ್ಕಾಗಿಯೇ ಇಲ್ಲಿ ಆ ಕ್ಷೇತ್ರಕ್ಕೆ ಮಹತ್ವ ನೀಡಲಾಗಿದೆ.

ಕುವೆಂಪು ಅವರು ಪ್ರಾರಂಭದಲ್ಲಿ ಇಂಗ್ಲೀಷ್‌ದಲ್ಲಿ ಕವಿತೆಗಳನ್ನು ಬರೆದರು. ಅವರು ಒಮ್ಮೆ ಐರಿಷ್ ಕವಿಗೆ ತೋರಿಸಿದಾಗ ಅವರು "ಇಂಗ್ಲೀಷ್‌ಗಿಂತ ನಿಮ್ಮ ಮಾತೃಭಾಷೆಯಾದ ಕನ್ನಡದಲ್ಲಿಯೇ ಬರೆಯಬೇಕೆಂದು" ಸಲಹೆ ನೀಡಿದರು. ಆಗಿನಿಂದ ಕುವೆಂಪು ಕನ್ನಡದಲ್ಲಿಯೇ ಬರೆದರು, ಮೇರುಪರ್ವತವಾಗಿ ಬೆಳೆದರು. ಅದೇ ರೀತಿ ಜಯತೀರ್ಥರಿಗೆ ಮೊದಮೊದಲು ಇಂಗ್ಲೀಷ್ ಮೇಲೆಯೇ

ವ್ಯಾಮೋಹವಿತ್ತು. ಇಂಗ್ಲೀಷ ಬರದ ಹೆಂಡತಿಯನ್ನು ನೋಡಿ ಬೇಸರಪಟ್ಟು ಕೊಳ್ಳುತ್ತಿದ್ದರು.

ಅವರ ಪತ್ನಿ ಸೀತಾ ರಾಜಪುರೋಹಿತರು ಈ ವಿಷಯವನ್ನು ಸ್ವತಃ ತಾವು ಬರೆದ ಲೇಖನದಲ್ಲಿ ತಿಳಿಸಿದ್ದಾರೆ. (ನೋಡಿ – ಜಯತೀರ್ಥ ಅಭಿನಂದನ ಗ್ರಂಥ, ಪುಟ. ೧೨೯)

"ನಿನಗೆ ಇಂಗ್ಲೀಷ್ ಬರುವದಿಲ್ಲವಲ್ಲ! ಭಾಷಣ ಮಾಡಲೂ ಬರುವದಿಲ್ಲ. ನೀನೆಂಥ ಆಫೀಸರನ ಹಂಡತಿ?" ಎಂದು ಬೇಸರಪಟ್ಟುಕೊಳ್ಳುವದಲ್ಲದೆ, ಹೆಂಡತಿ ಅಸಮಾಧಾನಗೊಳ್ಳುವಂತೆ ಮಾತನಾಡುತ್ತಿದ್ದರಂತೆ. ಆದರೆ ಸೀತಾ ಅವರು ಎದೆಗುಂದಲಿಲ್ಲ, ಅವರು ಹೀಗೆ ಪ್ರತಿಕ್ರಿಯಿಸುತ್ತಾರೆ.

"ನಾಲ್ಕೋ ಐದೋ ಮಕ್ಕಳೊಂದಿಗೆ ಹಳೆಯ ಕಾಲದ ಹಿರಿಯರಿರುವ ಮನೆಯ ನಿರ್ವಹಣೆಯ ಭಾರ ಹೊರುವ ಪತ್ನಿಗೆ ಇದು ಹೇಗೆ ಸಾಧ್ಯ? ಸಾಧ್ಯವಾದರೂ ಎಲ್ಲ ಗಂಡಸರೂ ಸಹಿಸಿಯಾರೆ? ಇದನ್ನು ಅವರು ಯೋಚಿಸುವದಿಲ್ಲ. ಹಿರಿಯರ ಇಚ್ಛೆಗೆ ವಿರೋಧವಾಗಿ ನಮ್ಮವರೇ ಮದುವೆಯಾದ ನಂತರ ತಮ್ಮ ವಿದ್ಯಾಭ್ಯಾಸ ಪ್ರಾರಂಭಿಸಿದಾಗ, ನಾನು ಮುಂದೆ ಓದುವದು ತಾನೇ ನಿಂತಿತ್ತು. ಆಗ ತಮ್ಮ ಜೊತೆಗೆ ನನ್ನನ್ನೂ ಓದಿಸಿದ್ದರೆ ಬಹುಶಃ ನಮ್ಮವರಿಗೆ ಹೀಗೆ ದೂರುವ ಅವಕಾಶವಿರುತ್ತಿದ್ದಿಲ್ಲ."

"ಅಂತೂ ಈ ಇಂಗ್ಲೀಷ್ ಮೋಹ ನಮ್ಮವರಿಗೆ ಕೆಲದಿನ ಕಾಡಿ ಆಮೇಲೆ ತಾನೇ ಮಾಯವಾಯಿತು. ನಾನೇನು ಮೂಲೆಗುಂಪಾಗಿ ಕೂಡುವಷ್ಟು ಹಳೆಯ ಕಾಲದವಳಾಗಿರಲಿಲ್ಲ. ಅವರು ವಿದ್ಯಾರ್ಥಿಯಾಗಿದ್ದಾಗ ಆಕಾಶವಾಣಿಯಲ್ಲಿ ಬಿತ್ತರಿಸುತ್ತಿದ್ದ ಪ್ರಹಸನಗಳಲ್ಲಿ ಸ್ತ್ರೀಪಾತ್ರ ನಿರ್ವಹಣೆ ನಾನೇ ಮಾಡುತ್ತಿದ್ದೆ." (ನೋಡಿ. ಅದೇ, ಪುಟ. ೧೩೦)

ಸೀತಾ ರಾಜಪುರೋಹಿತರ ಇಂತಹ ನುಡಿಗಳು ರಾಜಪುರೋಹಿತರ ಮೇಲೆ ಗಾಢ ಪರಿಣಾಮವನ್ನುಂಟುಮಾಡಿದವು. ಆಗ ಅವರು ಇಂಗ್ಲೀಷ್ ವ್ಯಾಮೋಹವನ್ನು ಕೈಬಿಟ್ಟು ಕನ್ನಡದ ದೀಕ್ಷೆ ತೊಟ್ಟರು. ಕನ್ನಡದ ಗೋಪಾಲಬುಟ್ಟಿ ಹಿಡಿಯಲಿಕ್ಕೆ ಪತ್ನಿ ಸೀತಾ ಅವರೇ ಮುಖ್ಯ ಕಾರಣರಾದರು ಹಾಗೂ ಪ್ರೇರಣೆಯಾದರು. ಈ ಕಾರಣಕ್ಕಾಗಿಯೇ ಜಯತೀರ್ಥರು ನಮ್ಮವರಾದರು.

"ಮುಖ್ಯವಾಗಿ ನನ್ನ ಪತಿಯ ಭವಿಷ್ಯ ಅಂದರೆ ನನ್ನದೇ ಭವಿಷ್ಯವೆಂಬುದು ಪದೇಪದೇ ನೇನಪಾಗಿ ಅದಕ್ಕೆ ಪೂರಕವಾಗುವಂತೆ ನಾನು ಬಾಳಲು ಹೆಣಗಿದ್ದೇನೆ. ಈ ಹೆಣಗಾಟದ ಶ್ರಮವೆಲ್ಲ ನಮ್ಮವರ ಯಶಸ್ಸಿನ ಕ್ಷಣಗಳನ್ನು ಕಂಡಾಗ, ಅವರ

ಸಂತಸದಲ್ಲಿ ಪಾಲುಗೊಂಡು ಕರಗಿ ಹೋಗಿದ್ದೇನೆ. ಮನೆತುಂಬ ಮಕ್ಕಳು, ಮೊಮ್ಮಕ್ಕಳು, ಹೊರಗೆ ನಮ್ಮವರನ್ನು ಪ್ರೀತಿಯಿಂದ ಕಾಣುವ ಹತ್ತಾರು ಜನ ಒಳ್ಳೆಯ ಸ್ನೇಹಿತರು. ಹಿರಿಯ ಅಧಿಕಾರಿಯೆಂದಲ್ಲ, ಕನ್ನಡದ ಕೆಲಸಗಾರನೆಂದು, ಬರಹಗಾರನೆಂದು, ಇನ್ನೇನು ಬೇಕು? ಯಾಕೆ ಬೇಕು? (ಅದೇ : ಪು. ೧೩೧)

ಸೀತಾ ರಾಜಪುರೋಹಿತರು ಹೆಚ್ಚು ಓದದಿದ್ದರೇನಂತೆ, ಜಯತೀರ್ಥರಂತಹ ಯುವಕನನ್ನು ಓದಲು ಹಚ್ಚಿ ದೊಡ್ಡ ಅಧಿಕಾರಿಯಾಗುವಂತೆ ಮಾಡಿದವರು. ಅವರಲ್ಲಿ ಇಂಗ್ಲೀಷ್ ವ್ಯಾಮೋಹ ಉಂಟಾದಾಗ, ಕನ್ನಡದ ಮಹತ್ವವನ್ನು ತಿಳಿಸಿಹೇಳಿದರು. ಹಾಗೆ ನೋಡಿದರೆ ಸೀತಾ ಅವರನ್ನು ಜಯತೀರ್ಥರು ಮದುವೆಯಾಗದಿದ್ದರೆ, ಅವರು ಮುಂದೆ ಓದುತ್ತಿರಲಿಲ್ಲ, ಅಧಿಕಾರಿಯಾಗುತ್ತಿರಲಿಲ್ಲ. ಇದಕ್ಕೆಲ್ಲ ಸೀತಾ ಹಾಗೂ ಅವರ ತಂದೆ ಪ್ರೊ. ರಾಮಚಂದ್ರರಾವ್ ಪಟವಾರಿಯವರು ಮುಖ್ಯ ಕಾರಣರಾಗಿದ್ದಾರೆ. ಹೀಗಾಗಿ ಜಯತೀರ್ಥರ ಈ ಸಾಧನೆಯ ಹಿಂದೆ ಸೀತಾ ಅವರಿದ್ದರು. ಇದು ಜಯತೀರ್ಥರ ಜೀವನದಲ್ಲಿ ಮರೆಯಲಾರದ ಸಂಗತಿಯಾಗಿದೆ.

ಜಯತೀರ್ಥರ ಬದುಕಿನಲ್ಲಿ ಅನೇಕ ಮಹತ್ವದ ತಿರುವುಗಳು ಬಂದಿವೆ. ಇವರು ಜಮೀನ್ದಾರಿ ಮನೆತನದಲ್ಲಿ ಹುಟ್ಟಿದ್ದರೂ ನಿರುದ್ಯೋಗದ ಬಿಸಿಯನ್ನನುಭವಿಸ ಬೇಕಾಯಿತು. ಸಂಪ್ರದಾಯಸ್ಥ ಮನೆತನ, ಸ್ವಲ್ಪು ತಪ್ಪಿದರೂ ತಂದೆ ಹೊಡೆಯುತ್ತಿದ್ದರು. ಜಯತೀರ್ಥರ ಮುಂದಿನ ಅಭ್ಯಾಸಕ್ಕೆ ಮನೆಯವರೇ ಅಡ್ಡಗಾಲಾಗಿದ್ದರು. ಇವರ ಅಜ್ಜಿಯಂತೂ ಸಂಪ್ರದಾಯದ ಮಹಿಳೆ; ಮನೆತನದ ಮಾಲಕಳು ಆಕೆ. ಆಕೆಗೆ ಮೊಮ್ಮಗ ಓದುವುದು, ಕ್ರಾಪ್ ಬಿಡುವುದು ಖಂಡಿತಾ ಹಿಡಿಸುತ್ತಿರಲಿಲ್ಲ. ಅಂತಹ ಮಡಿವಂತಿಕೆಯ ವೈದಿಕ ಮನೆತನದಲ್ಲಿ ಹುಟ್ಟಿದ ಜಯತೀರ್ಥರು ಪ್ರಗತಿಪರರಾಗಿ ಬೆಳೆದು ನಿಂತದ್ದು ಮತ್ತೊಂದು ಆಶ್ಚರ್ಯ.

ಅಪ್ಪನ ಆಸೆ, ಮಗ ಸಂಸ್ಕೃತ ಪಂಡಿತನಾಗಬೇಕೆಂಬುದು, ಮನೆತನದ ಪೌರೋಹಿತ್ಯ ನೋಡಿಕೊಳ್ಳಬೇಕೆಂಬುದು. ಅಂತಯೇ ಕೊಪ್ಪಳಕ್ಕೆ ಹುಲಗಿ ಹುಚ್ಚಾಚಾರ್ಯರಲ್ಲಿ ಸಂಸ್ಕೃತ ಕಲಿಯಲು, ವೇದಾಂತ ತಿಳಿದುಕೊಳ್ಳಲು ಕಳಿಸಿದ್ದರು. ಆದರೆ ಮಗ ಸಂಸ್ಕೃತ ಬಿಟ್ಟು ಕನ್ನಡದ ಕಟ್ಟಾಳುವಾಗಿ ಬೆಳೆದ. ಇದು ಅವರಲ್ಲಾದ ಮತ್ತೊಂದು ಮಹತ್ತರ ಬೆಳವಣಿಗೆ. ರಾಜಪುರೋಹಿತ್ಯವನ್ನು ತೊರೆದು – ಕನ್ನಡ ಪುರೋಹಿತರಾದದ್ದು ಜಯತೀರ್ಥರ ಬದುಕಿನ ಬಹು ದೊಡ್ಡ ತಿರುವು.

ತಂದೆಯ ಮಾತು ಕೇಳಿಕೊಂಡು ಪುರೋಹಿತ ಕೆಲಸದಲ್ಲಿ ನಿರತರಾಗಿದ್ದರೆ, ಜಯತೀರ್ಥರು ಏನೂ ಆಗುತ್ತಿರಲಿಲ್ಲ. ಸ್ವಲ್ಪ ವರ್ಷಗಳು ಗತಿಸಿದ ನಂತರ ಇವರ

ಪೌರೋಹಿತ್ಯವನ್ನು ಕೇಳುವವರು ಯಾರೂ ಇರುತ್ತಿರಲಿಲ್ಲ. ಪ್ರೊ. ರಾಮಚಂದ್ರ ಪಟವಾರಿಯವರು, ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರಿಂದ, ಜಯತೀರ್ಥರಿಗೆ ಹೊಸ ದಾರಿಗಳು ಕಾಣಿಸಿದವು. ಹೀಗೆ ಪೌರೋಹಿತ್ಯ ಬಿಟ್ಟು, ಸಂಸ್ಕೃತವನ್ನು ಬಿಟ್ಟು, ಸಂಪ್ರದಾಯವನ್ನು ಬಿಟ್ಟು, ಕರ್ಮಟತನವನ್ನು ಬಿಟ್ಟು ಹೊಸ ದಾರಿಗಳನ್ನು ಹುಡುಕಿಕೊಳ್ಳಲು ಇವರ ತಂದೆ-ತಾಯಿಗಳಿಗಿಂತ, ಇತರ ಬಂಧುಗಳೇ ಪ್ರೇರಣೆಯಾದರು. ಹೀಗೆ ರಾಜಮಾರ್ಗದಿಂದ ಜನಮಾರ್ಗದ ಕಡೆಗೆ ಸಾಗಿದ ಜಯತೀರ್ಥರ ಜೀವನಗಾಥೆ ಕುತೂಹಲಕಾರಿ ಯಾದುದಾಗಿದೆ. ಸುತ್ತಲೂ ಸಂಪ್ರದಾಯ ಮನಸ್ಸುಗಳೇ ತುಂಬಿರುವಾಗ, ಅದರಿಂದ ಹೊರಗೆ ಬರುವುದು ತುಂಬ ಕಷ್ಟದ ಕೆಲಸ. ತಂದೆ-ಅಜ್ಜಿಯನ್ನು ವಿರೋಧಿಸಿ, ಬಂಧು ಬಳಗದ ಮಾತು ಕೇಳದೆ ಅಂದಿನ ಕಾಲದಲ್ಲಿ ಚಳುವಳಿಯಲ್ಲಿ ತೊಡಗುವುದು, ಬೇರೆ ರೀತಿಯಿಂದ ಆಲೋಚನೆ ಮಾಡುವುದು ಸಾಧ್ಯವಾಗದಂತಹ ಕಾರ್ಯ. ಆದರೆ ಜಯತೀರ್ಥರು ಈ ಎಲ್ಲ ವಿರೋಧಗಳ ನಡುವೆಯೂ ಬೆಳೆದು ನಿಂತರು. ಜೀವನದ ಜಂಜಾಟಗಳನ್ನು ಗೆದ್ದು ಜಯಗಳಿಸಿ, ಎಲ್ಲರಿಗೂ ಕನ್ನಡದ ತೀರ್ಥವನ್ನು ಕೊಟ್ಟು ಹೋದರು. ಇದು ಸಣ್ಣ ಮಾತಲ್ಲ. ಇಂದಿನ ಎಲ್ಲ ಕನ್ನಡ ಕಡತಗಳ ಹಿಂದೆ ಜಯತೀರ್ಥರಿದ್ದಾರೆ.

■

# ೮ ಅನುಬಂಧ

೧) ಪ್ರಶಸ್ತಿ ಪತ್ರಗಳು

೨) ಪ್ರಕಟಿತ ಕೃತಿಗಳು

೩) ಪ್ರಕಟಿತ ಲೇಖನಗಳು

# ಅನುಬಂಧ – ೧

ಪ್ರಶಸ್ತಿ ಪತ್ರಗಳು

ಕರ್ನಾಟಕ ಸರ್ಕಾರ
'ಕನ್ನಡ ತೀರ್ಪುಗಳು' ಗ್ರಂಥಕರ್ತ
ಶ್ರೀ ಜಯತೀರ್ಥ ರಾಜಪುರೋಹಿತ ಅವರಿಗೆ
ವಿಶೇಷ ಪ್ರಶಸ್ತಿ

ರಾಜ್ಯ ಸರ್ಕಾರದ ಆಡಳಿತ ಭಾಷಾ ನೀತಿಯನ್ನು ಜಾರಿಗೆ ತರುವಲ್ಲಿ ಶ್ರೀ ಜಯತೀರ್ಥ ರಾಜಪುರೋಹಿತರವರು ಮಹತ್ವಪೂರ್ಣವಾದ ಮತ್ತು ಮೌಲಿಕವಾದ ಕಾರ್ಯವನ್ನು ಸಾಧಿಸಿದ್ದಾರೆ. ನ್ಯಾಯಾಲಯಗಳಲ್ಲಿ ರಾಜ್ಯದ ರಾಜಭಾಷೆಯನ್ನು ಬಳಸುವುದರ ವಿಷಯದಲ್ಲಿ ಸರ್ಕಾರದವರು ಕೊಟ್ಟ ಕರೆಗೆ ಓಗೊಟ್ಟು ೧೯೭೪ರಷ್ಟು ಹಿಂದೆಯೇ ಅವರು ಕನ್ನಡದಲ್ಲಿ ಪ್ರಥಮ ತೀರ್ಪು ನೀಡಿ ಚರಿತ್ರಾರ್ಹವಾದ ಹೆಜ್ಜೆ ಇಟ್ಟಿದ್ದಾರೆ. ಅವರು ಚಿತ್ರದುರ್ಗ ಜಿಲ್ಲೆಯ ವಿಶೇಷ ಡೆಪ್ಯೂಟಿ ಕಮೀಷನರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಮೂಲತಃ ಕನ್ನಡದಲ್ಲಿ ಬರೆದು ನೀಡಿದ ತೀರ್ಪುಗಳಲ್ಲಿ ೫೦ ತೀರ್ಪುಗಳನ್ನು ಆಯ್ದು 'ಕನ್ನಡ ತೀರ್ಪುಗಳು' ಎಂಬ ಹೆಸರಿನಿಂದ ಮೈಸೂರು ವಿಶ್ವವಿದ್ಯಾನಿಲಯದವರು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಗ್ರಂಥವು ದೇಶದಲ್ಲಿಯೇ ಇನ್ನಾವ ಭಾಷೆಯಲ್ಲಿಯೂ ಇಲ್ಲದ ಅದ್ವಿತೀಯ ಕೊಡುಗೆಯಾಗಿದೆ ಯೆಂದು ಕೇಂದ್ರ ರಾಜ ಭಾಷಾ ಆಯೋಗದವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಮುಂದೆ ನ್ಯಾಯಾಲಯಗಳಲ್ಲಿ ತೀರ್ಪುಗಳನ್ನು ಮತ್ತು ಆದೇಶಗಳನ್ನು ಬರೆಯುವವರಿಗೆ ಇದು ಒಂದು ಮಾರ್ಗದರ್ಶಕ ಉಲ್ಲೇಖ ಗ್ರಂಥವಾಗುವುದೆಂದು ಭಾವಿಸಲಾಗಿದೆ.

ಶ್ರೀ ಜಯತೀರ್ಥ ರಾಜಪುರೋಹಿತರವರು ಸಾಧಿಸಿದ ಈ ಅಪೂರ್ವವಾದ ಕಾರ್ಯಕ್ಕೆ ಮನ್ನಣೆ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿತ್ತು. ಸರ್ಕಾರದವರು ಈ ವಿಷಯವನ್ನು ರಾಜ್ಯ ಅಧಿಕಾರಿ ಮಟ್ಟದ ಕನ್ನಡ ಅಭಿವೃದ್ಧಿ ಸಮಿತಿಯವರು ರಚಿಸಿದ ಕಾನೂನು ಇಲಾಖೆಯ ಅಡಿಷನಲ್ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಂದೀಶ್ವರ್ ಅವರು ಅಧ್ಯಕ್ಷರಾಗಿದ್ದ ಉಪಸಮಿತಿಯೊಂದಕ್ಕೆ ಪರಿಶೀಲನೆಗೆ ಒಪ್ಪಿಸಿದರು.

ಕನ್ನಡ ಭಾಷೆಯಲ್ಲಿ ಇದು ಈ ಬಗೆಯ ಪ್ರಥಮ ಗ್ರಂಥವಾಗಿದೆ. ಇತರ ಯಾವ ಭಾಷೆಯಲ್ಲಿಯೂ ಇಂಥ ಗ್ರಂಥಗಳು ಇಲ್ಲ. ಈ ಲೇಖಕರು ಆಡಳಿತ ಗಾರರಾಗಿ ತಮ್ಮ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುತ್ತಲೇ ಇಂಥ ಒಂದು ವಿದ್ವತ್‌ಪೂರ್ಣವಾದ ಮತ್ತು ಅತ್ಯುಪಯುಕ್ತವಾದ ಕೃತಿ ರಚನೆಯನ್ನು ಸಾಧಿಸಿದುದಕ್ಕಾಗಿ ಅವರು ಅತ್ಯಂತ ಅಭಿನಂದನೀಯರಾಗಿದ್ದಾರೆ. ಅವರಿಗೆ ಇದಕ್ಕಾಗಿ ಯೋಗ್ಯ ಪ್ರೋತ್ಸಾಹ ದೊರೆಯಲೇಬೇಕು ಮತ್ತು ಈ ದೃಷ್ಟಿಯಿಂದ ಶ್ರೀ ಜಯತೀರ್ಥ ರಾಜಪುರೋಹಿತರಿಗೆ ವಿಶೇಷ ರಾಜ್ಯ ಪ್ರಶಸ್ತಿಯನ್ನು ಸೂಕ್ತವಾದ ಫಲಕದೊಂದಿಗೆ ನೀಡಬೇಕೆಂದು ಈ ವಿಷಯವನ್ನು ಪರಿಶೀಲಿಸಿದ ಉಪಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಉಪಸಮಿತಿಯ ಶಿಫಾರಸ್ಸನ್ನು ಕೂಲಂಕಷವಾಗಿ ಪರ್ಯಾಲೋಚಿಸಿ ಕರ್ನಾಟಕ ಸರ್ಕಾರವು ಮಂಜೂರು ಮಾಡಿದ ಪ್ರಕಾರ 'ಕನ್ನಡ ತೀರ್ಪುಗಳು' ಗ್ರಂಥದ ಲೇಖಕರಾದ ಶ್ರೀ ಜಯತೀರ್ಥ ರಾಜಪುರೋಹಿತರಿಗೆ ವಿಶೇಷ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಎನ್. ನರಸಿಂಹರಾವ್
ಬೆಂಗಳೂರು
ಮುಖ್ಯ ಕಾರ್ಯದರ್ಶಿ,
ದಿನಾಂಕ : ೨೫.೧೦.೧೯೭೭

ಕರ್ನಾಟಕ ಸರ್ಕಾರ.

(ಆದೇಶ : ಕ್ರಮಾಂಕ : ಇಡಿ:೧೧:ಎಂ.ಎಲ್.ಸಿ:೭೭ ದಿಂನಾಕ : ೨-೯-೭೭)

ಕರ್ನಾಟಕ ಸಾಹಿತ್ಯ ಅಕಾಡೆಮಿ

## ಗೌರವ ಪ್ರಶಸ್ತಿ - ೧೯೭೮

ಶ್ರೀ ಜಯತೀರ್ಥ ರಾಜಪುರೋಹಿತ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅವರಿಗೆ ನಟರಾಜ ವಿಗ್ರಹ, ಕಾಶ್ಮೀರೀ ಶಾಲು ಮತ್ತು ಐದು ಸಾವಿರ ರೂಪಾಯಿಗಳ ಹಮ್ಮಿಣಿ ನೀಡಿ ಗೌರವಿಸಿದ ಸಂದರ್ಭದಲ್ಲಿ ನೀಡಿದ

**ಪ್ರಶಸ್ತಿ ಪತ್ರ**

**ಅನಿರುದ್ಧ ದೇಸಾಯಿ**

**ಡಾ. ಎಂ. ಶಿವರಾಮ್,**

**ಅಕಾಡೆಮಿಗಳ ರಿಜಿಸ್ಟಾರ್, ಹಾಗೂ**
ಅಧ್ಯಕ್ಷರು,

**ನಿರ್ದೇಶಕರು, ಕನ್ನಡ ಮತ್ತು**
ಕರ್ನಾಟಕ ಸಾಹಿತ್ಯ ಅಕಾಡೆಮಿ.

**ಸಂಸ್ಕೃತಿ ಇಲಾಖೆ.**

**ಗೋವಿಂದನಾರಾಯಣ,**

**ಕರ್ನಾಟಕ ರಾಜ್ಯದ ರಾಜ್ಯಪಾಲರು,**
ಬೆಂಗಳೂರು.

## ಅನುಬಂಧ - ೨

**ಜಯತೀರ್ಥ ರಾಜಪುರೋಹಿತರ ಕೃತಿಗಳು**

ಪ್ರಕಟಿತ ಕೃತಿಗಳ ವಿವರ

**ಕಾದಂಬರಿಗಳು**

೧. ಹಾಲು ಜೇನು

೨. ಸುಳಿ ಗಾಳಿ

೩. ಜೊಹರಾ

೪. ಕಡಲ ತೋಳ (ಅನುವಾದ)

**ಸಣ್ಣ ಕಥೆಗಳು** (ಸಂಗ್ರಹಗಳು)

೧. ಪಾರವ್ವನ ಪಂಚಾಯಿತಿ

೨. ರೋಹಿಣಿ

೩. ಮೌಲ್ಯಗಳು

೪. ಶಿಥಿಲ ಶಿಲೆ (ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ ತರಗತಿಗೆ ಪಠ್ಯಪುಸ್ತಕವಾಗಿತ್ತು)

**ನಾಟಕ**

೧. ತುಂಗೆಯಂಗಳದಲ್ಲಿ (ಗೀತ ರೂಪಕ)

೨. ಕುಮಾರವ್ಯಾಸ

೩. ಜಯ ಬಂಗ್ಲಾ

**ಪ್ರಬಂಧ**

೧. ಅಧ್ಯಯನದ ಹಾದಿಯಲ್ಲಿ – ೧೯೮೦ ಕನ್ನಡ ಸಾಹಿತ್ಯ ಸಘ, ಕಲಬುರ್ಗಿ

ಜೀವನ ಚರಿತ್ರೆ

೧. ವ್ಯಾಸರಾಯರು (ಪ್ರಸಾರಾಂಗ, ಮೈಸೂರು)

೨. ಜಗನ್ನಾಥ ದಾಸರು (ಐಬಿಎಚ್ ಪ್ರಕಾಶನ)

೩. ಸುರಪುರದ ಶೂರನಾಯಕರು (ಐಬಿಎಚ್ ಪ್ರಕಾಶನ)

೪. ಸ್ವಾಮಿ ರಾಮತೀರ್ಥ (ಭಾರತ-ಭಾರತಿ ಪುಸ್ತಕ ಸಂಪಕ ಹಿಂದಿ-ಇಂಗ್ಲಿಷ್‌ನಲ್ಲಿ.)

೫. ಕೃಷ್ಣದೇವರಾಯ (ಭಾರತ ಭಾರತಿ ಪುಸ್ತಕ ಸಂಪದ)

೬ ಕನಕಗಿರಿ (ಚರಿತ್ರೆ : ಐಬಿಎಚ್ ಪ್ರಕಾಶನ)

ಇತರ

೧. ಕನ್ನಡ ತೀರ್ಪುಗಳು

(ಪ್ರಪ್ರಥಮ ಕನ್ನಡ ನ್ಯಾಯಲಯ ತೀರ್ಪನ್ನೊಳಗೊಂಡ ಮೌಲಿಕ ಗ್ರಂಥ. ವಿಶೇಷ ರಾಜ್ಯ ಪ್ರಶಸ್ತಿ ಸಂಪಾದಿಸಿದ ಕೃತಿ. (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ)

೨. (ಅ) ಆಡಳಿತದಲ್ಲಿ ಕನ್ನಡ (ಪ್ರಬಂಧ-ಮೈಸೂರಿನ ಆಡಳಿತ ತರಬೇತು ಸಂಸ್ಥೆಯ ಪ್ರಕಟಣೆ)

(ಬ) Kannada in Administration.

ಸಂಪಾದಿತ ಕೃತಿಗಳು

೧. ತುಂಗಾ ತರಂಗ (ಇತರರೊಡನೆ) ವಾರ್ತಾ ಇಲಾಖೆ ಪ್ರಕಟಣೆ

೨. ಕಚೇರಿ ಕೈಪಿಡಿ (ಇತರರೊಡನೆ) ಮೈಸೂರು, ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆ

೩. ಪಂಪಾಸಂಪದ (ಇತರರೊಡನೆ) ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮಿತಿ ಪ್ರಕಟಣೆ

೪. ಪಂಪಾ ತುಂತುರು (ಇತರರೊಡನೆ) ಬಳ್ಳಾರಿ ಜಿಲ್ಲಾ ಸಹಿತ್ಯ ಸಮಿತಿ ಪ್ರಕಟಣೆ

೫. ಆಡಳಿತ ಭಾಷಾ ಸಮಸ್ಯೆಯ ವಿಶ್ಲೇಷಣೆ (ಇತರರೊಡನೆ) ಕನ್ನಡ ಮತ್ತು ಸಂಸ್ಕೃತಿಯ ಇಲಾಖೆ ಪ್ರಕಟಣೆ

೬. ಬಹುಮಾನಿತ ಕನ್ನಡ ತೀರ್ಪುಗಳು (ಇತರರೊಡನೆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ

೭. Official Language Problems Analysed

**ಪ್ರಬಂಧಗಳು, ಬಿಡಿ ಲೇಖನಗಳು**

(ಸುಮಾರು ೪೫ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಪ್ರಕಟಗೊಂಡ ವಿವಿಧ ವಿಷಯಗಳಿಗೆ ಸಂಬಂಧಿಸಿದ ಬಿಡಿ ಲೇಖನಗಳು.)

# ಅನುಬಂಧ – ೩

## ಪ್ರಕಟಿತ ಲೇಖನಗಳು

ಜಯತೀರ್ಥ ರಾಜಪುರೋಹಿತರ ಕೆಲವು ಬಿಡಿ ಲೇಖನಗಳು

| ಲೇಖನದ ಹೆಸರು | ಪ್ರಕಟವಾದ ಪತ್ರಿಕೆಯ ಹೆಸರು ಮತ್ತು ಪ್ರಕಟಿತ ವರ್ಷ |
|---|---|
| ೧. ಲಂಚವು ನಾಮಶೇಷವಾಗುವುದೇ? | ಪ್ರಜಾ – ಹೈದ್ರಾಬಾದ್ – ೧೯೪೫ |
| ೨. ಆಡಳಿತದಲ್ಲಿ ದಕ್ಷತೆ ಏಕಿಲ್ಲ? | ಕಸ್ತೂರಿ – ಹುಬ್ಬಳ್ಳಿ – ೧೯೬೨ |
| ೩. ಎ.ಆರ್. ಕೃಷ್ಣಶಾಸ್ತ್ರಿಗಳ ಮಾನವೀಯತೆ | ಸಂಯುಕ್ತ ಕರ್ನಾಟಕ |
| ೪. ಅಶಾಂತ ಪೀಳಿಗೆ | ಸುಧಾ – ಯುಗಾದಿ ಸಂಚಿಕೆ – ೧೯೭೦ |
| ೫. ವಿಜಯನಗರ ಕಾಲದಲ್ಲಿ ನವರಾತ್ರಿ | ಸುಧಾ, ೨೭.೯.೧೯೭೦ |
| ೬ ಸಾವಿನ ಸಮಾಲೋಚನೆ | ಕರ್ಮವೀರ. ೮.೧೨.೬೮ |
| ೭ ಗೊರಕೆ | ಕರ್ಮವೀರ.೧೭.೩.೬೮ |
| ೮. ಸತಿಯಲ್ಲದ ಸವತಿ | ಕರ್ಮವೀರ, ೧೯–೧೧–೧೯೬೧ |
| ೯. ಪ್ರಾಚೀನ ಭಾರತದಲ್ಲಿ ಭೂಸ್ವಾಮ್ಯ | ಉದಯವಾಣಿ–ದೀಪಾವಳಿ ಸಂಚಿಕೆ–೧೯೭೨ |
| ೧೦. ಆಡಳಿತ ಭಾಷೆ | ಕನ್ನಡ ನುಡಿ (ಮಂಡ್ಯ ಸಾಹಿತ್ಯ ಸಮ್ಮೇಳನ ಭಾಷಣ) ೧೯೭೪ |

| | | |
|---|---|---|
| ೧೧.ನಾಟಕ ಪ್ರೇಕ್ಷಕ | ಜೀವನ ವಿಕಾಸ, ಕಲಬುರ್ಗಿ | |
| ೧೨. ಎಲ್ಲ ಕ್ಷೇತ್ರಗಳಲ್ಲಿ ಕನ್ನಡದ ಬಳಕೆ | ಕನ್ನಡ ನುಡಿ (ವಜ್ರಮಹೋತ್ಸವ ಭಾಷಣ) | |
| ೧೩. ವಿಮರ್ಶೆಯ ಪೂರ್ವ ಪಶ್ಚಿಮ | ಕರ್ಮವೀರ (ರಾಯಚೂರು ಜಿಲ್ಲಾ ಸಾಹಿತ್ಯ ಸಮ್ಮೇಳನ ಭಾಷಣ) | |
| ೧೪. ವಿಜಯನಗರದ ಹಜಾಮರು ಕರ್ಮವಿರ ೧-೧೧-೧೯೭೦ | ಪ್ರಬುದ್ಧ ಕರ್ನಾಟಕ ಮತ್ತು ಕನ್ನಡ ವಿಶ್ವಕೋಶ ಸಂ. ೭ | |
| ೧೫. ಜಯವೇಂಕಟಾಚಾರ್ಯರು | ಕನ್ನಡ ವಿಶ್ವಕೋಶ (ಸಂ. ೬ ಪು ೯೨) | |
| ೧೬. ಗಣೇಕಲ್ ಸಂಗವಿಭು | " | ಸಂ. ೭ ಪು. ೩೦೨ |
| ೧೭. ಚಾರ್ವಾಕ ಸಿದ್ಧಾಂತ | " | ಸಂ. ೭ |
| ೧೮. ರಮಾನಂದ ಚಟರ್ಜಿ | " | " |
| ೧೯. ಕಮಲಾದೇವಿ ಚಟ್ಟೋಪಾಧ್ಯಾಯ | " | " |
| ೨೦. ಚಿಂಚೋಳಿ | " | " |
| ೨೧. ಚೀಕಲ ಪರವಿ | " | " |
| ೨೨. ಚುನಾವಣೆ | " | " |
| ೨೩. ಚಳ್ಳಗುರ್ತಿ | " | " |
| ೨೪. ಜೋಸೆಫ್ ಚೇಂಬರ್ಲೆನ್ | " | " |